# ಆಟಿಕೆ

## ಅನುಬಂಧ

---

### ಆಟದ ದೋಣಿ [3+]

ಚಟುವಟಿಕಾ ಕಾರ್ಡುಗಳ ವಿನಿಮಯ ಸಹಾಯಿ

ಕೇರಳ ಸರಕಾರ

ಶಿಕ್ಷಣ ಇಲಾಖೆ

ತಯಾರಿಸಿದವರು

**ರಾಜ್ಯ ವಿದ್ಯಾಭ್ಯಾಸ ಸಂಶೋಧನೆ ಮತ್ತು ತರಬೇತಿ ಸಂಸ್ಥೆ [SCERT]**

ವಿದ್ಯಾಭವನ್, ಪೂಜಪ್ಪುರ, ತಿರುವನಂತಪುರ – 695012

Phone : 0471-2341883, 2340323, E-Mail – scertkerala@gmail.com

Prepared by :
State Council of Educational Research & Training [SCERT]
Poojappura, Thiruvananthapuram – 12, Kerala.
E-Mail : scertkerala@gmail.com

Type Setting by :
SCERT Computer Lab

Copy right :
Government of Kerala
Education Department
2018

## ಅಧ್ಯಾಪಕರಲ್ಲಿ,

ಆಟಗಳ ಮೂಲಕವೂ, ಮೂರ್ತ ಹಾಗೂ ಪರಿಚಿತವಾದ ವಸ್ತುಗಳ ಮತ್ತು ಘಟನೆಗಳ ಆಧಾರದಲ್ಲಿ ಲಭಿಸುವ ಅನುಭವಗಳ ಮೂಲಕ ಸಾಮರ್ಥ್ಯ ಹಾಗೂ ಮೌಲ್ಯಗಳನ್ನು ಬೆಳೆಸುವುದಕ್ಕೆ ಪ್ರಿ ಸ್ಕೂಲ್ ಗಳಲ್ಲಿ ಪ್ರಾಧಾನ್ಯತೆಯನ್ನು ನೀಡಬೇಕಾಗಿದೆ.

ಮಕ್ಕಳಲ್ಲಿರುವ ವ್ಯಕ್ತಿ ವ್ಯತ್ಯಾಸಗಳು, ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಅಂತರಗಳು ಸಮಾಜದಲ್ಲಿ ಸಂಭವಿಸುತ್ತಿರುವ ಕಾಲೋಚಿತವಾದ ಬದಲಾವಣೆಗಳು, ಮೊದಲಾದುವುಗಳನ್ನು ಪರಿಗಣಿಸಿಕೊಂಡು ರಾಜ್ಯ ವಿದ್ಯಾಭ್ಯಾಸ ಸಂಶೋಧನೆ ಮತ್ತು ತರಬೇತಿ ಸಂಸ್ಥೆಯು ಪ್ರಿಸ್ಕೂಲ್ ಪಠ್ಯಕ್ರಮ, ಪ್ರಿಸ್ಕೂಲ್ ಅಧ್ಯಾಪಕ ಕೈಪಿಡಿಯಾದ **'ಆಟಿಕೆ'** ಯನ್ನು ತಯಾರಿಸಿದೆ.

ದೈಹಿಕ ಚಲನಾತ್ಮಕ ವಿಕಾಸ, ಭಾಷಾ ವಿಕಾಸ, ವೈಜ್ಞಾನಿಕ ವಿಕಾಸ, ಸಾಮಾಜಿಕ ಭಾವನಾತ್ಮಕ ವಿಕಾಸ, ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ ಮೊದಲಾದ ಐದು ವಿಕಾಸ ಮಂಡಲಗಳಲ್ಲಾಗಿ 87 ಸಾಮರ್ಥ್ಯಗಳನ್ನು 4 ವರ್ಷ ಪ್ರಾಯವಾಗುವುದರೊಳಗಾಗಿ ಮಗುವು ಗಳಿಸಿರಬೇಕು ಎಂಬ ಗುರಿಯೊಂದಿಗೆ ಪ್ರಿಸ್ಕೂಲ್ ಚಟುವಟಿಕೆಗಳನ್ನು ಆಯೋಜಿಸಲಾಗಿದೆ. ಸಾಮರ್ಥ್ಯಗಳನ್ನು ಬೆಳೆಸುವುದಕ್ಕಾಗಿ ಮಗುವಿನ ಪರಿಚಿತ ಪರಿಸರಕ್ಕೆ ಸಂಬಂಧಿಸಿದ ಮೂವತ್ತು ಥೀಂಗಳನ್ನು ಆಧಾರವಾಗಿರಿಸಿ, ಚಟುವಟಿಕಾನುಭವಗಳನ್ನು ಅಧ್ಯಾಪಿಕೆ ಸಿದ್ಧಪಡಿಸಬೇಕಾಗಿದೆ. ತರಗತಿ ಚಟುವಟಿಕೆಗಳನ್ನು ಆಯೋಜಿಸಲಿರುವ ಸಹಾಯಕ ಸಾಮಗ್ರಿಯಾಗಿ **'ಆಟಿಕೆ'** ಎಂಬ ಪ್ರಿಸ್ಕೂಲ್ ಅಧ್ಯಾಪಕ ಕೈಪಿಡಿಯನ್ನು ತಯಾರಿಸಲಾಗಿದೆ.

ಪ್ರಿಸ್ಕೂಲ್ ಪಠ್ಯಕ್ರಮದ ಹಾಗೂ ಅಧ್ಯಾಪಕ ಕೈಪಿಡಿಯಾದ **'ಆಟಿಕೆ'**ಯ ಆಧಾರದಲ್ಲಿ, ಪ್ರಿಸ್ಕೂಲ್ ಮಕ್ಕಳಿಗಾಗಿ [3+,4+] ಆಟದ ದೋಣಿ ಎಂಬ ಹೆಸರಿನಲ್ಲಿ ಚಟುವಟಿಕಾ ಕಾರ್ಡುಗಳನ್ನು ತಯಾರಿಸಲಾಗಿದೆ. ಕೈಪಿಡಿಯು ತರಗತಿಯಲ್ಲಿ ಈ ಕಾರ್ಡುಗಳನ್ನು ವಿನಿಮಯ ಮಾಡುವುದಕ್ಕಿರುವ ಸಹಾಯಕ ಸಾಮಗ್ರಿಯಾಗಿದೆ. ಸ್ವಂತವಾಗಿ ಚಟುವಟಿಕೆಗಳನ್ನು ರೂಪೀಕರಿಸುವುದಕ್ಕೂ, ಚಟುವಟಿಕಾ ಕಾರ್ಡುಗಳನ್ನು ತಯಾರಿಸುವುದಕ್ಕೂ ಅಧ್ಯಾಪಿಕೆಗೆ ಸ್ವಾತಂತ್ರ್ಯವಿದೆ. ಈ ಕೈಪಿಡಿಯನ್ನು ಫಲಪ್ರದವಾಗಿ ಉಪಯೋಗಿಸುವಿರಲ್ಲವೇ?

ಶುಭಾಶಯಗಳೊಂದಿಗೆ,

**ಡಾ. ಜೆ. ಪ್ರಸಾದ್**

**ಡೈರೆಕ್ಟರ್**

# ಆಟದ ದೋಣಿ

## ವರ್ಕ್ ಶೀಟುಗಳನ್ನುಪಯೋಗಿಸುವಾಗ

ಥೀಂಗಳ ಆಶಯಗಳನ್ನು ವಿನಿಮಯದ ಪ್ರಾರಂಭದಲ್ಲೋ, ಮಗುವಿನ ಚಿಂತನಾ ಸಾಮರ್ಥ್ಯ, ಸೃಜನಾತ್ಮಕತೆ ಎಂಬಿವುಗಳನ್ನು ಚುರುಕುಗೊಳಿಸುವುದಕ್ಕಾಗಿಯೋ, ಥೀಂಗಳ ವಿನಿಮಯದ ನಂತರ ಮಕ್ಕಳ ತಿಳುವಳಿಕೆಯನ್ನು ಪ್ರಕಟಪಡಿಸಲೋ, ವರ್ಕ್ ಶೀಟುಗಳನ್ನು ಉಪಯೋಗಿಸಬಹುದಾಗಿದೆ. ವಿವಿಧ ಥೀಂಗಳಿಗೆ ಸಂಬಂಧಿಸಿದ ನಿರ್ದಿಷ್ಟ ನೈಪುಣ್ಯಗಳನ್ನು ಬೆಳೆಸಲು ನೀಡುವ ಅನುಭವ ಚಟುವಟಿಕೆಗಳ ಮುಂದುವರಿಕೆಯಾಗಿಯೋ, ಪೂರ್ತೀಕರಣವಾಗಿಯೋ, ಮೌಲ್ಯಮಾಪನಕ್ಕಾಗಿಯೋ ವರ್ಕ್ ಶೀಟುಗಳನ್ನು ಉಪಯೋಗಿಸಬಹುದು. ಇಂತಹ ಕೆಲವು ಸಾಧ್ಯತೆಗಳನ್ನು ಕೆಳಗೆ ನೀಡಲಾಗಿದೆ.

- **ಥೀಂ ಚಟುವಟಿಕೆಗಳು ⇨ ವರ್ಕ್ ಶೀಟು ⇨ ಥೀಂ ಚಟುವಟಿಕೆಗಳು**

ಥೀಂಗೆ ಸಂಬಂಧಿಸಿದ ಅನುಭವಗಳನ್ನು ನೀಡುವುದರೊಂದಿಗೆ ಸಹಜವಾಗಿ ವರ್ಕ್ ಶೀಟುಗಳನ್ನು ನೀಡಿ, ಮುಂದುವರಿದ ಚಟುವಟಿಕೆಗಳನ್ನು ಆಯೋಜಿಸಬಹುದು.

- **ವರ್ಕ್ ಶೀಟು + ಥೀಂ ಚಟುವಟಿಕೆಗಳು ⇨ ಥೀಂ ಚಟುವಟಿಕೆಗಳು ⇨ ವರ್ಕ್ ಶೀಟು ⇨ ಥೀಂ ಚಟುವಟಿಕೆಗಳು**

ವರ್ಕ್ ಶೀಟು ಚಟುವಟಿಕೆಯನ್ನು ನೀಡುವುದರೊಂದಿಗೆ ಸಹಜವಾಗಿ ಇತರ ಚಟುವಟಿಕೆಗಳನ್ನು ಹೊಂದಿಸಿಕೊಂಡು ಮಾಡಬಹುದು.

- ಒಂದು ಅನುಭವ ಸಾಮಗ್ರಿಯಾಗಿ ವರ್ಕ್ ಶೀಟುಗಳ ಪ್ರಯೋಜನವನ್ನು ಪಡೆಯಬಹುದು.
- ಮಗುವಿನ ವರ್ಕ್ ಶೀಟುಗಳನ್ನು ಪರಸ್ಪರ ಹೊಂದಿಸಿಕೊಂಡು ವಿಶ್ಲೇಷಿಸುವುದಕ್ಕೂ ವಿಕಾಸ ಮಂಡಲಗಳ ಬೆಳವಣಿಗೆಯನ್ನು ಗುರುತಿಸುವುದಕ್ಕೂ ಸಾಧ್ಯವಾಗುವಂತೆ ವರ್ಕ್ ಶೀಟುಗಳನ್ನು ಉಪಯೋಗಿಸಬಹುದು. ಒಂದು ಮಗುವಿನ ನಿರಂತರವಾದ ಚಟುವಟಿಕೆಗಳಲ್ಲಿರುವ ಬದಲಾವಣೆಯನ್ನಾಗಿದೆ ಮೌಲ್ಯಮಾಪನ ಮಾಡಬೇಕಾದುದು.
- ಮಗುವು ಭಾಗವಹಿಸುವ ಚಟುವಟಿಕೆಗಳ ಪ್ರಕ್ರಿಯೆಯನ್ನು ಅಧ್ಯಾಪಿಕೆ ಗಮನಿಸುತ್ತಾ ಇರಬೇಕು.
- ಬೇರೆ ಬೇರೆ ಮಕ್ಕಳ ವರ್ಕ್ ಶೀಟುಗಳನ್ನು ಪರಸ್ಪರ ಹೋಲಿಸಬಾರದು.
- ಪ್ರತಿ ಮಗುವಿನ ವಿಕಾಸ ಹಂತದಲ್ಲಿರುವ ವೇಗವು ವ್ಯತ್ಯಸ್ತವಾಗಿದೆ. ಆದುದರಿಂದ ಮಕ್ಕಳ ಸಾಮರ್ಥ್ಯಗಳನ್ನು ತಮ್ಮೊಳಗೆ ಹೋಲಿಸಬಾರದು.
- ಲಭ್ಯವಾದ ವರ್ಕ್ ಶೀಟುಗಳ ಮುಂದುವರಿಕೆಯಾಗಿ ಅಥವಾ ಅದರ ಅನುಬಂಧವಾಗಿ ಹೊಸ ವರ್ಕ್ ಶೀಟುಗಳನ್ನು ತಯಾರಿಸಲು ಅಧ್ಯಾಪಿಕೆಗೆ ಸ್ವಾತಂತ್ರ್ಯವಿದೆ.
- ಮಗು ವರ್ಕ್ ಶೀಟುಗಳನ್ನು ಪೂರ್ತಿಗೊಳಿಸಿದರೆ ಅದರ ಸಂಗ್ರಹ, ಪುನರುಪಯೋಗ ಎಂಬಿವುಗಳ ಕುರಿತು ಅಧ್ಯಾಪಿಕೆಗೆ ಸ್ಪಷ್ಟವಾದ ತಿಳುವಳಿಕೆ ಇರಬೇಕು. ಪೂರ್ತಿಗೊಳಿಸಿದ ವರ್ಕ್ ಶೀಟುಗಳನ್ನು ಪೋರ್ಟ್ ಫೋಲಿಯೋದಲ್ಲಿ ಸಂಗ್ರಹಿಸಿಡಬೇಕು. ವರ್ಕ್ ಶೀಟನ್ನು ಔಪಚಾರಿಕ ಕಲಿಕೆ ಎಂಬ ರೀತಿಯಲ್ಲಿ ಕಾಣಬಾರದು.

## ವರ್ಕ್ ಶೀಟುಗಳು - ಚಟುವಟಿಕೆಗಳು

**ವಿವಿಧ ವಿಕಾಸ ಮಂಡಲಗಳಿಗೆ ಪ್ರಾಧಾನ್ಯತೆ ನೀಡುವ ವರ್ಕ್ ಶೀಟುಗಳನ್ನು ಕೊಡಲಾಗಿದೆ. ವಿವರಗಳನ್ನು ಕೆಳಗೆ ಕೊಡಲಾಗಿದೆ.**

### 1. ದೈಹಿಕ ಚಲನಾತ್ಮಕ ವಿಕಾಸ

ಸೂಕ್ಷ್ಮ ಪೇಶಿ ವಿಕಾಸಕ್ಕಾಗಿ ಹೆಚ್ಚಿನ ಎಲ್ಲಾ ವರ್ಕ್ ಶೀಟುಗಳಲ್ಲಿ ಅವಕಾಶವನ್ನು ನೀಡಲಾಗಿದೆ. ಚಿತ್ರ ರಚನೆ, ಬಣ್ಣ ಹಚ್ಚುವುದು, ನಿರ್ಮಾಣ ಎಂಬಿವುಗಳು ಈ ವಿಕಾಸ ಮಂಡಲಗಳಿಗೆ ಒತ್ತು ನೀಡುವವುಗಳಾಗಿವೆ. ಗೆರೆ ಎಳೆದು ಜೋಡಿಸುವುದು. ಉರುಟು ಹಾಕುವುದು, ಪೂರ್ವ ಲೇಖನ ಚಟುವಟಿಕೆಗಳು ಎಂಬಿವುಗಳನ್ನು ಮಾಡುವಾಗಲೂ ಪೇಶಿಚಲನೆ ಉಂಟಾಗುವುದು. ಹರಿಯುವುದು, ಕತ್ತರಿಸುವುದು, ಅಂಟಿಸುವುದು ಮೊದಲಾದ ಅನುಭವಗಳ ಮೂಲಕವೂ ಸೂಕ್ಷ್ಮ ಪೇಶಿಗಳ ವಿಕಾಸವು ಉಂಟಾಗುವುದು.

3+ ಪ್ರಾಯದ ಮಕ್ಕಳಿಗೆ ಸೂಕ್ಷ್ಮಪೇಶಿಗಳ ಚಲನಾ ಸಾಮರ್ಥ್ಯ ಕಡಿಮೆಯಾಗಿರಬಹುದು. ಆದುದರಿಂದ **'ಆಟದ ದೋಣಿ'**ಯಲ್ಲಿ ಅವರಿಗೆ ಮಾಡಲು ಸಾಧ್ಯವಿರುವ ಚಿಕ್ಕ ಚಿಕ್ಕ ಚಟುವಟಿಕೆಗಳನ್ನು ನೀಡಲಾಗಿದೆ. ಇದಲ್ಲದೇ ಸ್ಥೂಲಪೇಶೀ ವಿಕಾಸಕ್ಕಾಗಿ ಓಡುವುದು, ಜಿಗಿಯುವುದು, ಮೆಟ್ಟಲೇರಿ ಇಳಿಯುವುದು, ತೆವಳುವುದು ಮೊದಲಾದ ಹಲವಾರು ಅನುಭವ ಚಟುವಟಿಕೆಗಳನ್ನು ತರಗತಿಗಳಲ್ಲಿ ನೀಡಬೇಕಾಗಿದೆ.

4+ ಮಕ್ಕಳಿಗೆ ಇನ್ನಷ್ಟು ಸೂಕ್ಷ್ಮತೆ ಅಗತ್ಯವಿರುವ ಚಟುವಟಿಕೆಗಳನ್ನು ನೀಡಲಾಗಿದೆ. ಉದಾಹರಣೆಗೆ ಕತ್ತರಿ ಉಪಯೋಗಿಸಿ ನಿಖರವಾಗಿ ಕತ್ತರಿಸಲಿರುವ ತರಬೇತಿ. ಇದಕ್ಕಾಗಿ ಮಕ್ಕಳಿಗೆ ಉಪಯೋಗಿಸಲು ಸಾಧ್ಯವಿರುವ [Child Safe] ಕತ್ತರಿಗಳನ್ನುಪಯೋಗಿಸುವುದು ಉತ್ತಮ. ಚುಕ್ಕೆಗಳನ್ನು ಸೇರಿಸಿ ಚಿತ್ರವನ್ನು ಪೂರ್ತಿಗೊಳಿಸುವುದು ಇನ್ನೊಂದು ಚಟುವಟಿಕೆಯಾಗಿದೆ. ಒಂದನೇ ತರಗತಿಯಲ್ಲಿ ಮಗು ಅಕ್ಷರಗಳನ್ನೂ ಪದಗಳನ್ನೂ ವಾಕ್ಯಗಳನ್ನೂ ಬರೆಯಬೇಕಾಗಿದೆ. ಆದುದರಿಂದ 4+ ನಲ್ಲಿ ಪೂರ್ವಲೇಖನ ಚಟುವಟಿಕೆಗಳನ್ನು ಧಾರಾಳವಾಗಿ ನೀಡಬೇಕು.

### 2. ಭಾಷಾ ವಿಕಾಸ

ಪ್ರಿಸ್ಕೂಲ್ ಹಂತದಲ್ಲಿ ಮಾತುಗಾರಿಕೆಗೆ ಅತ್ಯಂತ ಪ್ರಾಧಾನ್ಯತೆಯಿದೆ. ಸಂಕೋಚ ಹಾಗೂ ಭಯವಿಲ್ಲದೆ ಮಾತನಾಡುವುದಕ್ಕೆ ಮಗುವನ್ನು ಪ್ರಾಪ್ತಗೊಳಿಸಲು ನಾವು ಪ್ರಯತ್ನಿಸಬೇಕು. ಇದಕ್ಕೆ ಎಲ್ಲ ವರ್ಕ್ ಶೀಟುಗಳಲ್ಲೂ ಅವಕಾಶವಿದೆ.

ಚಿತ್ರ ನೋಡಿ ತಿಳಿಯುವುದು, ಬಯಲು ಪ್ರವಾಸ, ಬೊಂಬೆಯಾಟ, ರೋಲ್ ಪ್ಲೇ ಆಟಗಳು, ಇತರ ಅನುಭವ ಚಟುವಟಿಕೆಗಳು ಎಂಬಿವುಗಳಲ್ಲೆಲ್ಲ ಪ್ರತಿ ಮಗುವಿಗೂ ಮಾತನಾಡಲು ಅವಕಾಶವನ್ನು ಒದಗಿಸಬೇಕಾಗಿದೆ. ಚಿತ್ರಗಳಲ್ಲಿ ಕಾಣುವ ವಿಷಯಗಳ ಕುರಿತು ಹೇಳುವುದು, ರಚಿಸಿದ ಅಥವಾ ಬಣ್ಣ ಹಚ್ಚಿದ ಚಿತ್ರಗಳ ಕುರಿತು ಹೇಳುವುದು, ಇತರರ ಚಿತ್ರಗಳ ಕುರಿತು ಅಭಿಪ್ರಾಯಗಳನ್ನು ಹೇಳುವುದು, ಮಾಡಿದ ಕಾರ್ಯಗಳ ಯುಕ್ತಿಯನ್ನು ಹೇಳುವುದು ಹಾಗೂ ಸಮರ್ಥಿಸುವುದು ಮೊದಲಾದ ಮಾತುಗಾರಿಕೆಗೆ ಇರುವ ಹಲವಾರು ಸಾಧ್ಯತೆಗಳನ್ನು ವರ್ಕ್ ಶೀಟು ಚಟುವಟಿಕೆಗಳೊಂದಿಗೆ ಹೊಂದಿಸಲಾಗಿದೆ.

3+ ಪ್ರಾಯದಲ್ಲಿ ಮಕ್ಕಳು ಆಶಯ ವಿನಿಮಯವನ್ನು ನಡೆಸುವುದು ಸ್ವಂತ ಮನೆಭಾಷೆಯಲ್ಲಿ ಆಗಿರಬಹುದು. ಈ ಸಂದರ್ಭದಲ್ಲಿ ತಮಾಷೆ ಮಾಡುವುದು, ತಡೆ ಒಡ್ಡುವುದು, ಅವಗಣನೆ ಎಂಬಿವುಗಳು ಅಧ್ಯಾಪಿಕೆಯಿಂದ ಉಂಟಾಗಬಾರದು. ಅದು ಆತ್ಮವಿಶ್ವಾಸವನ್ನು ಕುಗ್ಗಿಸಬಹುದು. ಮಾತನಾಡುವುದಕ್ಕಿರುವ ಪ್ರೋತ್ಸಾಹದ ಅಗತ್ಯವಿದೆ.

4+ ಆಗುವಾಗ ಮನೆಭಾಷೆಯಿಂದ ಮಾನಕ ಭಾಷೆಗೆ ಬೆಳೆಯುವುದಕ್ಕಿರುವ ಮಾದರಿಗಳು ಹಾಗೂ ಅನುಭವಗಳನ್ನು ನೀಡಬೇಕಾಗಿದೆ. ವರ್ಕ್ ಶೀಟುಗಳನ್ನು ಮಂಡಿಸುವ ಹಂತದಲ್ಲಿ ಇಂತಹ ಸಾಧ್ಯತೆಗಳನ್ನು ಉದ್ದೇಶಪೂರ್ವಕವಾಗಿ ಅಳವಡಿಸಬೇಕು. ಈ ಹಂತದಲ್ಲಿ ಪೂರ್ವಲೇಖನ ಚಟುವಟಿಕೆಗಳನ್ನು ನೀಡುವ ರೀತಿಯಲ್ಲಿ **'ಆಟದ ದೋಣಿ'**ಯ ವರ್ಕ್ ಶೀಟುಗಳನ್ನು ಕ್ರಮೀಕರಿಸಲಾಗಿದೆ.

### 3. ವೈಜ್ಞಾನಿಕ ವಿಕಾಸ ಮಂಡಲ

ವಿಜ್ಞಾನ ಹಾಗೂ ಗಣಿತಕ್ಕಿರುವ ಅನುಭವ ಚಟುವಟಿಕೆಗಳನ್ನು ಈ ಮಂಡಲದಲ್ಲಿ ಅಳವಡಿಸಲಾಗಿದೆ. ದೊಡ್ಡದು/ಸಣ್ಣದು, ಹೆಚ್ಚು/ಕಡಿಮೆ, ಹತ್ತಿರ/ದೂರ, ಉದ್ದ ಹೆಚ್ಚು/ಕಡಿಮೆ, ಎತ್ತರ ಹೆಚ್ಚು/ಕಡಿಮೆ, ವಸ್ತುಗಳನ್ನು ಎಣಿಸುವುದು, ಹೊಂದಿಸುವುದು ಮೊದಲಾದ ಪೂರ್ವ ಗಣಿತಾಶಯ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ತರಗತಿಗಳಲ್ಲಿ ಧಾರಾಳ ಚಟುವಟಿಕೆಗಳನ್ನು ನೀಡಿದ ನಂತರ ವರ್ಕ್ ಶೀಟುಗಳನ್ನು ಉಪಯೋಗಿಸಬೇಕು.

ನಿರೀಕ್ಷಣೆ, ಹೋಲಿಸುವುದು, ಸಾಮ್ಯವ್ಯತ್ಯಾಸಗಳನ್ನು ಕಂಡುಕೊಳ್ಳುವುದು, ವರ್ಗೀಕರಿಸುವುದು, ಕಂಡುಕೊಂಡವುಗಳನ್ನು ಮಂಡಿಸುವುದು ಮೊದಲಾದ ಪ್ರಕ್ರಿಯಾ ಸಾಮರ್ಥ್ಯಗಳಿಗೆ ಸಂಬಂಧಿಸಿದ ಹಲವಾರು ಚಟುವಟಿಕೆಗಳನ್ನು **'ಆಟದ ದೋಣಿ'**ಯಲ್ಲಿ ಅಳವಡಿಸಲಾಗಿದೆ.

ವರ್ಕ್ ಶೀಟುಗಳಲ್ಲಿ ಚಿತ್ರ ನಿರೀಕ್ಷಣೆಗೆ ಮಾತ್ರ ಸಾಧ್ಯತೆ ಇರುವುದು. ಆದುದರಿಂದ ನೋಡಿ, ಆಲಿಸಿ, ಮೂಸಿ, ರುಚಿಸಿ, ಸ್ಪರ್ಶಿಸಿ ತಿಳಿಯುವುದು ಎಂಬಿವುಗಳ ಮೂಲಕ ನಿರೀಕ್ಷಣೆ ಮಾಡುವುದಕ್ಕೆ ಅವಕಾಶ ಲಭಿಸುವಂತೆ ಕಲಿಕಾನುಭವಗಳ ಯೋಜನೆ ಮಾಡಬೇಕಾಗಿದೆ. ಯುಕ್ತಿ ಚಿಂತನೆ, ಕಾರ್ಯಕಾರಣ ಸಂಬಂಧಗಳನ್ನು ಕಂಡುಹಿಡಿದು ಹೇಳುವುದು, ನಮೂನೆಗಳನ್ನು ರಚಿಸುವುದು, ವಿವಿಧ ರೀತಿಯ ನಿರ್ಮಾಣ ಚಟುವಟಿಕೆಗಳಲ್ಲಿ ತೊಡಗುವುದು, ನೆನಪಿಸಿ ಹೇಳುವುದು ಮೊದಲಾದ ಅನುಭವಗಳು ಮಗುವಿಗೆ ಲಭಿಸಬೇಕಾಗಿದೆ.

ಮೂರು ವರ್ಷ ಪ್ರಾಯದವರಿಗೆ ಸರಳವಾದ ಪೂರ್ವ ಗಣಿತಾಶಯಗಳು, ಬಣ್ಣಗಳನ್ನು ಗುರುತಿಸುವುದು, ವ್ಯತ್ಯಾಸ ಕಂಡುಹಿಡಿಯುವುದು, ಚಿತ್ರಗಳನ್ನು ನೋಡಿ ವಿಷಯಗಳನ್ನು ಹೇಳುವುದು, ಒಂದೇ ರೀತಿಯವುಗಳನ್ನು ಕಂಡುಹಿಡಿಯುವುದು, ಗುಂಪಿಗೆ ಸೇರದವುಗಳನ್ನು ಕಂಡುಹಿಡಿದು ಕಾರಣವನ್ನು ಹೇಳುವುದು ಮೊದಲಾದ ಚಟುವಟಿಕೆಗಳನ್ನು ಅಳವಡಿಸಲಾಗಿದೆ.

ನಾಲ್ಕು ವರ್ಷದವರಿಗೆ ಇವುಗಳ ಉನ್ನತ ಮಟ್ಟದ ಚಟುವಟಿಕೆಗಳೊಂದಿಗೆ 1 ರಿಂದ 5 ರವರೆಗಿನ ಸಂಖ್ಯಾಜ್ಞಾನಕ್ಕೆ ಸಂಬಂಧಿಸಿದ ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಭಿನ್ನ ಮಟ್ಟದ ಮಕ್ಕಳಿಗಾಗಿ ವರ್ಕ್ ಶೀಟುಗಳಲ್ಲಿ ಅನುರೂಪೀಕರಣ ಮಾಡಬಹುದಾಗಿದೆ.

### 4. ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ

ಚಿತ್ರ ರಚನೆ, ಬಣ್ಣ ಹಚ್ಚುವುದು, ನಿರ್ಮಾಣ ಎಂಬೀ ಚಟುವಟಿಕೆಗಳನ್ನು ಮುಖ್ಯವಾಗಿ ಈ ಮಂಡಲಕ್ಕೆ ಸಂಬಂಧಿಸಿ **'ಆಟದ ದೋಣಿ'**ಯಲ್ಲಿ ಅಳವಡಿಸಲಾಗಿದೆ. ಭಾಷಾಪರವಾದ ಸೃಜನಾತ್ಮಕತೆಯನ್ನೂ ಪರಿಗಣಿಸಲಾಗಿದೆ.

ಚಿತ್ರ ರಚನೆ [ಸ್ವತಂತ್ರ ಹಾಗೂ ನಿಯಂತ್ರಿತ], ಬಣ್ಣ ನೀಡುವುದು ಎಂಬಿವುಗಳ ಕುರಿತು ಮೊದಲು ಸೂಚಿಸಲಾಗಿದೆಯಲ್ಲವೇ? ವಿವಿಧ ರೀತಿಯಲ್ಲಿರುವ ನಿರ್ಮಾಣಗಳ ಸಾಧ್ಯತೆಗಳನ್ನು ಅಳವಡಿಸಲಾಗಿದೆ. ಹೊಗೆ ಚಿತ್ರಗಳು, ಬೆರಳು ಚಿತ್ರಗಳು, ಎಲೆ ಮೃಗಶಾಲೆ ನಿರ್ಮಾಣ, ಹೂಗಳ ನಿರ್ಮಾಣ, ಬ್ಯಾಡ್ಜ್ ನಿರ್ಮಾಣ, ಬಾವುಟ ನಿರ್ಮಾಣ, ತೋರಣಗಳನ್ನು ತಯಾರಿಸುವುದು, ಕೈ ಬೆರಳುಗಳನ್ನಿಟ್ಟು ಚಿತ್ರ ರಚನೆ, ಎಲೆ ಪ್ರಿಂಟಿಂಗ್, ಹತ್ತಿ, ಪೆನ್ಸಿಲ್ ಸ್ಕ್ರೇಪ್ ಮೊದಲಾದವುಗಳನ್ನು ಅಂಟಿಸಿ ಚಿತ್ರ ರಚಿಸುವುದು ಎಂಬಿತ್ಯಾದಿ ವೈವಿಧ್ಯಮಯವಾದ ನಿರ್ಮಾಣ ಸಾಧ್ಯತೆಗಳು **'ಆಟದ ದೋಣಿ'**ಯಲ್ಲಿ ಇವೆ.

3+ ಪ್ರಾಯದವರಿಗೆ ಸರಳವಾದ ನಿರ್ಮಾಣ ರೀತಿಯನ್ನು ನೀಡಲಾಗಿದೆ. ಈ ಚಟುವಟಿಕೆಗಳನ್ನು ನೀಡುವಾಗ ಸೃಜನಾತ್ಮಕ ಹಾಗೂ ಸೌಂದರ್ಯಾತ್ಮಕ ವಿಕಾಸದೊಂದಿಗೆ ಸೂಕ್ಷ್ಮ - ಸ್ಥೂಲ ಪೇಶಿಗಳ ಬಳುಕುವಿಕೆ ಸಾಧ್ಯವಾಗುವುದಲ್ಲವೇ? ಮಾತ್ರವಲ್ಲದೇ ಸಾಮಾಜಿಕ, ಭಾವನಾತ್ಮಕ ವಿಕಾಸಕ್ಕೂ ಇವುಗಳು ಪ್ರಯೋಜನವಾಗುವವು. ಸಹಕಾರ ಮನೋಭಾವ, ನೇತೃತ್ವ ನೀಡುವ ರೀತಿಯ ಭಾಗವಹಿಸುವಿಕೆ ಮೊದಲಾದವುಗಳಿಗೆ ಅವಕಾಶ ಲಭಿಸುವಂತೆ ಗುಂಪು ಚಟುವಟಿಕೆಗಳನ್ನು ಆಯೋಜಿಸಬೇಕಾಗಿದೆ.

4+ ಪ್ರಾಯದಲ್ಲಿರುವ ಮಕ್ಕಳಿಗೆ ಒಂದಷ್ಟು ಉನ್ನತ ಮಟ್ಟದಲ್ಲಿರುವ

ಚಟುವಟಿಕೆಗಳನ್ನು ಅಳವಡಿಸಲಾಗಿದೆ. ಕತ್ತರಿ ಉಪಯೋಗಿಸಿ ಕತ್ತರಿಸುವುದಕ್ಕೂ ಅಂಟಿಸುವುದಕ್ಕೂ, ಕಾಗದದಿಂದ ಹೂಗಳು, ಒರಿಗಾಮಿ ಆಕೃತಿಗಳು ಎಂಬಿತ್ಯಾದಿಗಳನ್ನು ನಿರ್ಮಿಸುವುದಕ್ಕೂ ಅವಕಾಶ ನೀಡಲಾಗಿದೆ. ಪರಿಸರದಿಂದ ಲಭಿಸುವ ವಸ್ತುಗಳು ಮತ್ತು ಉಪಯೋಗಶೂನ್ಯ ವಸ್ತುಗಳನ್ನುಪಯೋಗಿಸಿರುವ ನಿರ್ಮಾಣ ಚಟುವಟಿಕೆಗಳನ್ನು ಮಾಡಿಸಬೇಕು. ಇದರಿಂದ ಮಗುವಿನ ಸಮಗ್ರವಾದ ವಿಕಾಸವು ಸಾಧ್ಯವಾಗುವುದು.

## 5. ಸಾಮಾಜಿಕ ಭಾವನಾತ್ಮಕ ವಿಕಾಸ

**'ಆಟದ ದೋಣಿ'**ಯಲ್ಲಿರುವ ಚಟುವಟಿಕೆಗಳಲ್ಲಿ ಹೆಚ್ಚಿನವುಗಳು ವೈಯಕ್ತಿಕವಾಗಿ ಪೂರ್ತಿಗೊಳಿಸಬೇಕಾದವುಗಳಾಗಿವೆ. ಸಾಧ್ಯವಾದ ಸಂದರ್ಭಗಳಲ್ಲಿ ಪರಸ್ಪರ ಸಹಾಯಕ್ಕಿರುವ ಸಂದರ್ಭಗಳನ್ನು ಒದಗಿಸಬಹುದಾಗಿದೆ. ಬಣ್ಣ ಹಚ್ಚುವುದಕ್ಕಿರುವ ಕ್ರಯೋನುಗಳನ್ನು ಪಡೆಯುವುದಕ್ಕೂ, ನಿರ್ಮಾಣ ಚಟುವಟಿಕೆಗಳನ್ನು ಗುಂಪಾಗಿ ಮಾಡುವುದಕ್ಕೂ ಅವಕಾಶಗಳಿರಬಹುದಲ್ಲವೇ? ಕೆಲವು ಚಟುವಟಿಕೆಗಳಲ್ಲಿ ನಿರ್ದಿಷ್ಟ ಬಣ್ಣದ ಕ್ರಯೋನುಗಳ ಅಗತ್ಯವಿರಬಹುದು. ಉದಾಹರಣೆಗೆ ಎಲೆಗಳಿಗೆ ಹಸುರು ಬಣ್ಣ ಹಚ್ಚುವುದು. ಒಬ್ಬ ಬಣ್ಣ ಹಚ್ಚಿ ಮುಗಿಯುವ ವರೆಗೆ ಸರದಿ ಕಾಯಲು ಮಗುವನ್ನು ಪ್ರೇರೇಪಿಸಲು ಅಧ್ಯಾಪಿಕೆಗೆ ಸಾಧ್ಯವಾಗಬೇಕು. ಕತ್ತರಿಯಿಂದ ಕತ್ತರಿಸುವ ಸಂದರ್ಭಗಳಲ್ಲೂ ಈ ರೀತಿ ಸರದಿ ಕಾಯಬೇಕಾಗಬಹುದು.

ಕಥೆಗಳಲ್ಲಿರುವ ಭಾವನಾತ್ಮಕ ಸಂದರ್ಭಗಳೊಂದಿಗೆ ಸ್ವಂತ ಭಾವನಾತ್ಮಕ ಸ್ಥಿತಿಯನ್ನು ಹೊಂದಿಸುವ ಮೂಲಕ ಸಾಮಾಜಿಕ ಭಾವನಾತ್ಮಕ ವಿಕಾಸವನ್ನು ಸಾಧ್ಯವಾಗಿಸಬಹುದು. ವರ್ಕ್ ಶೀಟು ಮಂಡನೆಯ ಸಂದರ್ಭಗಳಲ್ಲಿ ಆಖ್ಯಾನಗಳು, ತರಗತಿಯಲ್ಲಿ ಮಂಡಿಸುವ ಕಥೆಗಳು, ಕವಿತೆಗಳು, ಕಥಾಗೀತೆಗಳು, ಬೊಂಬೆ ನಾಟಕಗಳು, ರೋಲ್ ಪ್ಲೇ ಎಂಬಿವುಗಳನ್ನು ಸಾಮಾಜಿಕ ಭಾವನಾತ್ಮಕ ವಿಕಾಸಕ್ಕಾಗಿ ಉಪಯೋಗಿಸುವಲ್ಲಿ ಅಧ್ಯಾಪಿಕೆಯು ಯಶಸ್ವಿಯಾಗಬೇಕು.

## ಮೌಲ್ಯಮಾಪನ

ಪ್ರತಿಯೊಂದು ವಿಕಾಸ ಮಂಡಲದಲ್ಲಿಯೂ ಪ್ರತಿ ಮಗುವೂ ಯಾವ ಹಂತದಲ್ಲಿರುವುದೆಂದು ಅಧ್ಯಾಪಿಕೆಗೆ ಗುರುತಿಸಲು ಸಾಧ್ಯವಿರಬೇಕು. ಇದು ಮಗುವಿನ ವೈಯಕ್ತಿಕವಾದ ಸವಿಶೇಷತೆಗಳನ್ನು ಗುರುತಿಸಿ ಅಗತ್ಯವಿರುವ ಸಹಾಯವನ್ನು ನೀಡಲು ಅಧ್ಯಾಪಿಕೆಗೆ ಸಹಾಯ ಮಾಡಬಹುದು. ಅಲ್ಲದೇ ತನ್ನ ಯೋಜನೆಯ ಇತಿಮಿತಿಗಳನ್ನು ಗುರುತಿಸಿ ಉತ್ತಮ ಪಡಿಸುವುದಕ್ಕೂ ಮೌಲ್ಯಮಾಪನ ಚಟುವಟಿಕೆಗಳ ಮೂಲಕ ಸಾಧ್ಯವಾಗುವುದು. ರಕ್ಷಕರಿಂದ ಮಗುವಿಗೆ ಲಭಿಸಬೇಕಾದ ಸಹಾಯಗಳು ಏನೆಂಬುದನ್ನು ಸ್ಪಷ್ಟವಾಗಿ ತಿಳಿಸುವುದಕ್ಕೆ ನಿರಂತರ ಮೌಲ್ಯಮಾಪನದಿಂದ ಲಭಿಸುವ ಮಾಹಿತಿಗಳು ಅಧ್ಯಾಪಿಕೆಗೆ ಸಹಾಯಕವಾಗುವುವು.

ವರ್ಕ್ ಶೀಟುಗಳಿಂದ ಯಾವುದನ್ನೆಲ್ಲ ಮೌಲ್ಯಮಾಪನ ಮಾಡಬೇಕೆಂದು ಕೈಪಿಡಿಯಲ್ಲಿ ಸ್ಪಷ್ಟವಾಗಿ ನೀಡಲಾಗಿದೆ. ಚಟುವಟಿಕೆಯು ನಡೆಯುವಾಗ ಅಧ್ಯಾಪಿಕೆ ನಡೆಸುವ ನಿರೀಕ್ಷಣೆಯಿಂದಲೂ ವರ್ಕ್ ಶೀಟು ಎಂಬ ಉತ್ಪನ್ನದ ಮೌಲ್ಯಮಾಪನದಿಂದಲೂ ನಿರಂತರ ಮೌಲ್ಯಮಾಪನವನ್ನು ನಡೆಸಬೇಕಾಗಿದೆ. ಹೆತ್ತವರೊಂದಿಗಿನ ಆಶಯ ವಿನಿಮಯದಿಂದಲೂ ಕೆಲವು ಮಹತ್ವದ ಮಾಹಿತಿಗಳು ಲಭಿಸಬಹುದು.

ಪ್ರತಿ ವರ್ಕ್ ಶೀಟನ್ನು ಪೂರ್ತಿಗೊಳಿಸಿ ಪ್ರದರ್ಶನದ ನಂತರ ಪ್ರತಿಯೊಂದು ಪೋರ್ಟ್ ಫೋಲಿಯೋ ಬ್ಯಾಗಿನಲ್ಲಿ ಸಂಗ್ರಹಿಸಿಡಬೇಕು. ಅವುಗಳನ್ನು ವಿಶ್ಲೇಷಿಸುವಾಗ ವಿಕಾಸ ಮಂಡಲಗಳಲ್ಲಿ ಮಗುವಿಗೆ ಉಂಟಾದ ಕ್ರಮಾನುಗತವಾದ ಬೆಳವಣಿಗೆಯು ಅಧ್ಯಾಪಿಕೆಗೂ ರಕ್ಷಕರಿಗೂ ವೇದ್ಯವಾಗಬಹುದು. ವರ್ಷಾಂತ್ಯದಲ್ಲಿ ಇವುಗಳನ್ನು ಕ್ರೋಡೀಕರಿಸಿ ನಿಖರವಾಗಿ ಮೌಲ್ಯಮಾಪನ ನಡೆಸಬಹುದಲ್ಲವೇ?

ಮಗುವಿಗೂ ರಕ್ಷಕರಿಗೂ ಅಗತ್ಯವಿರುವ ಫೀಡ್ ಬ್ಯಾಕನ್ನು ನೀಡಿ, ಉತ್ತಮಪಡಿಸಲು ಈ ಮೂಲಕ ಅಧ್ಯಾಪಿಕೆಗೆ ಸಾಧ್ಯವಾಗುವುದು.

# ಥೀಂ 1 - ಕುಟುಂಬ

ಆಟದ ದೋಣಿಯಲ್ಲಿರುವ ವರ್ಕ್ ಶೀಟುಗಳನ್ನು ಚಟುವಟಿಕಾನುಭವಗಳಾಗಿ ನೀಡಬೇಕು. ಥೀಂನ್ನು ಆಧರಿಸಿರುವ ಚಟುವಟಿಕೆಗಳೊಂದಿಗೆ ಅವುಗಳನ್ನು ಸಂಯೋಜಿಸಿ ಮಂಡಿಸಬೇಕಾಗಿದೆ. ಸಂಯೋಜಿಸುವುದಕ್ಕಿರುವ ಸಾಧ್ಯತೆಯನ್ನು ಪ್ರತಿಯೊಂದು ಥೀಂ ನ ಮೊದಲು ಈ ಬೆಂಬಲ ಸಾಮಗ್ರಿಯಲ್ಲಿ ಸೂಚಿಸಿರಬಹುದು. ಚಟುವಟಿಕಾ ಕ್ರಮದಲ್ಲಿ ಅಗತ್ಯವಿರುವ ಬದಲಾವಣೆಗಳನ್ನು ಮಾಡಲು ಅಧ್ಯಾಪಿಕೆಗೆ ಸ್ವಾತಂತ್ರ್ಯವಿದೆ. ಚಿತ್ರ ರಚಿಸುವಾಗ ಮಕ್ಕಳಿಗೆ ಅಗತ್ಯವಿರುವ ಸಹಾಯ ನೀಡಬೇಕು.

**ಚಟುವಟಿಕಾ ಕ್ರಮ**

1. ಕುಟುಂಬಕ್ಕೆ ಸಂಬಂಧಿಸಿದ ಹಾಡುಗಳು / ಕಥೆಗಳು.
2. ಕುಟಂಬಕ್ಕೆ ಸಂಬಂಧಿಸಿದ ಚಿತ್ರದ ಕುರಿತು ವಿವರಿಸುವುದು.
3. ವರ್ಕ್ ಶೀಟು 1.1 'ನನ್ನ ಮನೆಯವರು' ನೀಡುವುದು.
4. ಕಥೆಯಲ್ಲಿರುವ ಘಟನೆಗಳನ್ನು ಅಭಿನಯಿಸಿ ತೋರಿಸುವುದು.
5. ಕುಟುಂಬಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು. [ಸ್ವಂತ ಹೆಸರು, ಅಮ್ಮನ ಹೆಸರು ಹೇಳುವುದು.]
6. ಆಖ್ಯಾನ ಮಂಡನೆ, ವರ್ಕ್ ಶೀಟು 1.2 'ನಾನು ಮತ್ತು ನನ್ನ ಮನೆಯವರು' ನೀಡುವುದು.
7. ಹೆಸರು ಹೇಳುವ ಆಟ, ತಂದೆ, ತಾಯಿ, ಅಣ್ಣ, ಅಕ್ಕ ಮೊದಲಾದವರ ಹೆಸರು ಹೇಳುವುದು.
8. ಮನೆಗೆ ಸಂಬಂಧಿಸಿದ ಅಭಿನಯ ಗೀತೆ ಹಾಡುವುದು / ಕಥೆ ಆಲಿಸುವುದು.
9. ಕುಟುಂಬಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳುವುದು.

## ವರ್ಕ್ ಶೀಟು 1.1 – ನನ್ನ ಮನೆಯವರು

**ವಿಕಾಸ ಮಂಡಲ** : * ಭಾಷಾ ವಿಕಾಸ
* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** : ಚಿತ್ರ ರಚಿಸುವುದಕ್ಕೂ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು. [4]
- ಚಿತ್ರಗಳನ್ನು ನೋಡಿ ಆಶಯಗಳನ್ನು ಹೇಳಲು ಸಾಧ್ಯವಾಗುವುದು. [14]
- ಚಿತ್ರಗಳನ್ನು ವೀಕ್ಷಿಸಿ ವಿವರಗಳನ್ನು ಮತ್ತು ಕಂಡುಕೊಂಡ ಅಂಶಗಳನ್ನು ಹೇಳಲು ಸಾಧ್ಯವಾಗುವುದು. [21]

**ಆಶಯ** : ಕುಟುಂಬವು, ತಂದೆ ತಾಯಿ ಹಾಗೂ ಮಕ್ಕಳು ಸೇರಿರುವುದಾಗಿದೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಕುಟುಂಬಕ್ಕೆ ಸಂಬಂಧಿಸಿದ ಪದ್ಯಗಳು, ಅಭಿನಯ ಗೀತೆ, ಕಥೆಗಳು ಎಂಬಿವುಗಳ ನಂತರ ಮಗುವಿನ ಕುಟುಂಬದ ಸದಸ್ಯರ ಕುರಿತಾದ ಸೌಹಾರ್ದ ಸಂಭಾಷಣೆಯ ಕುರಿತಾಗಿ ವರ್ಕ್ ಶೀಟ್ ನೀಡಬಹುದು.

**ಪ್ರಕ್ರಿಯೆ** :

**ಆಖ್ಯಾನ** : ನಯನ ಬೆಳಗ್ಗೆ ಎದ್ದಳು. ಪುಟ್ಟನು ಅಳುತ್ತಿದ್ದಾನೆ. 'ಯಾಕೆ ಪುಟ್ಟ ಅಳುತ್ತಿದ್ದೀಯಾ? ಅಳಬೇಡ ಪುಟ್ಟಾ... ನಾನೀಗ ಬಂದೆ.' ಅವಳು

ಬಣ್ಣದ ಅಂಗಿ ಧರಿಸಿದಳು. ವರಾಂಡಕ್ಕೆ ತಲುಪಿದಳು. ‘ಪುಟ್ಟಾ.. ನೀನ್ಯಾಕೆ ಹೀಗೆ ಅಳುತ್ತೀಯಾ ?’

‘ನಾವು ಅಜ್ಜಿಯ ಮನೆಗೆ ಹೋಗುವ. ಅಳುವನ್ನು ನಿಲ್ಲಿಸು ಪುಟ್ಟಾ.. ಅಜ್ಜಿ ಒಳ್ಳೆಯ ಕಥೆಯನ್ನು ಹೇಳಿಯಾರು. ಆಕಾಶ ಮಿಠಾಯಿಯ ಕಥೆ.’ ಪುಟ್ಟನು ಅಳುವುದನ್ನು ನಿಲ್ಲಿಸಿದನು. ‘ಅಮ್ಮಾ.. ನಾವು ಅಜ್ಜಿಯ ಮನೆಗೆ ಹೋಗಿ ಬರುತ್ತೇವೆ.’ ಅದನ್ನು ಕೇಳಿ ಮನೆಯಲ್ಲಿರುವವರು ಅಂಗಳಕ್ಕೆ ಬಂದರು. ಯಾರೆಲ್ಲ ಬಂದಿರಬಹುದು ?

: ಪ್ರತಿಕ್ರಿಯೆ.

ವರ್ಕ್ ಶೀಟು 1.1 – ‘ನನ್ನ ಮನೆಯವರು’ - ನೀಡುವುದು.

ಪ್ರತಿಯೊಬ್ಬರೂ ಚಿತ್ರ ನೋಡಿ ಒಂದೊಂದು ವಿಷಯವನ್ನು ಹೇಳುವರು. ಕ್ರಯೋನ್ಸ್ ನೀಡುವುದು. ಮನೆಗೆ ಬಣ್ಣ ಹಚ್ಚುವುದು. ಹಚ್ಚಿದ ಬಣ್ಣದ ಆಧಾರದಲ್ಲಿ ಚರ್ಚೆ. ಮನೆಯ ಮಾಡಿಗೆ ಯಾವ ಬಣ್ಣ ನೀಡಿದ್ದೀರಾ ? ಗೋಡೆಗೆ? ಹೀಗೆ ಪ್ರತಿಯೊಂದು ವಸ್ತುವಿನ ಕುರಿತು ಸಂಭಾಷಣೆ. ಇಷ್ಟವಿದ್ದಲ್ಲಿ ಮಕ್ಕಳಿಗೆ ಹೂವಿನ ಗಿಡಗಳನ್ನು, ಹೂಗಳನ್ನು ಚಿತ್ರಿಸಬಹುದು. ಬಣ್ಣ ನೀಡಬಹುದು.

**ಚರ್ಚೆ** : ನಿಮ್ಮ ಮನೆಯಲ್ಲಿ ಯಾರು ಯಾರು ಇದ್ದಾರೆ ?

[ಸ್ವತಂತ್ರ ಪ್ರತಿಕ್ರಿಯೆ]

: ಅಧ್ಯಾಪಿಕೆಯು ತನ್ನ ಮನೆಯ ಸದಸ್ಯರನ್ನು ಪರಿಚಯಿಸುವುದು.

[ಫೋಟೊ / ಚಿತ್ರ ರಚನೆಯ ಮೂಲಕ]

: ನಿಮ್ಮ ಮನೆಯಲ್ಲಿ ಯಾರೆಲ್ಲ ಇದ್ದಾರೆ ?

: ಸ್ವಂತ ಕುಟುಂಬದ ಕುರಿತು ಮಕ್ಕಳು ಮಾತನಾಡುವರು.

**ಆಖ್ಯಾನ [ಮುಂದುವರಿಯುವುದು]**

: ಅವರು ಅಜ್ಜಿಯ ಮನೆಗೆ ತಲುಪಿದರು. ‘ಯಾರು ಬರುತ್ತಿರುವುದು.?' ಅಜ್ಜಿಗೆ ಸಂತೋಷವಾಯಿತು. ‘ಅಜ್ಜಿ.. ಅಜ್ಜಿ.. ಪುಟ್ಟ, ಆಕಾಶ ಮಿಠಾಯಿಯ ಕಥೆ ಕೇಳಲು ಬಂದದ್ದು.’ ‘ಹೌದೇ? ಬನ್ನಿ ಬನ್ನಿ.. ಒಳಗೆ ಬನ್ನಿ..’ ‘ಅಜ್ಜಿ.. ಕಥೆ ಹೇಳ್ತಿರಾ..’ ‘ಕಥೆ ಕೇಳಲು ಇಷ್ಟು ಅವಸರವೇ?’ ಅಜ್ಜಿ ಪುಟ್ಟನನ್ನು ಮಡಿಲಲ್ಲಿ ಕುಳ್ಳಿರಿಸಿ ಕಥೆ ಹೇಳಲು ತೊಡಗಿದಳು. ‘ಒಂದು ಊರಿನಲ್ಲಿ ಒಂದು ಅಳಿಲು ವಾಸಿಸುತ್ತಿತ್ತು. ಒಂದು ದಿನ ಅದಕ್ಕೆ ಒಂದು ಮಿಠಾಯಿ ಸಿಕ್ಕಿತು. ಅಳಿಲು ಅದನ್ನು ಮರದ ಕೊಂಬೆಯ ಮೇಲೆ ಇಟ್ಟಿತು. ರಾತ್ರಿಯಾದಾಗ ಆ ಮಿಠಾಯಿಯು ಮಿನುಗಲು ತೊಡಗಿತು. ಚಿನ್ನದ ಬಣ್ಣ.. ಅಳಿಲು ನೋಡು ನೋಡುತ್ತಿದ್ದಂತೆ ಮಿಠಾಯಿಯನ್ನು ಒಂದು ಮೋಡವು ತೇಲಿ ಬಂದು ತೆಗೆದುಕೊಂಡು ಹೋಯಿತು. ಅಕಾಶದಲ್ಲಿ ಇಟ್ಟಿತು. ಮಿಠಾಯಿಯು ಆಕಾಶದಲ್ಲಿ ಉರುಳಾಡುತ್ತಾ ಪಶ್ಚಿಮಕ್ಕೆ ಹೋಯಿತು. ಮರುದಿನ ಆ ಮಿಠಾಯಿಯನ್ನು ಅಳಿಲು ಪೂರ್ವದಿಕ್ಕಿನಲ್ಲಿ ಕಂಡಿತು. ‘ಅಮ್ಮ.. ಅಮ್ಮ.. ಅಲ್ಲಿ ನೋಡು.. ನನ್ನ ಮಿಠಾಯಿ..’ ಅಳಿಲು ಅಮ್ಮನಲ್ಲಿ ಹೇಳಿತು. ‘ಆಕಾಶ ಮಿಠಾಯಿ.. ಚಂದದ ಮಿಠಾಯಿ..’ ಅಮ್ಮ ಹೇಳಿದಳು. ‘ಪುಟ್ಟಾ.. ನೀನು ಆಕಾಶ ಮಿಠಾಯಿಯನ್ನು ನೋಡಿದ್ದೀಯಾ?’

**ಅಧ್ಯಾಪಿಕೆ** : ಸಂಬಂಧಗಳನ್ನು ಹೇಳುವ ಸಂದರ್ಭದಲ್ಲಿ ಸ್ಥಳೀಯ ಭಾಷಾ ಭೇದಗಳನ್ನು ಪರಿಗಣಿಸಬೇಕು.

[ಅಮ್ಮ, ಅಬ್ಬಾ, ಅವ್ವ, ಉಮ್ಮ, ಬಾಯಿ, ಅಬ್ಬೆ, ಮಾಯಿ]

**ಮೌಲ್ಯಮಾಪನ** : ಸ್ವಂತ ಕುಟುಂಬಸ್ಥರ ಹೆಸರು / ಸಂಬಂಧವನ್ನು ಹೇಳುವರು.

- ಬಣ್ಣ ನೀಡುವುದರಲ್ಲಿನ ಸೂಕ್ಷ್ಮತೆ / ನಿಖರತೆ.
- ಅನುಯೋಜ್ಯವಾದ ಬಣ್ಣ.

## ವರ್ಕ್ ಶೀಟು 1.2 - 'ನಾನು ಮತ್ತು ನನ್ನ ಮನೆಯವರು'

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ
* ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯಗಳು** :1.ಕೈಬೆರಳು, ಕ್ರಯೋನ್ ಎಂಬಿವುಗಳನ್ನುಪಯೋಗಿಸಿ ಸ್ವತಂತ್ರವಾಗಿ ಚಿತ್ರಗಳನ್ನು ರಚಿಸಿ ಬಣ್ಣಹಚ್ಚಲು ಸಾಧ್ಯವಾಗುವುದು. [4]
2. ಹಲವು ವಸ್ತುಗಳನ್ನುಪಯೋಗಿಸಿ ಪ್ರಿಂಟಿಂಗ್ ಮಾಡಲು ಸಾಧ್ಯವಾಗುವುದು. [81]

**ಆಶಯ** : ಕುಟುಂಬದ ಸದಸ್ಯರು (ತಂದೆ, ತಾಯಿ, ಅಕ್ಕ, ಅಣ್ಣ, ಅಜ್ಜ, ಅಜ್ಜಿ) ಜೊತೆಯಾಗಿ ಒಂದೇ ಮನೆಯಲ್ಲಿ ವಾಸಿಸುವರು.

**ಸಾಮಗ್ರಿಗಳು** : ಸ್ಪಂಜ್, ಹತ್ತಿ, ಎಲೆ, ಪ್ಲೇಟ್, ಬಣ್ಣ

**ಸಂದರ್ಭ** : ಕುಟುಂಬದ ಸದಸ್ಯರು - ಪದ್ಯ ಮಂಡಿಸಿದ ನಂತರ

**ಪ್ರಕ್ರಿಯೆ** :

**ಆಖ್ಯಾನ** : ಅಮ್ಮ ಬಟ್ಟೆ ಒಗೆಯುತ್ತಿದ್ದಾರೆ. ಪುಟ್ಟನು ಚೆಂಡಿನೊಂದಿಗೆ ಆಡುತ್ತಿದ್ದಾನೆ. ಅಜ್ಜಿ ಬಟ್ಟೆಗಳನ್ನು ನೀಲದಲ್ಲಿ ಮುಳುಗಿಸಿ ಒಣಗಲು ಹಾಸುತ್ತಿದ್ದಾರೆ. 'ಅಜ್ಜಿ.. ನಂಗೆ ಸ್ವಲ್ಪ ನೀಲ ಕೊಡುತ್ತೀಯಾ' ನಯನ ಅಜ್ಜಿಯಲ್ಲಿ ಕೇಳಿದಳು. 'ಯಾಕೆ ಮಗೂ..?' ಅಜ್ಜಿ ಕೇಳಿದಳು. 'ನನಗೆ ಚಿತ್ರಕ್ಕೆ ಬಣ್ಣ ಹಚ್ಚಲು..' ಅವಳು ಬೆರಳುಗಳನ್ನು ನೀಲದಲ್ಲಿ ಮುಳುಗಿಸಿ ಕಾಗದದಲ್ಲಿ ಒತ್ತಿದಳು. 'ಇದು ಅಜ್ಜಿ. ಇದು ಅಪ್ಪ.. ಹಾಯ್ ಎಷ್ಟು ಚಂದ..' ಅವಳು ಯಾರನ್ನೆಲ್ಲ ಚಿತ್ರಿಸಿರಬಹುದು ?
ಅಧ್ಯಾಪಿಕೆ ಚಾರ್ಟಿನಲ್ಲಿ ನಯನ ಮಾಡಿದ ಚಿತ್ರಗಳನ್ನು ಮಾಡುವರು.
: ಇದರಂತೆ ನಿಮಗೂ ನಿಮ್ಮ ಮನೆಯವರೆಲ್ಲರ ಚಿತ್ರವನ್ನು ಮಾಡಬೇಡವೇ ?

ವರ್ಕ್ ಶೀಟು 1.2 'ನಾನು ಮತ್ತು ನನ್ನ ಮನೆಯವರು' ವಿತರಿಸುವುದು.

: ಸ್ಪಂಜ್ / ಹತ್ತಿಯಲ್ಲಿ ಬಣ್ಣ ಎರೆದು ಎಲೆಯಲ್ಲಿ ಅಥವಾ ಪ್ಲೇಟಿನಲ್ಲಿ ನೀಡುವುದು. ಪ್ರತಿಯೊಬ್ಬರೂ ಬಣ್ಣದಲ್ಲಿ ಬೆರಳು ಮುಳುಗಿಸಿ ಕಾಗದದಲ್ಲಿ ಒತ್ತುವರು.
ಬಣ್ಣ ಒಣಗಿದ ನಂತರ ಬೆರಳು ಚಿತ್ರದಲ್ಲಿ ಕಣ್ಣು, ಮೂಗು, ಬಾಯಿ, ಕಿವಿ ಎಂಬಿವುಗಳನ್ನು ಚಿತ್ರಿಸುವುದು. ತಂದೆ, ತಾಯಿ, ಅಕ್ಕ, ಅಣ್ಣ ...
ಸ್ಟಿಕ್ ಚಿತ್ರಗಳನ್ನು ರಚಿಸುವ ರೀತಿಯನ್ನು ಪರಿಚಯಿಸಬಹುದು.
ಪ್ರತಿಯೊಬ್ಬರೂ ಚಿತ್ರವನ್ನು ಪ್ರದರ್ಶಿಸಿ ಹೇಳುವರು.
ಎಲ್ಲರ ಚಿತ್ರವನ್ನು ಪ್ರದರ್ಶಿಸಿ ಅಸ್ವಾದಿಸುವುದು.

**ಮೌಲ್ಯಮಾಪನ** : ಚಿತ್ರಗಳಲ್ಲಿ ಕಣ್ಣು, ಮೂಗು, ಕಿವಿ, ಬಾಯಿ ಇತ್ಯಾದಿಗಳನ್ನು ರಚಿಸಲಾಗಿದೆ.
- ಚಿತ್ರದ ಆಕರ್ಷಣೆ ಮತ್ತು ನೈಜತೆ.

# ಥೀಂ 2 - ಮನೆ ಮತ್ತು ಪರಿಸರ

ವರ್ಕ್ ಶೀಟುಗಳನ್ನು ಆಖ್ಯಾನದ ಜೊತೆಯಲ್ಲೇ ನೀಡುವುದು ಉಚಿತ. ಆಖ್ಯಾನದ ಮಂಡನೆಯು ಭಾವನಾತ್ಮಕವಾಗಿ ಪೂರ್ಣತೆಗೆ ತಲುಪುವಂತೆಯೂ ಮನೋಚಿತ್ರಗಳು ಮೂಡಲು ಸಹಾಯಕವಾಗುವಂತೆಯೂ ಇರಬೇಕು.

ನಿರ್ಮಾಣ ಚಟುವಟಿಕೆಗಳು ಅಥವಾ ಆಟಗಳಿಗೆ ಸಂಬಂಧಿಸಿದ್ದಾದರೆ ಆ ರೀತಿ ಅಲ್ಲದೆಯೂ ನೀಡಬಹುದು. ಸಮಾನವಾದ ಆಶಯಗಳು ಕೆಲವು ವಿಷಯಗಳಲ್ಲಿ ಆವರ್ತಿಸಬಹುದು. ಉದಾ : ಕುಟುಂಬ, ಮನೆ ಎಂಬಿವುಗಳಲ್ಲಿ ಸದಸ್ಯರ ವಿಷಯಗಳು ಆವರ್ತಿಸಬಹುದು. ಪುನರನುಭವದ ಪ್ರತಿ ಸಂದರ್ಭದಲ್ಲೂ ಹೆಚ್ಚು ಆಳವಾದ ಚರ್ಚೆಯು ನಡೆಯಬೇಕಾಗಿದೆ. ಚಾಕ್ರಿಕವಾದ ಚಟುವಟಿಕಾನುಭವಗಳು ಆಶಯ ರೂಪೀಕರಣವನ್ನು ಬಲಪಡಿಸುವುದು. ಒಂದು ವಿಷಯವನ್ನು ಅದೇ ರೀತಿಯಲ್ಲಿ ಆವರ್ತಿಸುವುದಕ್ಕಿಂತ ಹೊಸ ಅಂಶಗಳನ್ನು ಸೇರಿಸಬಹುದಾದ ಪುನರನುಭವಗಳನ್ನು ನೀಡುವುದು ಉತ್ತಮ. ಚಟುವಟಿಕೆಯ ಸಾಧ್ಯತೆಗಳನ್ನು ಕೆಳಗೆ ನೀಡಲಾಗಿದೆ. ಸೂಕ್ತವಾದವುಗಳನ್ನು ಆರಿಸಿ ಬಳಸಬಹುದು.

**ಚಟುವಟಿಕಾ ಕ್ರಮ**

1. ಸ್ವತಂತ್ರ ಸಂಭಾಷಣೆ [ತಾಯಿಗೆ ಸಂಬಂಧಿಸಿದ ಹಾಡು]

↓

2. ಮನೆಯ ಕುರಿತಾದ ಹಾಡು [.........................]

↓

3. ಆಟ – ಮನೆಗೆ ಸಂಬಂಧಿಸಿದ್ದು [........................]

↓

4. ಕುಟುಂಬದ ಸದಸ್ಯರ ಕಟೌಟುಗಳನ್ನು ಇಟ್ಟು ಹೇಳುವುದು.

↓

5. ಆಖ್ಯಾನ 2.1 [ಚಿತ್ರ ನೋಡಿ ಹೇಳಿರಿ, ಕುಟುಂಬದ ಸದಸ್ಯರಿಗೆ ಬಣ್ಣ ಹಚ್ಚಿರಿ] ವರ್ಕ್ ಶೀಟು ನೀಡುವುದು.

↓

6. ಕಾಗದ ಮಡಚಿ ಮನೆ ನಿರ್ಮಾಣ

↓

7. ಚೆಂಡು ಬದಲಾಯಿಸುವ ಆಟ – ಸ್ವಂತ ಹೆಸರು ಹೇಳುವುದು.

↓

8. ಅಜ್ಜ ಅಜ್ಜಿ ಕಥೆ ಹೇಳುವುದು.

↓

9. ಆಖ್ಯಾನ 2.2 [ಗುಂಪಿನಲ್ಲಿ ಸೇರದ್ದು ಯಾವುದು ?] ವರ್ಕ್ ಶೀಟು ನೀಡುವುದು.

↓

10. ತಾಯಿಯ ಕುರಿತಾದ ಹಾಡು [..........................]

↓

11. ಆಖ್ಯಾನ 2.3 [ಬಣ್ಣ ನೀಡೋಣ] ವರ್ಕ್ ಶೀಟು ನೀಡುವುದು.

↓

12. ನೆನಪಿಸಿ ತೆಗೆಯುವ, ವಸ್ತುಗಳನ್ನು ಬದಲಾಯಿಸುವ ಆಟ ಆವರ್ತನೆ.

↓

13. ಆಖ್ಯಾನ – ಹೊಗೆ ತಟ್ಟೆ (ಸೇಂಡ್ ಟ್ರೇ) ವೀಕ್ಷಣೆ.

↓

14. 2.4 [ಯಾವುದು ದೊಡ್ಡದು ?] ವರ್ಕ್ ಶೀಟು ನೀಡುವುದು.

↓

15. ಮನೆಯೊಳಗಿನ ಕೋಣೆಗಳನ್ನು ಹೇಳುವುದು – ಆಟ.

↓

16. ಬಯಲು ಪ್ರವಾಸ – ಕಂಡ ಮನೆಗಳ ಕುರಿತು ಹೇಳುವುದು.

17. ಮರದ ತುಂಡುಗಳು, ಬಿಲ್ಡಿಂಗ್ ಬ್ಲೋಕುಗಳು ಮೊದಲಾದುವುಗಳನ್ನು ಉಪಯೋಗಿಸಿ ಮನೆ ನಿರ್ಮಾಣ.

↓

18. ಶುಚಿತ್ವ ಅಭ್ಯಾಸಕ್ಕೆ ಸಂಬಂಧಿಸಿದ ಬೊಂಬೆಯಾಟ ಕಾಣುವುದು ಮತ್ತು ಆಡುವುದು.

↓

19. ಜಿಗ್ಸೋ – ಕುಟುಂಬ – ಜಿಗ್ಸೋ ಜೋಡಿಸುವುದು.

↓

20. ಪ್ರಾಣಿಗಳು / ಪಕ್ಷಿಗಳು – ಕಥೆ ಆಲಿಸುವುದು, ಆರಿಸಿದ ಕಥೆಗಳನ್ನು ಹೇಳುವುದು.

↓

21. ಸಾಕುವ ಜೀವಿಗಳಿಗೆ [ಪಕ್ಷಿಗಳು / ಮೀನುಗಳು] ಆಹಾರ ನೀಡುವುದು.

↓

22. ಸರಿಯಾದ ಟೋಯ್ಲೆಟಿಂಗ್ ತರಬೇತಿ.

**ವರ್ಕ್ ಶೀಟು 2.1– ಚಿತ್ರ ನೋಡಿ ಹೇಳಿರಿ. ಕುಟುಂಬದ ಸದಸ್ಯರಿಗೆ ಬಣ್ಣ ಹಚ್ಚಿರಿ.**

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ

* ಭಾಷಾ ವಿಕಾಸ

* ಸಾಮಾಜಿಕ ಭಾವನಾತ್ಮಕ ವಿಕಾಸ

**ಸಾಮರ್ಥ್ಯಗಳು** : 1. ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು [4]

2. ಕಂಡು, ಕೇಳಿ ತಿಳಿದ ಘಟನೆಗಳು, ಅನುಭವಗಳು ಎಂಬಿವುಗಳನ್ನು ಇತರರೊಂದಿಗೆ ಹಂಚಿಕೊಳ್ಳಲು ಸಾಧ್ಯವಾಗುವುದು.[16]

3. ಕಥೆಗಳು, ಅನುಭವಗಳು, ಸಂದರ್ಭಗಳು ಎಂಬಿವುಗಳಲ್ಲಿರುವ ಕಥಾಪಾತ್ರಗಳ ರೋಲ್ ಗಳನ್ನು ಅಭಿನಯಿಸಲು ಸಾಧ್ಯವಾಗುವುದು.

**ಸಂದರ್ಭ** : ಮನೆಯ ಕುರಿತಾದ ಹಾಡು, ಆಟ ಎಂಬಿವುಗಳ ನಂತರ ನೀಡಬಹುದು.

**ಆಶಯ** : ಮನೆಯು ಅಮ್ಮ, ಅಪ್ಪ, ಅಜ್ಜ, ಅಜ್ಜಿ, ಅಕ್ಕ, ಅಣ್ಣ, ತಮ್ಮ, ತಂಗಿ ಎಲ್ಲರೂ ಜೊತೆಯಾಗಿ ವಾಸಿಸುವ ಸ್ಥಳವಾಗಿದೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಪ್ರಕ್ರಿಯೆ**

**ಆಖ್ಯಾನ** : ಇಂದು ರಜಾದಿನವಾಗಿದೆ. ಮೀರ ಮತ್ತು ರವಿ ಆಟಕ್ಕೆ ಹೊರಟರು. ಅಣ್ಣಾ.. ಇವತ್ತು ಯಾವ ಆಟ ಆಡೋಣ? ಕಣ್ಣುಮುಚ್ಚಾಲೆ. ಆದು ಬೇಡ, ಮನೆ ಕಟ್ಟುವ ಆಟ ಆಡೋಣ. ರವಿ ಚೆಂಡು ತೆಗೆದನು. ಅವನು ಚೆಂಡನ್ನು ಟಪ್ಪನೆ ನೆಲಕ್ಕೆ ಎಸೆದನು. ಅದು ನೆಲಕ್ಕೆ ತಾಗಿ ಮೇಲಕ್ಕೆ ಚಿಮ್ಮಿತು. ಕೆಳಗೆ ಬಿದ್ದ ಚೆಂಡು ನೆಲದಲ್ಲಿ ಉರುಳಿತು. ಬೆಕ್ಕು ಚೆಂಡಿನ ಹಿಂದೆ ಓಡಿತು. ಅದು ಚೆಂಡನ್ನು ತಟ್ಟಿ ತಟ್ಟಿ ಉರುಳಿಸಿತು. ಚೆಂಡು ಉರುಳುತ್ತಾ ದನದ ಬಳಿಗೆ ಹೋಯಿತು. ದನ ಚೆಂಡಿಗೆ ಒದೆಯಿತು. ಚೆಂಡು ಮನೆಯ ಮಾಡಿಗೆ ಬಡಿದು ಚಿಮ್ಮಿ ಬಾವಿಗೆ ಬಿತ್ತು. ಅಮ್ಮ ನೀರು ಸೇದಿ ಎರೆದಾಗ ಪಾತ್ರೆಯಲ್ಲಿ ನೀರಿಗೆ ಬದಲಾಗಿ ಒಂದು ಚೆಂಡು ಬಿತ್ತು. ತಾಯಿಗೆ ಆಶ್ಚರ್ಯವಾಯಿತು. ಎಲ್ಲರೂ ಬಿದ್ದು ಬಿದ್ದು ನಕ್ಕರು.

ವರ್ಕ್ ಶೀಟ್ 2.1 - ಚಿತ್ರ ನೋಡಿ ಹೇಳಿರಿ. ಕುಟುಂಬದ ಸದಸ್ಯರಿಗೆ ಬಣ್ಣ ಹಚ್ಚಿರಿ.

- ವಿತರಿಸುವುದು.

: ಚಿತ್ರದಲ್ಲಿ ಏನೆಲ್ಲ ಇದೆ? ಯಾರೆಲ್ಲಾ ಇದ್ದಾರೆ? ಮಕ್ಕಳು ಹೇಳುವರು.

: ಪ್ರತಿಯೊಬ್ಬರೂ ಮಾಡುವ ಕೆಲಸವನ್ನು ಕೇಳುವುದು ಮತ್ತು ಹೇಳುವುದು.

: ಕುಟುಂಬದ ಸದಸ್ಯರಿಗೆ ತಮಗಿಷ್ಟವಿರುವ ಬಣ್ಣ ಹಚ್ಚುವುದು.

: ಚಿತ್ರವನ್ನು ಪ್ರದರ್ಶಿಸುವುದು.

: ಕುಟುಂಬದ ಸದಸ್ಯರ ಕೆಲಸಗಳನ್ನು ಮೂಕಾಭಿನಯ ಮಾಡುವುದು.

**ಅಧ್ಯಾಪಿಕೆಗೆ** : ಗಂಡು ಹೆಣ್ಣು ಭೇದವಿಲ್ಲದೆ ಎಲ್ಲರೂ ಎಲ್ಲಾ ಕೆಲಸಗಳನ್ನು ಮಾಡಬೇಕು. ಎಂಬುದನ್ನು ಚರ್ಚೆಯ ಮೂಲಕ ಮಕ್ಕಳಿಗೆ ಮನದಟ್ಟು ಮಾಡಬೇಕು.

**ಮೌಲ್ಯಮಾಪನ** : ಚಿತ್ರಕ್ಕೆ ಸಂಬಂಧಿಸಿದ ಅನುಭವಗಳು, ಘಟನೆಗಳು ಎಂಬಿವುಗಳನ್ನು ಹೇಳಲು ಸಾಧ್ಯವಾಗುವುದು.

- ಬಣ್ಣ ನೀಡಿದ ಚಿತ್ರಗಳ ಆಕರ್ಷಣೆ
- ಅಭಿನಯ ಸಾಮರ್ಥ್ಯ

## ವರ್ಕ್ ಶೀಟ್ 2.2 - ಗುಂಪಿನಲ್ಲಿ ಸೇರದ್ದು ಯಾವುದು?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ವಸ್ತುಗಳನ್ನು / ಚಿತ್ರಗಳನ್ನು ನಿರೀಕ್ಷಣೆ ಮಾಡಿ ಗುಂಪಿನಲ್ಲಿ ಸೇರದವುಗಳನ್ನು ವರ್ಗೀಕರಿಸುವುದಕ್ಕೂ ಗುಂಪಿನಲ್ಲಿ ಸೇರದಿರಲು ಕಾರಣವನ್ನು ಹೇಳುವುದಕ್ಕೂ ಸಾಧ್ಯವಾಗುವುದು. (33)

**ಆಶಯ** : ಮನೆಯಲ್ಲಿ ಮಂಚ, ಮೇಜು, ಕುರ್ಚಿ, ಪಾತ್ರೆಗಳು ಮೊದಲಾದ ಉಪಕರಣಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟ್

**ಸಂದರ್ಭ** : ಮನೆ ಉಪಕರಣಗಳನ್ನು ಒಗಟಿನ ರೂಪದಲ್ಲಿ ಮಂಡಿಸುವುದು. **ಉದಾ** - ನಾನು ಒಂದು ವಸ್ತುವಿನ ಕುರಿತು ಹೇಳುತ್ತೇನೆ. ಮನೆಯಲ್ಲಿ ಇರುವುದು. ನಾಲ್ಕು ಕಾಲುಂಟು. ಕುಳಿತುಕೊಳ್ಳಲು ಉಪಯೋಗಿಸುವುದು. ನಾನು ಯಾರು? ಇದರಂತೆ ಮನೆಯ ಇತರ ಉಪಕರಣಗಳನ್ನು ಪರಿಚಯಿಸುವುದು.

**ಪ್ರಕ್ರಿಯೆ** : ವರ್ಕ್ ಶೀಟು 2.2 ಗುಂಪಿನಲ್ಲಿ ಸೇರದ್ದು ಯಾವುದು?

- ವಿತರಿಸುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೇನು ಇವೆ?

**ನೋಡಿ ತಿಳಿಯುವ** : ಇವುಗಳಲ್ಲಿ ಒಂದು ಗುಂಪಿಗೆ ಸೇರುವುದಿಲ್ಲ. ಅದಕ್ಕೆ ಉರುಟು ಹಾಕಿರಿ.

: ಗುಂಪಿಗೆ ಸೇರದಿರಲು ಕಾರಣವೇನು?

: ಈ ಚಿತ್ರಕ್ಕಲ್ಲದೆ ಗುಂಪಿನ ಇತರ ಯಾವುದಾದರೂ ಚಿತ್ರಕ್ಕೆ ಯಾರಾದರೂ ಉರುಟು ಹಾಕಿದ್ದಾರೆಯೇ?

: ಇದ್ದರೆ ಅದಕ್ಕೆ ಕಾರಣ ಹೇಳಬಹುದೇ?

: ಉತ್ತರ ಯುಕ್ತಿಯುಕ್ತವಾದಲ್ಲಿ ಅಂಗೀಕರಿಸಿ ಅಭಿನಂದನೆಯನ್ನು ಸಲ್ಲಿಸುವುದು.

**ಅಧ್ಯಾಪಿಕೆಗೆ** : ಮನೆ ಉಪಕರಣ ಎಂಬ ಆಶಯದ ರೂಪೀಕರಣ ಪ್ರತಿಯೊಂದಕ್ಕೂ ಬೇರೆ ಬೇರೆ ಉಪಯೋಗಗಳಿವೆ ಎಂಬ ರೀತಿಯಲ್ಲಿ ಚರ್ಚೆಯನ್ನು ಕ್ರೋಡೀಕರಿಸಬೇಕು.

**ಮೌಲ್ಯಮಾಪನ** : ಗುಂಪಿನಲ್ಲಿ ಸೇರದ್ದನ್ನು ಕಂಡುಕೊಳ್ಳಲಾಗಿದೆ.

- ಕಂಡುಕೊಂಡುದರ ಯುಕ್ತಿಯನ್ನು ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟು 2.3 - ಬಣ್ಣ ಹಚ್ಚುವ

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ

* ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯಗಳು** : ಪೆನ್ಸಿಲ್/ಕ್ರಯೋನ್ಸ್ ಬಳಸಿ ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು. (4)

: ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರದ ಮೂಲಕ ಪ್ರಕಟಪಡಿಸುವುದಕ್ಕೂ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು. (79)

**ಆಶಯ** : ಹಲವು ವಿಧದ ಸಸ್ಯಗಳನ್ನು ಮನೆಯ ಸುತ್ತುಮುತ್ತಲು ನೆಟ್ಟು ಬೆಳೆಸುತ್ತಾರೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ಬಯಲು ಪ್ರವಾಸದ ವೇಳೆಯಲ್ಲಿ ಕಂಡ ದೃಶ್ಯಗಳನ್ನು ಹೇಳಿದ ನಂತರ ಅವುಗಳಲ್ಲಿ ಕೆಲವನ್ನು ಚಿತ್ರ ಮಾಡುವುದು. ಹೂವಿನ ಚಿತ್ರವನ್ನು ಮಾಡುವುದು.

**ಪ್ರಕ್ರಿಯೆ** :

**ಆಟ** :

ಹೂವು ಹೂವು ಚಿನ್ನದ ಹೂವು
ಹಳದಿ ಬಣ್ಣದಿ ಅರಳಿದ ಹೂವು
ಪರಿಮಳ ಸೂಸುವ ಸುಂದರ ಹೂವು

ಈ ಹೂವಿನ ಹೆಸರು ಹೇಳುವಿರಾ? ಎಂದು ಅಧ್ಯಾಪಿಕೆಯು ಹಾಡಿ ನಿಲ್ಲಿಸಿದ ಬಳಿಕ ಒಂದು ಮಗುವನ್ನು ತೋರಿಸುವುದು. ಆಗ ಆ ಮಗು ಒಂದು ಹೂವಿನ ಹೆಸರನ್ನು ಹೇಳಬೇಕು. ಆ ಹೂವಿನ ಕುರಿತು ಒಂದು ವಿಷಯವನ್ನು ಹೇಳಬೇಕು. ನಂತರ ಅಧ್ಯಾಪಿಕೆ ಹಾಡನ್ನು ಮುಂದುವರಿಸುವುದು. ಆಟ ಮುಂದುವರಿಯುವುದು.

ವರ್ಕ್ ಶೀಟು 2.3 ಬಣ್ಣ ಹಚ್ಚುವ – ನೀಡುವುದು.

: ಬಣ್ಣ ಹಚ್ಚುವುದು.

: ಹೂ ಚಟ್ಟಿಗೂ, ಹೂವಿಗೂ, ಎಲೆಗಳಿಗೂ ಬೇರೆ ಬೇರೆ ಬಣ್ಣ ನೀಡಲಿ.

: ಎಲ್ಲರ ಚಿತ್ರಗಳನ್ನು ಒಟ್ಟಾಗಿ ಪ್ರದರ್ಶಿಸಿ ಆಸ್ವಾದಿಸುವುದು.

**ಅಧ್ಯಾಪಿಕೆಗೆ** : ಎಲೆಗಳು, ಎಸಳುಗಳು ಎಂಬಿವುಗಳನ್ನು ಎಣಿಸಿ ನೋಡುವುದಕ್ಕಿರುವ ಸಂದರ್ಭದಲ್ಲಿ ವರ್ಕ್ ಶೀಟಿನ ಪುನರುಪಯೋಗ ಸಾಧ್ಯತೆಯ ಪ್ರಯೋಜನವನ್ನು ಪಡೆಯಬಹುದು. ಹೂಗಳಿಗೆ ನೀಡಿದ ಬಣ್ಣದ ಕುರಿತು ಚರ್ಚಿಸಬೇಕು. ಯಾವೆಲ್ಲ ಹೂಗಳಿಗೆ ಕೆಂಪು ಬಣ್ಣ ಇರುವುದು? ಇತ್ಯಾದಿ...

**ಮೌಲ್ಯಮಾಪನ** : ಹೂವು, ಎಲೆಗಳು, ಹೂ ಚಟ್ಟಿ ಎಂಬಿವುಗಳಿಗೆ ಬೇರೆ ಬೇರೆ ಬಣ್ಣಗಳನ್ನು ನೀಡಲಾಗಿದೆ.

: ಆಕರ್ಷಕವಾಗಿ ಬಣ್ಣ ಹಚ್ಚಲಾಗಿದೆ.

: ಹೂಗಳ ಕುರಿತಾದ ಆಶಯಗಳನ್ನು ಮಂಡಿಸಲಾಗಿದೆ.

## ವರ್ಕ್ ಶೀಟು 2.4 - ಯಾವುದು ದೊಡ್ಡದು?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ವಸ್ತುಗಳನ್ನು ಗಾತ್ರಕ್ಕನುಸರಿಸಿ ವರ್ಗೀಕರಿಸಿ ಕ್ರಮೀಕರಿಸಲು ಸಾಧ್ಯವಾಗುವುದು. (41)

**ಆಶಯ** : ಮನೆಯು ಕುಟುಂಬದ ಸದಸ್ಯರೆಲ್ಲರೂ ಜೊತೆಯಾಗಿ ವಾಸಿಸುವ ಸ್ಥಳವಾಗಿದೆ. (ಹಲವು ಬಗೆಯ ಮನೆಗಳು)

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ಹ್ಯೊಗೆ ತಟ್ಟೆ ಉಪಯೋಗಿಸಿ ಕಥೆ ಮಂಡಿಸಿದ ನಂತರ

**ಪ್ರಕ್ರಿಯೆ** : ಸೌಹಾರ್ದ ಸಂಭಾಷಣೆ - ಬೆಳಗ್ಗೆ ಏನನ್ನು ತಿಂದಿರಿ? ಎಂದು ಪ್ರತಿಯೊಬ್ಬರಲ್ಲೂ ಕೇಳುವುದು. ಅಧ್ಯಾಪಿಕೆ ಕರಿಹಲಗೆಯಲ್ಲಿ ಒಂದು ವೃತ್ತವನ್ನು ರಚಿಸುವರು.

ಇಂದು ನೀವು ತಿಂದ ಆಹಾರದ ಹೆಸರುಗಳನ್ನು ಹೇಳಬಹುದೇ?

**ಆಟ** : ದೋಸೆ, ಚಪಾತಿ, ಓಡುಪಾಳೆ, ಇಡ್ಲಿ ..... (ಸ್ವತಂತ್ರ ಪ್ರತಿಕ್ರಿಯೆ) ನಂತರ ಅಧ್ಯಾಪಿಕೆ ನೆಲದಲ್ಲಿ ಎರಡು ಸಣ್ಣ ವೃತ್ತಗಳನ್ನೂ ಎರಡು ದೊಡ್ಡ ವೃತ್ತಗಳನ್ನೂ ರಚಿಸುವರು.

ವೃತ್ತ, ವೃತ್ತ, ವೃತ್ತ

ಬೇಗನೆ ಹಾರಿ ವೃತ್ತಕ್ಕೆ

ಎಂದು ಅಧ್ಯಾಪಿಕೆ ತಾಳಾತ್ಮಕವಾಗಿ ಹೇಳುವುದು. ನಂತರ, ದೊಡ್ಡ ವೃತ್ತ ಎಂದು ಅಧ್ಯಾಪಿಕೆ ಹೇಳಿದರೆ ಮಕ್ಕಳು ದೊಡ್ಡ ವೃತ್ತದೊಳಗೆ ಹಾರಬೇಕು. ಸಣ್ಣ ವೃತ್ತವೆಂದು ಹೇಳಿದರೆ ಸಣ್ಣ ವೃತ್ತಗಳಿಗೆ ಹಾರಬೇಕು. ಹಾರುವಾಗ ತಪ್ಪಿದರೆ ಉಳಿದವರು ಛೇ.. ಛೇ.. ಛೇ.. ಛೇ.. ಎಂದು ಹೇಳಬೇಕು.

: ನಂತರ ಹಾಡು ಹಾಡುವುದು.

ಯಾವುದು ದೊಡ್ಡದು? ಯಾವುದು ಚಿಕ್ಕದು?

ಆನೆಯು ದೊಡ್ಡದು ಆಮೆಯು ಚಿಕ್ಕದು

ಯಾವುದು ದೊಡ್ಡದು? ಯಾವುದು ಚಿಕ್ಕದು?

ಸೀರೆಯು ದೊಡ್ಡದು ಬೈರಾಸು ಚಿಕ್ಕದು

.................... ..........................

.................... ..........................

ಹೀಗೆ ಸಾಲುಗಳನ್ನು ಸೇರಿಸಿ ಹಾಡಬೇಕು.

ವರ್ಕ್ ಶೀಟು 2.4 ಯಾವುದು ದೊಡ್ಡದು - ವಿತರಿಸುವುದು.

**ಚಿತ್ರ ಓದು** : ಚಿತ್ರದಲ್ಲಿ ಏನಿದೆ ?

- ಎರಡು ಮನೆಗಳು ಒಂದೇ ರೀತಿ ಇವೆಯೇ?
- ಯಾವೆಲ್ಲಾ ವ್ಯತ್ಯಾಸಗಳಿವೆ?
- ಸರಳ ಪ್ರಶ್ನೆಗಳ ಮೂಲಕ ಮನೆಗಳ ಸಾಮ್ಯ ವ್ಯತ್ಯಾಸಗಳನ್ನು ಕಂಡುಕೊಳ್ಳಲು ಸಹಾಯ ಮಾಡಬಹುದು. (ಕೋಣೆಗಳು, ಮಾಡು)
- ಇದರಲ್ಲಿ ದೊಡ್ಡ ಮನೆ ಯಾವುದು? ಮುಟ್ಟಿ ತೋರಿಸು.
- ಸಣ್ಣ ಮನೆಯನ್ನು ಮುಟ್ಟಿ ತೋರಿಸಿರಿ.
- ಮನೆಗಳಿಗೆ ಬಣ್ಣ ಹಚ್ಚಿರಿ. ಮೊದಲು ಸಣ್ಣ ಮನೆಗೆ. ನಂತರ ದೊಡ್ಡ ಮನೆಗೆ.
- ಅಧ್ಯಾಪಿಕೆ ಮೌಲ್ಯಮಾಪನ ಮಾಡುವುದು.

**ಮೌಲ್ಯಮಾಪನ** : ದೊಡ್ಡದು, ಸಣ್ಣದು ಕಂಡುಕೊಳ್ಳಲು ಸಾಧ್ಯವಾಗುವುದು.

- ಮನೆಗೆ ಬಣ್ಣ ಹಚ್ಚಲಾಗಿದೆ.
- ಸೂಕ್ತವಾದ ಬಣ್ಣವನ್ನು ನೀಡಲಾಗಿದೆ.

# ಥೀಂ 3 – ನಾನು ಮತ್ತು ನನ್ನ ಶರೀರ

**ವರ್ಕ್ ಶೀಟುಗಳನ್ನು ವೈಯಕ್ತಿಕವಾಗಿ ಪೂರ್ತಿಗೊಳಿಸಬೇಕು. ಸೂಚನೆಗಳನ್ನು ಸರಳಗೊಳಿಸಬೇಕು. ಚಿಂತನೆಗೆ ಅವಕಾಶ ನೀಡಬೇಕು. ಸ್ವತಃ ಕಂಡುಕೊಳ್ಳಬೇಕಾದವುಗಳನ್ನು ಅವರೇ ಮಾಡಬೇಕು. ಗೆರೆ ಎಳೆದು ಜೋಡಿಸಲು ಕಷ್ಟವಾದಲ್ಲಿ ಚಿಂತನೆಯನ್ನು ಉದ್ದೀಪನಗೊಳಿಸಲು ಸಹಾಯಕವಾದ ಪ್ರಶ್ನೆಗಳನ್ನು ಕೇಳಬೇಕು. ಬೆಂಬಲ ನೀಡಿ ಸರಿಯಾದ ರೀತಿಯಲ್ಲಿ ಪೂರ್ತಿಗೊಳಿಸಲು ಸಹಾಯ ಮಾಡಬೇಕು.**

**ಚಟುವಟಿಕಾ ಕ್ರಮ**

1. ಬೊಂಬೆಯನ್ನು ತಯಾರಿಸುವ.

ಕೈ, ಕಾಲು, ತಲೆ ಬೇರ್ಪಡಿಸಲು ಸಾಧ್ಯವಾಗುವ ಬೊಂಬೆಗಳು - ಅವುಗಳನ್ನು ಯಥಾ ಸ್ಥಾನದಲ್ಲಿ ಜೋಡಿಸುವುದು.

↓

2. ಹಾಡು ಹಾಡುವುದು.

ನನ್ನ ಚಿಕ್ಕ ಬೊಂಬೆ
ತಲೆ ಸುತ್ತುವ ಬೊಂಬೆ
ಕೈ ಎತ್ತುವ ಬೊಂಬೆ
ಕಾಲೆತ್ತುವ ಬೊಂಬೆ

ಸಾಲುಗಳಿಗನುಸರಿಸಿ ಬೊಂಬೆಯನ್ನು ಆಡಿಸುವುದು.

↓

3. ಬೊಂಬೆಯನ್ನು ಎಬ್ಬಿಸುವ

ಎಲ್ಲರ ಬೊಂಬೆಗಳು ನಿದ್ದೆ ಮಾಡುತ್ತಿವೆ (ಮಲಗಿಸುವುದು) ಅಧ್ಯಾಪಿಕೆ ಬಿಗ್ ಪಿಕ್ಚರ್ ಕೇನ್ವಾಸ್ ನಲ್ಲಿ ಸೂರ್ಯನ ಚಿತ್ರವನ್ನು ಅಂಟಿಸುವರು. ಕೆಳಗೆ ಕೋಳಿಯ ಚಿತ್ರವನ್ನು ಅಂಟಿಸುವರು. ಮೇಲೆ ಯಾರು? ಕೆಳಗೆ ಯಾರು?

4. ಶಬ್ದಾನುಕರಣೆ - ಕೋಳಿ ಕೂಗುವುದು (ಅಧ್ಯಾಪಿಕೆ ಹಾಗೂ ಮಕ್ಕಳು)

↓

5. ಬೆಳಗ್ಗಿನ ಕಾರ್ಯಗಳು (ಬೊಂಬೆಯ ಹಲ್ಲುಜ್ಜುವುದು, ಸ್ನಾನ ಮಾಡುವುದು, ಬಟ್ಟೆ ಧರಿಸುವುದು, ತಲೆ ಬಾಚುವುದು, ...... ಅಭಿನಯದ ಮೂಲಕ)

ಹಾಡು : ನನ್ನ ಬೊಂಬೆ ಮಗಳು
ಹಲ್ಲು ಉಜ್ಜುತ್ತಾಳೆ.
ನನ್ನ ಬೊಂಬೆ ಮಗಳು
ಸ್ನಾನ ಮಾಡುತ್ತಾಳೆ.
ನನ್ನ ಬೊಂಬೆ ಮಗಳು
ಬಟ್ಟೆ ಧರಿಸುತ್ತಾಳೆ.
ನನ್ನ ಬೊಂಬೆ ಮಗಳು
ತಲೆ ಬಾಚುತ್ತಾಳೆ.

ಒಳ್ಳೆಯ ಬೊಂಬೆ ಮಗಳಾಗಿ ಶಾಲೆಗೆ ಹೋಗುತ್ತಾಳೆ. ಅಧ್ಯಾಪಿಕೆ ಅಭಿನಯ ಮಾಡುವುದಕ್ಕನುಸರಿಸಿ ಸಾಲುಗಳನ್ನು ಸೇರಿಸಿ ಹಾಡುವುದು.

↓

6. ವರ್ಕ್ ಶೀಟು 3.1 (ನಾನು ಸ್ವತಃ ಮಾಡುವುದು - ವಿತರಿಸುವುದು.)

↓

7. ಬೆರಳು ಬೊಂಬೆಗಳನ್ನುಪಯೋಗಿಸಿ ಸಂಭಾಷಣೆ.

ಕಥಾಪಾತ್ರಗಳು-ಅಮ್ಮ/ಅಧ್ಯಾಪಿಕೆ, ಮಗು (ವಿಷಯ–ಉಗುರು ಕತ್ತರಿಸಬೇಕಾದ ಅಗತ್ಯ)

ವರ್ಕ್ ಶೀಟು 3.2 (ಗೆಳೆಯನನ್ನು ಕಂಡುಹಿಡಿಯುವ – ನೀಡುವುದು.)

↓

8. ಬಯಲು ಪ್ರವಾಸ (ತರಗತಿ ಮತ್ತು ಪರಿಸರ) ನಿರೀಕ್ಷಣೆ ಮಾಡುವುದು.

(ಯಾವೆಲ್ಲ ರೀತಿಯ ಕಸಕಡ್ಡಿಗಳು)

↓

9. ತರಗತಿಯಲ್ಲಿ ಕಸದ ಬುಟ್ಟಿಯ ನಿರ್ಮಾಣ

ಕಾಗದದ ಪೆಟ್ಟಿಗೆ / ಕಾರ್ಡುಬೋರ್ಡು ಪೆಟ್ಟಿಗೆಯನ್ನು ಅಂದಗೊಳಿಸುವುದು.

(ಬಾಲ ಮಾಸಿಕದ ಚಿತ್ರಗಳು, ಬಣ್ಣದ ಕಾಗದಗಳನ್ನು ಅಂಟಿಸಿ)

↓

10. ಕಸದ ಬುಟ್ಟಿಯಲ್ಲಿ ಏನೆಲ್ಲಾ ಕಸಗಳನ್ನು ಹಾಕಬಹುದು?

ಚರ್ಚೆ ಮತ್ತು ಅರುಣನ ಕೋಣೆ (ಆಖ್ಯಾನ)

ವರ್ಕ್ ಶೀಟು 3.3 (ಕೋಣೆ ಶುಚಿ ಮಾಡಬಹುದೇ? - ವಿತರಿಸುವುದು.)

↓

11. ಗುಬ್ಬಿ ಹಾಕುವ, ಮಡಚಿ ಇಡುವ

ನಾವೂ ಮಾಡಬಹುದು. ಗುಬ್ಬಿ ಹಾಕುವುದು, ಅಟ್ಟಿ ಇಡುವುದು. (ಅಂಗಿಗಳನ್ನು ಸಂಗ್ರಹಿಸಬೇಕು.)

↓

12. ಗುಂಪು ಹಾಡು (ಪರಿಸರ ಶುಚಿತ್ವಕ್ಕೆ ಸಂಬಂಧಿಸಿದ್ದು)

↓

13. ಅರುಣನ ಚೆಂಡುಗಳು - ವಿವಿಧ ಗಾತ್ರದಲ್ಲಿರುವ ಚೆಂಡುಗಳಿಂದ ಒಂದೇ ಗಾತ್ರದ ಚೆಂಡುಗಳನ್ನು ಕಂಡುಹಿಡಿದು ಪ್ರತ್ಯೇಕ ಪೆಟ್ಟಿಗೆಗಳಲ್ಲಿ ತೆಗೆದಿಡುವುದು.

↓

14. ಕ್ರಮೀಕರಿಸುವ – ಗಾತ್ರಕ್ಕನುಸರಿಸಿ ಚೆಂಡುಗಳನ್ನು ಸಾಲಾಗಿ ಇಡುವುದು.

↓

15. ಕಥೆಯನ್ನು ಆಲಿಸುವುದು. (ವಿಷಯ – ಶುಚಿತ್ವವನ್ನು ಪಾಲಿಸದ ಕಾರಣ ರೋಗಗಳು ಬರುವುದು.)

↓

16. ವಿಡಿಯೋ ಪ್ರದರ್ಶಿಸುವುದು - ಕಂಡದ್ದು ಹೇಳುವ (ಪರಿಸರ ಮಾಲಿನ್ಯ)

↓

17. ವರ್ಕ್ ಶೀಟು 3.4 (ಕೈ ಒತ್ತಿರಿ, ಚಿಟ್ಟೆಯ ಚಿತ್ರ ಬಿಡಿಸಿರಿ)

↓

18. ಕೈ ತೊಳೆಯುವ ಆಟ, ಕೈ ಒರೆಸುವ ಆಟ.

## ವರ್ಕ್ ಶೀಟು 3.1 – ನಾನು ಸ್ವತಃ ಮಾಡುವುದು.

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಆರೋಗ್ಯ ಅಭ್ಯಾಸ, ಶುಚಿತ್ವ ಅಭ್ಯಾಸ ಮೊದಲಾದುವುಗಳ ಕುರಿತು ತಿಳಿಯುವುದು. (36)

**ಆಶಯ** : ಶರೀರವನ್ನು ಶುಚಿತ್ವದಿಂದ ಕಾಪಾಡಬೇಕು. (ಸ್ನಾನ ಮಾಡಬೇಕು, ಹಲ್ಲುಜ್ಜಬೇಕು, ಉಗುರು ಕತ್ತರಿಸಬೇಕು, ಶುಚಿಯಾದ ಬಟ್ಟೆಬರೆಗಳನ್ನು ಧರಿಸಬೇಕು.)

**ಸಾಮಗ್ರಿ** : ವರ್ಕ್ ಶೀಟು

**ಸಂದರ್ಭ** : ನನ್ನ ಬೊಂಬೆ ಮಗಳು - ಹಾಡಿನ ನಂತರ ಮಂಡಿಸಬೇಕು.

**ಪ್ರಕ್ರಿಯೆ** :

**ಆಖ್ಯಾನ** : ಮನೋಜ್ ಮತ್ತು ಮಿನಿ ಒಂದೇ ಮನೆಯವರು. ತಂದೆ ತಾಯಿಗೂ ಅಧ್ಯಾಪಕರಿಗೂ ಅವರ ಕುರಿತು ಒಳ್ಳೆಯ ಅಭಿಪ್ರಾಯ ಮಾತ್ರ. ಸಮರ್ಥರಾದ ಮಕ್ಕಳು. ಬೆಳಗ್ಗೆ ಏಳುತ್ತಾರೆ, ಎಲ್ಲಾ ಕೆಲಸಗಳನ್ನು ಸ್ವಂತವಾಗಿ ಮಾಡುತ್ತಾರೆ.

ಅವರು ಏನೆಲ್ಲಾ ಮಾಡುತ್ತಾರೆಂದು ತಿಳಿಯಬೇಕೇ? ಬೆಳಗ್ಗೆ ಮೊದಲು ಮಾಡಿದ್ದು ಏನಾಗಿರಬಹುದು?

ವರ್ಕ್ ಶೀಟು 3.1 – ನಾನು ಸ್ವತಃ ಮಾಡುವುದು - ವಿತರಿಸುವುದು.

: ಚಿತ್ರ ನೋಡಿ, ಮಾಡುವ ಕೆಲಸಗಳನ್ನು ಹೇಳುವುದು.

- ಇದರಲ್ಲಿ ನೀವು ಸ್ವತಃ ಯಾವುದನ್ನೆಲ್ಲ ಮಾಡುತ್ತೀರಿ? ಅವುಗಳಿಗೆ ಉರುಟು ಹಾಕಿರಿ. ನಂತರ ಚಟುವಟಿಕೆಗಳನ್ನು ಮೂಕಾಭಿನಯ ಮಾಡುವುದು.

**ಮೌಲ್ಯಮಾಪನ** : ಚಿತ್ರದಲ್ಲಿರುವ ಶುಚಿತ್ವ ಅಭ್ಯಾಸಗಳನ್ನು ಗುರುತಿಸಲಾಗಿದೆ. ಸ್ವತಃ ಮಾಡುವವುಗಳಿಗೆ ಉರುಟು ಹಾಕಲಾಗಿದೆ.

## ವರ್ಕ್ ಶೀಟು 3.2 – ಗೆಳೆಯನನ್ನು ಕಂಡುಹಿಡಿಯುವ

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಆರೋಗ್ಯ ಅಭ್ಯಾಸಗಳು / ಶುಚಿತ್ವ ಅಭ್ಯಾಸಗಳು ಎಂಬಿವುಗಳ ಕುರಿತು ತಿಳಿಯುವುದು.

**ಆಶಯಗಳು** : ಶರೀರವನ್ನು ಶುಚಿಯಾಗಿ ಕಾಪಾಡಬೇಕು.

- ಶರೀರವನ್ನು ಶುಚಿಯಾಗಿರಿಸದಿದ್ದರೆ ರೋಗ ಬರಬಹುದು.

**ಸಾಮಗ್ರಿಗಳು** : ಶುಚಿತ್ವಕ್ಕೆ ಬಳಸುವ ವಸ್ತುಗಳು.

**ಸಂದರ್ಭ** : ಶುಚಿತ್ವ ಅಭ್ಯಾಸಗಳ ಕುರಿತು (ಸ್ನಾನ ಮಾಡುವುದು, ಹಲ್ಲುಜ್ಜುವುದು, ಉಗುರು ಕತ್ತರಿಸುವುದು) ಹಾಗೂ ಅವುಗಳನ್ನು ಪಾಲಿಸುವುದಕ್ಕೆ ಅಗತ್ಯವಿರುವ ವಸ್ತುಗಳ ಕುರಿತು ಚರ್ಚೆಯ ನಂತರ ವರ್ಕ್ ಶೀಟು ಮಂಡಿಸಬಹುದು.

**ಪ್ರಕ್ರಿಯೆ** :

**ಆಖ್ಯಾನ** : ಅಧ್ಯಾಪಿಕೆ ಒಂದು ಕಥೆ ಹೇಳುವುದು...

: ಒಂದು ಊರಿನಲ್ಲಿ ಒಂದು ಮನೆ ಇತ್ತು. ಒಂದು ದಿನ ಬೆಳಗ್ಗಿನಿಂದ ಮನೆಯವರೆಲ್ಲರಿಗೂ ಏನೇನೋ ಸಮಸ್ಯೆಗಳು. ಎಲ್ಲರಿಗೂ ಮರೆವು. ಹಲವು ಕಾರ್ಯಗಳು ಮರೆತುಹೋದವು. ಆಡುಗೆ ಕೋಣೆಯಲ್ಲಿ ಅಮ್ಮ ಗಂಜಿಗಾಗಿ ಒಲೆಯಲ್ಲಿ ನೀರಿಟ್ಟಳು. ಆದರೆ ಬೆಂಕಿ ಹಚ್ಚಲು ಮರೆತು ಬಿಟ್ಟಳು. ಅಪ್ಪ ಕೆಲಸಕ್ಕೆ ಹೋಗಲು ಅಂಗಿ ಹಾಕಿದರು. ಆದರೆ ಗುಬ್ಬಿ ಹಾಕಲು ಮರೆತರು. ಅಭಿ ಸ್ನಾನ ಮಾಡಿ ಬಂದನು. ಕನ್ನಡಿಯ ಮುಂದೆ ನಿಂತನು. ಏನೋ ಮರೆತು ಹೋಯ್ತು. ನಿವೇದನಿಗೂ ಸ್ನಾನ ಮಾಡಬೇಕು. ಪೈಪು ತೆರೆದನು. ಬಕೆಟಿನಲ್ಲಿ ನೀರು ತುಂಬಿಸಿದನು. ಓ ಮರೆತೇ ಹೋಯ್ತಲ್ಲ... ಅಭಿ ಹೂದೋಟಕ್ಕೆ ಹೋಗುತ್ತಿದ್ದಾನೆ. ನಿನ್ನೆ ಕಂಡ ಮೊಗ್ಗು ಅರಳಿರಬಹುದೇ? ಆತ ಜಗಲಿಗೆ ಬಂದನು. ಅಯ್ಯೋ.. ಮರೆತೇ ಹೋಯ್ತಲ್ಲ. ಕಾಲಿಗೆ ಮಣ್ಣಾಗಿಲ್ಲಿಕ್ಕಿಲ್ವೇ? ಅಂಜು ಟೋಯ್ಲೆಟಿಗೆ ಹೋಗಿ ಬಂದಳು. ಕೈ ತೊಳೆಯಬೇಕು. ನೀರು ಮಾತ್ರ ಸಾಲದಲ್ಲವೇ? ನಿವೇದನಿಗೆ ಹಲ್ಲುಜ್ಜಬೇಕು. ಆತ ಪೇಸ್ಟ್ ತೆಗೆದನು. ಅಯ್ಯೋ.. ಮರೆತೇ ಹೋಯ್ತಲ್ಲಾ.. ಪ್ರತಿಯೊಂದು ಚಿತ್ರದ ಸಹಾಯದಿಂದ ಕಥಾಪಾತ್ರಗಳು ಏನು ಮಾಡುತ್ತಿವೆಯೆಂಬುದನ್ನು ಕಂಡುಕೊಂಡು ಹೇಳಲಿ. ಪ್ರತಿಕ್ರಿಯೆ ಪೂರ್ಣವಾದ ಬಳಿಕ ವರ್ಕ್ ಶೀಟಿನಲ್ಲಿ ಗೆರೆ ಎಳೆದು ಜೋಡಿಸಿದರೆ ಸಾಕು.

- ಚಿತ್ರ ನಿರೀಕ್ಷಣೆ

ವರ್ಕ್ ಶೀಟು 3.2 – ಗೆಳೆಯನನ್ನು ಕಂಡುಹಿಡಿಯುವ – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಕಾಣುವ ವಿಚಾರಗಳ ಕುರಿತು ಹೇಳುವುದು.

- ಸ್ನಾನ ಮಾಡುವಾಗ ಶರೀರವನ್ನು ಶುಚಿಗೊಳಿಸಲು ಯಾವೆಲ್ಲ ವಸ್ತುಗಳನ್ನು ಬಳಸುತ್ತೇವೆ ? (ಸಾಬೂನು, ಪಚ್ಚೆ ಹೆಸರು ಹುಡಿ, ಸೀಗೆ ಹುಡಿ, ... ಸ್ಥಳೀಯವಾಗಿ ಉಪಯೋಗಿಸುವವುಗಳು ಚರ್ಚೆಯಲ್ಲಿ ಬರಬೇಕು.)
- ನಮ್ಮೂರಿನಲ್ಲಿ ಹಲ್ಲುಜ್ಜಲು ಏನೆಲ್ಲ ಉಪಯೋಗಿಸುತ್ತಾರೆ? (ಟೂತ್ ಬ್ರಶ್, ಪೇಸ್ಟ್, ಉಮಿಕರಿ, ಮಾವಿನ ಎಲೆ, ಮಸಿತುಂಡು, .....)
- ತಲೆ ಬಾಚುವುದಕ್ಕೋ?
- ಉಗುರು ತೆಗೆಯುವುದಕ್ಕೋ?
- ಚರ್ಚೆಯ ನಂತರ ವರ್ಕ್ ಶೀಟಿನಲ್ಲಿ ಅನುಯೋಜ್ಯವಾದುವುಗಳನ್ನು ಗೆರೆ ಎಳೆದು ಜೋಡಿಸುವುದು.
- ಶುಚಿತ್ವವನ್ನು ಪಾಲಿಸದಿದ್ದರೆ ಏನು ಸಂಬಂಧವಿಸಬಹುದು? ಚರ್ಚೆ, ಕ್ರೋಡಿಕರಣ.

**ಮೌಲ್ಯಮಾಪನ** : ಸೂಕ್ತವಾದುವುಗಳನ್ನು ಗೆರೆ ಎಳೆದು ಜೋಡಿಸಲು ಸಾಧ್ಯವಾಗಿದೆ.

- ಚರ್ಚೆಯಲ್ಲಿ ಭಾಗವಹಿಸಿ ಸ್ವಂತ ಅಭಿಪ್ರಾಯಗಳನ್ನು ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟು 3.3 – ಕೋಣೆಯನ್ನು ಶುಚಿಗೊಳಿಸಬಹುದೇ?

**ವಿಕಾಸ ಮಂಡಲ :** * ವೈಜ್ಞಾನಿಕ ವಿಕಾಸ
* ಸಾಮಾಜಿಕ ವಿಕಾಸ
* ಭಾಷಾ ವಿಕಾಸ

**ಸಾಮರ್ಥ್ಯಗಳು** : ಆರೋಗ್ಯ / ಶುಚಿತ್ವ ಅಭ್ಯಾಸಗಳ ಕುರಿತು ತಿಳಿಯುವುದು. (36)
- ವಸ್ತುಗಳ ಹಾಗೂ ಘಟನೆಗಳ ಚಿತ್ರಗಳನ್ನು ನಿರೀಕ್ಷಣೆ ಮಾಡಿ ವಿವರಗಳನ್ನು ಹಾಗೂ ಕಂಡುಕೊಂಡ ಅಂಶಗಳನ್ನು ಮಂಡಿಸಲು ಸಾಧ್ಯವಾಗುವುದು. (21)

**ಆಶಯ** : ತರಗತಿ, ಮನೆ ಹಾಗೂ ಪರಿಸರವನ್ನು ಶುಚಿತ್ವದಿಂದ ಕಾಪಾಡಬೇಕು.

**ಸಾಮಗ್ರಿಗಳು** : ವರ್ಕ್ ಶೀಟು

**ಪ್ರಕ್ರಿಯೆ** :

**ಆಖ್ಯಾನ** : ಅಭಿಯ ಮನೆಯ ಕೋಣೆಗಳಲ್ಲಿ ವಸ್ತುಗಳೆಲ್ಲ ಚಲ್ಲಾಪಿಲ್ಲಿಯಾಗಿ ಬಿದ್ದುಕೊಂಡಿವೆ. ಅಭಿಯ ಗೆಳೆಯರಾದ ಬೆಕ್ಕು ಮತ್ತು ನಾಯಿ ಆಟವಾಡುವುದು. ಯಾವಾಗಲೂ ಆಟವೇ ಆದುದರಿಂದ ಯಾವುದನ್ನೂ ಅಚ್ಚುಕಟ್ಟಾಗಿ ತೆಗೆದಿರಿಸುವ ಕ್ರಮವಿಲ್ಲ. ಬೆಳಗ್ಗೆ ನೋಡಿದ್ರೆ ಪುಸ್ತಕ ಕಾಣ್ಲೆಕ್ಕಿಲ್ಲ, ಪೆನ್ಸಿಲ್ ಸಿಗ್ಲಿಕ್ಕಿಲ್ಲ, ಏನು ಅಭಿ ಹೀಗೇ? ನಾನು ಸಹಾಯ ಮಾಡ್ತೇನೆ. ಪ್ರತಿಯೊಂದನ್ನು ಆಯಾ ಸ್ಥಳದಲ್ಲಿ ಇಟ್ಟರೆ ಎಷ್ಟು ಚಂದ ಕಾಣಬಹುದು? ಅಂಜು ಹೇಳಿದಳು. ಇಬ್ಬರೂ ಸೇರಿ ಪ್ರತಿಯೊಂದನ್ನು ಆಯಾ ಸ್ಥಳದಲ್ಲಿ ತೆಗೆದಿಟ್ಟರು. ಆಗ ಬೆಕ್ಕು ಓಡಿ ಬಂದು ಹಾರಿತು. ಎಲ್ಲವೂ ತಟಪಟನೆ ಬಿದ್ದಿತು. ಅಂಜು ಬೆತ್ತ ತೆಗೆದಳು. ಬೆಕ್ಕು ಬಾಲ ನಿಮಿರಿಸಿ ಓಡಿತು. ಆಗ ನಾಯಿ ಓಡಿಬಂದು ಜಿಗಿಯಿತು. ಎಲ್ಲವೂ ಪುನಃ ತಟಪಟನೆ ಬಿದ್ದಿತು. ಅಂಜು ಬೆತ್ತ ತೆಗೆದಳು. ನಾಯಿ ಕುಯಿಂ ಕುಯಿಂ ಎನ್ನುತ್ತಾ ಓಡಿತು. ಹೊರಗೆ ನಾಯಿಯ ಕುಯಿಂ ಕುಯಿಂ, ಬೆಕ್ಕಿನ ಮ್ಯಾವ್ ಮ್ಯಾವ್ (ಶಬ್ದಾನುಕರಣೆ) ತುಂಬಾ ಹೊತ್ತಿನ ನಂತರ ಅವುಗಳು ಮೆಲ್ಲ ಮೆಲ್ಲನೆ ಬಂದವು. ನಾವು ಒಳ್ಳೆಯ ಗೆಳೆಯರು. ನಮಗೆ ಹೊಡೆಯಬಾರದು. ಇನ್ನು ನಾವು ಉಪದ್ರ ಮಾಡುವುದಿಲ್ಲ. ಎಲ್ಲವನ್ನೂ ನಾವು ತೆಗೆದಿಡುತ್ತೇವೆ. 'ಒಳ್ಳೆಯದು ಬನ್ನಿ' ಎಲ್ಲರೂ ಸೇರಿ ಶುಚಿಗೊಳಿಸೋಣ.
- ಇದುವೇ ಅಭಿಯ ಕೋಣೆ

ವರ್ಕ್ ಶೀಟು 3.3 – ಕೋಣೆಯನ್ನು ಶುಚಿಗೊಳಿಸಬಹುದೇ? ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಏನೇನು ಇದೆ?
- ಅವುಗಳನ್ನು ಇಡಬೇಕಾದ ಜಾಗ ಯಾವುದು?
- ಪ್ರತಿಯೊಂದನ್ನು ಅವುಗಳ ಸ್ಥಾನಕ್ಕೆ ಗೆರೆ ಎಳೆದು ಜೋಡಿಸುವುದು.

**ಮೌಲ್ಯಮಾಪನ** : ವಸ್ತುಗಳನ್ನು ಗುರುತಿಸಿ ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟು 3.4 – ಕೈ ಒತ್ತಿರಿ.. ಚಿಟ್ಟೆ ಚಿತ್ರ ಬಿಡಿಸಿರಿ.

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ
* ಸೃಜನಾತ್ಮಕ ವಿಕಾಸ

**ಸಾಮರ್ಥ್ಯಗಳು** : ಕೈ ಬೆರಳನ್ನುಪಯೋಗಿಸಿ ಚಿತ್ರ ರಚನೆ (4)

**ಸಾಮಗ್ರಿಗಳು** : ಪೇಪರ್ ಪ್ಲೇಟ್, ಕೋಟ್ಟನ್, ಸ್ಪಂಜು, ಬಣ್ಣ, ಸ್ಕೆಚ್ ಪೆನ್ನುಗಳು.

**ಪ್ರಕ್ರಿಯೆ**

**ಆಖ್ಯಾನ** : ರಹೀಂ ಹೂದೋಟಕ್ಕೆ ತಲುಪಿದನು. ಹೂವು ಅರಳಿದೆ. ಚಂದದ

ಹೂ. ಆತ ಹತ್ತಿರ ಹೋದನು. ಕೈ ನೀಡಿದನು. ಪಕ್ಕನೆ ಹೂವು ಮೇಲೇರಿತು. ಅಯ್ಯೋ! ಇದು ಚಿಟ್ಟೆಯೇ? ಚಿಟ್ಟೆ ತಮಾಷೆ ಮಾಡಿ ನಕ್ಕಿತು. ಆತ ಕೋಣೆಯೊಳಗೆ ಬಂದನು. ಕಾಗದ ಮತ್ತು ಕ್ರಯೋನ್ಸ್ ಗಳನ್ನು ತೆಗೆದುಕೊಂಡನು. ಚಿಟ್ಟೆಯ ಚಿತ್ರವನ್ನು ಮಾಡತೊಡಗಿದನು. ಸರಿಯಾಗುವುದಿಲ್ಲ. ತಾಯಿ ಬಂದರು. ರಹೀಂ ಬೇಸರದಿಂದ ಕುಳಿತಿದ್ದಾನೆ. ಮಗೂ ನಿನ್ನ ಕೈಯಲ್ಲಿ ಬಣ್ಣಗಳಿಲ್ಲವೇ? 'ಇದೆ ಅಮ್ಮಾ' "ಹಾಗಾದರೆ ಚಿಟ್ಟೆಯ ಚಿತ್ರವನ್ನು ಸುಲಭವಾಗಿ ಬಿಡಿಸಬಹುದು." ತಾಯಿ ಹೇಳಿದಂತೆ ರಹೀಂ ಚಿಟ್ಟೆಯ ಚಿತ್ರವನ್ನು ಬಿಡಿಸಿದನು. ಹಾರಾಡುತ್ತಿರುವ ಚಿಟ್ಟೆ ಅದನ್ನು ಕಂಡಿತು. ಆಹಾ! ಎಷ್ಟು ಚಂದ! ರಹೀಂ ನಕ್ಕನು.

ವರ್ಕ್ ಶೀಟು 3.4 – ಕೈ ಒತ್ತಿರಿ.. ಚಿಟ್ಟೆಯ ಚಿತ್ರ ಬಿಡಿಸಿರಿ - ವಿತರಿಸುವುದು.

: ಪೇಪರ್ ಪ್ಲೇಟಿನಲ್ಲಿ ಬಣ್ಣವನ್ನು ತೆಗೆಯುವುದು. (ಸ್ಪಂಜು / ಹತ್ತಿ ಉಪಯೋಗಿಸಿದರೆ ಬಣ್ಣ ಚೆಲ್ಲಿಹೋಗದಂತೆ ನೋಡಬಹುದು.)

- ಮಕ್ಕಳು ಎರಡೂ ಕೈಗಳನ್ನು ಬಣ್ಣದಲ್ಲಿ ಮುಳುಗಿಸಿ ವರ್ಕ್ ಶೀಟಿನಲ್ಲಿರುವ ಚಿಟ್ಟೆಯ ಶರೀರದ ಎರಡೂ ಬದಿಗಳಲ್ಲಿ ಒತ್ತುವುದು.
- ಈಗ ರೆಕ್ಕೆಗಳಿರುವ ಒಂದು ಚಿಟ್ಟೆಯ ಚಿತ್ರ ಸಿಕ್ಕಿತಲ್ಲವೇ?
- ಒಣಗಿದ ನಂತರ ಸ್ಕೆಚ್ ಪೆನ್ನಿನಿಂದ ಚಿಟ್ಟೆಯ ರೆಕ್ಕೆಗಳಲ್ಲಿ ಚುಕ್ಕೆಗಳನ್ನು ರಚಿಸಿ ಆಕರ್ಷಕಗೊಳಿಸಬಹುದು.

**ಮೌಲ್ಯಮಾಪನ** : ಚಿತ್ರದ ಅಂದ

# ಥೀಂ 4 – ಮಳೆ ಮತ್ತು ಹವಾಮಾನ

**ಬಣ್ಣ ಹಚ್ಚುವ ಚಟುವಟಿಕೆಗಳಲ್ಲಿ ಸೂಚನೆಗಳ ಅಗತ್ಯವಿದೆ. ಚಿತ್ರದ ಬದಿಗಳಲ್ಲಿ ಮೊದಲು ಬಣ್ಣ ಹಚ್ಚಬೇಕು. (ಕ್ರಯೋನ್ಸ್, ಸ್ಕೆಚ್ ಪೆನ್ನು, ಜಲವರ್ಣ ಎಂಬಿವುಗಳನ್ನು ಉಪಯೋಗಿಸುವುದು) ಬದಿಗಳಲ್ಲಿ ಬಣ್ಣ ಹಚ್ಚಿದ ನಂತರ ಶ್ರದ್ಧೆಯಿಂದ ಒಳಬದಿಗೆ ಬಣ್ಣ ಹಚ್ಚಲು ಸೂಚಿಸಬೇಕು. ಮಾದರಿಯನ್ನು ತೋರಿಸಬೇಕು. ಅಡ್ಡಕ್ಕೂ ನೀಟಕ್ಕೂ ಹಚ್ಚುವುದನ್ನು ತಡೆಯಬೇಕು. ವಿವಿಧ ಬಣ್ಣಗಳನ್ನು ಹತ್ತಿರ ಹತ್ತಿರ ನೀಡಬೇಕಾದಾಗ (ಕೊಡೆ) ಕಡು ಹಾಗೂ ತಿಳಿಬಣ್ಣವನ್ನು ಎಡೆಬಿಟ್ಟು ನೀಡುವುದು ಒಳ್ಳೆಯದು.**

**ಚಟುವಟಿಕಾ ಕ್ರಮ**

1. ಮೇಜಿಕ್ ಮಳೆ

- ಮಳೆ ಬಾಟಲಿ ಉಪಯೋಗಿಸಿ ಹೇಳಿದಂತೆ ಕೇಳುವ ಮಳೆಯನ್ನು ಬರಿಸುವುದು. (ಒಂದು ಪ್ಲಾಸ್ಟಿಕ್ ಬಾಟಲಿಯ ಅಡಿಯಲ್ಲಿ ತುಂಬಾ ತೂತುಗಳು ಹಾಗೂ ಬದಿಯಲ್ಲಿ ಮೇಲ್ಭಾಗದಲ್ಲಿ ಒಂದು ದ್ವಾರವನ್ನು ಕೊರೆಯಬೇಕು. ಬಾಟಲಿಯಲ್ಲಿ ನೀರು ತುಂಬಿಸಿ ಮುಚ್ಚಳ ಹಾಕಬೇಕು. ಬದಿಯಲ್ಲಿರುವ ತೂತಿನ ಮೇಲೆ ಬೆರಳನ್ನು ಅದುಮಿದರೆ ನೀರು ಸುರಿಯುವುದಿಲ್ಲ. ಬೆರಳನ್ನು ಸಡಿಲಿಸಿದರೆ ನೀರು ಮಳೆಯಂತೆ ಸುರಿಯುವುದು. ಇದುವೇ ಹೇಳಿದಂತೆ ಕೇಳುವ / ಬರುವ ಮಳೆ.)

↓

2. ಪ್ರಶ್ನೋತ್ತರ ಪದ್ಯ

ಮಳೆ ಬಂದಿದೆ ಮಳೆ ಬಂದಿದೆ
ಮಳೆಗೆ ಹೆದರಿ ಓಡಿರಿ
ಮಳೆಯ ಭಯ ನನಗಿಲ್ಲ
ಕೊಡೆಯಿದೇ... ಕೊಡೆಯಿದೇ...
ಮಳೆ ಬಂದಿದೇ... ಮಳೆ ಬಂದಿದೇ...
ಟೊಪ್ಪಿಯಿದೇ... ಟೊಪ್ಪಿಯಿದೇ...
ಕೋಟಿದೇ... ಕೋಟಿದೇ...

ಅಧ್ಯಾಪಿಕೆ, ಕೊಡೆ, ಟೊಪ್ಪಿ, ಮಳೆಕೋಟು ಚಿತ್ರಗಳನ್ನು ತೋರಿಸುವುದಕ್ಕನುಸರಿಸಿ ಮಕ್ಕಳು ಎರಡು ಗುಂಪಾಗಿ ಹಾಡುವುದು.

↓

3. ವರ್ಕ್ ಶೀಟು 4.1 ಕಂಡು ಹಿಡಿಯುವ ಬಣ್ಣ ಕೊಡುವ – ನೀಡುವುದು.

↓

4. ಕೊಡೆ ರಿಲೇ ಆಟ – ಮೂರು ಮಂದಿಯ ಎರಡು ಗುಂಪುಗಳು. ಎರಡೂ ಗುಂಪುಗಳಿಗೂ ಒಂದೊಂದು ಬಿಡಿಸಿದ ಕೊಡೆ. ಓಡಿ ಹೋಗಿ ನಿಗದಿತ ಸ್ಥಳದಲ್ಲಿ ನಿಲ್ಲುವವರಿಗೆ ಕೊಡೆಯನ್ನು ಹಸ್ತಾಂತರಿಸಬೇಕು. ಮೊದಲು ಪೂರ್ತಿ ಮಾಡುವ ಗುಂಪು ಗೆಲ್ಲುವುದು.

↓

5. ಅನುಭವ ಹೇಳುವುದು - ಬಿಡಿಸಿದ ಕೊಡೆಯೊಂದಿಗೆ ಓಡಿದಾಗ ಉಂಟಾದ ಅನುಭವ. ಗಾಳಿ ಬೀಸುವಾಗ ಬಿಡಿಸಿದ ಕೊಡೆಯೊಂದಿಗೆ ನಡೆದ ಅನುಭವ ಮೊದಲಾದುವುಗಳು.

↓

6. ಸ್ಟೆನ್ಸಿಲ್ ಕೊಡೆ ನಿರ್ಮಾಣ – ದಪ್ಪದ ಕಾಗದದಲ್ಲಿ ಕೊಡೆಯ ನಕ್ಷೆ ಮಾಡಿ ಕತ್ತರಿಸಿ ತೆಗೆಯುವುದು. ಪ್ರತಿಯೊಬ್ಬರಿಗೂ ಸಿಕ್ಕಿದ ತುಂಡುಗಳನ್ನು ಅಂಟಿಸಿ ಕೊಡೆಯನ್ನು ನಿರ್ಮಿಸುವುದು.

↓

7. ಸ್ಟೆನ್ಸಿಲ್ ಕಾಗದದಲ್ಲಿ ಅದುಮಿಟ್ಟು ಕತ್ತರಿಸಿ ತೆಗೆದ ಖಾಲಿ ಕೋಣೆಗಳಲ್ಲಿ ಕ್ರಯೋನ್ಸಿನಿಂದ ಬಣ್ಣ ಹಚ್ಚುವುದು. (ಇದರಂತೆ ಟೊಪ್ಪಿ, ರೈನ್ ಕೋಟು)

↓

8. ಮಳೆ ಕಥೆ ಹೇಳುವುದು. (ಮಳೆ ಸುರಿದು ಅಂಗಳದಲ್ಲಿ ನೀರು ತುಂಬಿದ್ದು, ಕಾಗದದ ದೋಣಿ ಬಿಟ್ಟದ್ದು, ತೋಡಿನಲ್ಲಿ ಮೀನುಗಳು - ದಾರಿಯಲ್ಲಿ ನೀರು ಕಟ್ಟಿ ನಿಂತದ್ದು - ವಾಹನ ಕೆಸರು ನೀರನ್ನು ರಟ್ಟಿಸಿದ್ದು - .... ಮುಂತಾದವುಗಳನ್ನೊಳಗೊಂಡ ಕಥೆ ಹೇಳುವುದು.)

9. ವರ್ಕ್ ಶೀಟು 4.2 ಕಾಗದದ ದೋಣಿ - ವಿತರಿಸುವುದು.

10. ದೋಣಿ ನಿರ್ಮಿಸುವುದು

ತ್ರಿಕೋನಾಕೃತಿಯಲ್ಲಿರುವ ಕಾಗದಗಳನ್ನು ನೀಡುವುದು. ಮಡಚಿ ದೋಣಿಯ ಆಕೃತಿ ಮಾಡುವುದು. ಬಣ್ಣ ಹಚ್ಚುವುದು. ಬಿಗ್ ಪಿಕ್ಚರಿನಲ್ಲಿ ಅಂಟಿಸುವುದು.

11. ಮಳೆ ಹಾಡು ಹಾಡುವುದು.

12. ಕಪ್ಪೆಯಣ್ಣ ಶಬ್ದಾನುಕರಣೆ

13. ವರ್ಕ್ ಶೀಟು 4.3 ಮಳೆಯೋ ಮಳೆ - ವಿತರಿಸುವುದು.

14. ಬಿಸಿ ಮತ್ತು ತಂಪು. ಎರಡು ಸ್ಟೀಲಿನ ಲೋಟಗಳಲ್ಲಿ ಬಿಸಿ ಮತ್ತು ತಣ್ಣೀರನ್ನು ಇಡುವುದು. ಮುಟ್ಟಿ ನೋಡಿ ಹೇಳುವುದು.

15. ಮಳೆ ತಾಳ – ಬೆರಳುಗಳಿಂದ

16. ಬಣ್ಣದ ಮಳೆ - ಗಾಜಿನ ಲೋಟದಲ್ಲಿ ನೀರು ತುಂಬಿಸಿ ಮೇಲೆ ಪೋಟಾಶಿಯಂ ಪರ್ಮಾಂಗನೇಟ್ ಹರಳುಗಳನ್ನು ಹಾಕುವುದು. ಅವು ನೀರಿನಲ್ಲಿ ತಂಗುವುದನ್ನು ನಿರೀಕ್ಷಣೆ ಮಾಡುವುದು.

17. ಸ್ವತಂತ್ರ ಚಿತ್ರ ರಚನೆ

- ನೆಲದಲ್ಲಿ / ಕಾಗದದಲ್ಲಿ ಇಷ್ಟವಿರುವ ಚಿತ್ರವನ್ನು ರಚಿಸುವುದು.

18. ವಿಡಿಯೋ ಕಾಣುವುದು.

- ಮಳೆ, ಬೇಸಿಗೆ ಇವುಗಳ ದೃಶ್ಯಗಳನ್ನು ಚಿತ್ರೀಕರಿಸಿದ ವಿಡಿಯೋ ವೀಕ್ಷಣೆ ಮಾಡುವುದು. ಚರ್ಚೆ.

19. ವರ್ಕ್ ಶೀಟು 4.4 ಬಣ್ಣ ಹಚ್ಚೋಣ – ವಿತರಿಸುವುದು.

(ಕೊಡೆಗೆ ಬಣ್ಣ ಹಚ್ಚುವುದು.)

20. ನೀರಿನ ಉಪಯೋಗಗಳು (ಹಾಡು)

## ವರ್ಕ್ ಶೀಟು 4.1 - ಕಂಡುಹಿಡಿಯುವ, ಬಣ್ಣ ಕೊಡುವ

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ

* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** : 1.ಗಣಿತ ಜ್ಞಾನದ ಆಧಾರದಲ್ಲಿ ನಿರೀಕ್ಷಣೆ ಮಾಡಿ ಸ್ಥಾನವನ್ನು ಕಂಡುಹಿಡಿಯುವುದು. (ಅಧಿಕವಿರುವುದು) (38)

2. ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು (ಹೆಚ್ಚು / ಕಡಿಮೆ) ಕಂಡುಹಿಡಿಯುವುದು.

3. ಕ್ರಯೋನ್ಸ್ ಬಳಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. (5)

**ಆಶಯಗಳು** : ಮಳೆ ಸುರಿಯುವಾಗ ಧಾರಾಳ ನೀರು ಲಭಿಸುವುದು.

- ಮಳೆ ಇರುವ ಕಾಲವೂ ಮಳೆ ಇಲ್ಲದ ಕಾಲವೂ ಇದೆ.

**ಸಾಮಗ್ರಿಗಳು** : ಕ್ರಯೋನುಗಳು / ಸ್ಕೆಚ್ ಪೆನ್ನು

**ಸಂದರ್ಭ** : ಅಮ್ಮು, ಮೀನ ಮತ್ತು ನಿಮ್ಮಿ ಮಳೆಯಲ್ಲಿ ಕೊಡೆ ಹಿಡಿದು ನಡೆಯುತ್ತಿದ್ದಾರೆ. ಹಾಯ್, ಏನು ಖುಷಿ.. ಕೊಡೆಯನ್ನು ತಿರುಗಿಸುತ್ತಾ ಅಮ್ಮು ಹೇಳಿದಳು. ಇದನ್ನು ಕಂಡ ಗೆಳೆಯರೂ ಹಾಗೆಯೇ ಮಾಡಿದರು. ಅಮ್ಮುವಿನ ಕೊಡೆಯ ಬಣ್ಣ ನೀಲಿ. ಮೀನಳದ್ದು ದೊಡ್ಡ ಕೊಡೆ. ನಿಮ್ಮಿಯದ್ದು ಕೊಕ್ಕೆ ಕಾಲಿರುವ ಕೊಡೆ.

: ಮಳೆ ಹಾಗೂ ಮಳೆ ತಾಗದಂತೆ ಸಹಾಯ ಮಾಡುವ ವಸ್ತುಗಳಿಗೆ ಸಂಬಂಧಿಸಿದ ಪ್ರಶ್ನೋತ್ತರ ಹಾಡಿನ ನಂತರ ಮಂಡಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಗೆಳೆಯರೆಲ್ಲರೂ ಟೋಯ್ಲೆಟಿಗೆ ಹೋಗಿ ಬರುತ್ತಿದ್ದರು. ಫಕ್ಕನೆ ಮಳೆ ಸುರಿಯಿತು. ಎಲ್ಲರ ಕೈಯಲ್ಲಿ ಕೊಡೆ ಇರಲಿಲ್ಲ. ಇಲ್ಲದವರು ಗೆಳೆಯರ ಕೊಡೆಯೊಳಗೆ ಸೇರಿಕೊಂಡರು. ಕೊಡೆಯೊಳಗೆ ಸೇರಿಕೊಳ್ಳಲು ಮಳೆಗೂ ಆಸೆಯಾಯಿತು. ಗಾಳಿಯು ಮಳೆಗೆ ಸಹಾಯ ಮಾಡಿತು. ಮಳೆ ಕೊಡೆಯೊಳಗೆ ಸೇರಿಕೊಂಡಿತು. ಮಕ್ಕಳು ಒದ್ದೆಯಾದರು. ಮಳೆಯಲ್ಲಿ ನೆನೆದರೆ ಜ್ವರ ಬರಬಹುದು ಎಂದು ಮಕ್ಕಳು ಹೇಳಿದರು. ಶರೀರವಿಡೀ ನೀರು 'ಕೊಡೆ, ಕೊಡೆ, ಕೊಡೆ' ಎಂದು ಮಳೆ ಹೇಳಿತು. ಮಳೆಯನ್ನು ತಟ್ಟಿದರೂ ಹೋಗುವುದಿಲ್ಲ, ಒದ್ದೆಯಾಯಿತಲ್ಲಾ. 'ನನ್ನನ್ನು ಇಷ್ಟವಿಲ್ಲದಿದ್ದರೆ ನಾನು ಹೋಗಿ ಬಿಡುತ್ತೇನೆ' ಮಳೆ ಹೇಳಿತು. ಮಳೆ ಹೋಯ್ತು. ಮಕ್ಕಳು ಕೊಡೆ ಮಡಚಿದರು. ಈ ಸಮಯದಲ್ಲಿ ಅಡಗಿ ನಿಂತಿದ್ದ ಮಳೆ ಪುನಃ ಸುರಿಯಿತು. ಮಕ್ಕಳೆಲ್ಲರೂ ಓಡಿ ಬಂದು ಕೊಡೆಯಲ್ಲಿ ಸೇರಿದರು. ಆಗ ಮಳೆ ನಿಂತಿತು. ಕೊಡೆ ಮಡಚಿದರು. ಮಳೆ ಸುರಿಯಿತು. ಮಳೆ ಆಟ ಮುಂದುವರಿಯುವುದು.

: ಚಿತ್ರವನ್ನು ನೋಡಿರಿ.

ವರ್ಕ್ ಶೀಟು 4.1 ಕಂಡುಹಿಡಿಯುವ ಬಣ್ಣ ಕೊಡುವ – ವಿತರಿಸುವುದು.

**ಚಿತ್ರ ಓದು** : ಚಿತ್ರದಲ್ಲೇನಿದೆ? (ಹೇಳುವುದು.)

- ಎಲ್ಲಾ ಕೊಡೆಗಳಲ್ಲೂ ಮಕ್ಕಳ ಸಂಖ್ಯೆ ಒಂದೇ ರೀತಿಯಲ್ಲಿದೆಯೇ?
- ಯಾವ ಕೊಡೆಯಲ್ಲಿ ಮಕ್ಕಳ ಸಂಖ್ಯೆಯು ಹೆಚ್ಚು ಇರುವುದು?
- ಆ ಚಿತ್ರಕ್ಕೆ ಉರುಟು ಹಾಕಿರಿ.
- ಕೊಡೆಗಳಿಗೆ ಬಣ್ಣ ಹಚ್ಚಿರಿ.

**ಮೌಲ್ಯಮಾಪನ** : ಚಿತ್ರದಲ್ಲಿ ಏನೇನಿದೆ ಎಂದು ಹೇಳಲು ಸಾಧ್ಯವಾಗುವುದು

- ಸಂಖ್ಯೆ ಹೆಚ್ಚಿರುವ ಚಿತ್ರಕ್ಕೆ ಉರುಟು ಹಾಕಲಾಗಿದೆ.
- ಕೊಡೆಗೆ ಬಣ್ಣ ಹಚ್ಚಲು ಸಾಧ್ಯವಾಗಿದೆ.

## ವರ್ಕ್ ಶೀಟು 4.2 - ಕಾಗದದ ದೋಣಿ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** : ಕ್ರಯೋನ್ ಉಪಯೋಗಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು.(4)

**ಆಶಯಗಳು** : ಮಳೆಯಿರುವ ಕಾಲವೂ ಮಳೆಯಿಲ್ಲದ ಕಾಲವೂ ಇದೆ.

- ಮಳೆಯೊಂದಿಗೆ ಗಾಳಿ, ಸಿಡಿಲು, ಮಿಂಚು ಎಂಬಿವುಗಳು ಬರುವುದು.
- ಮಳೆ ಸುರಿಯುವಾಗ ಧಾರಾಳ ನೀರು ಲಭಿಸುವುದು.

**ಸಾಮಗ್ರಿ** : ಕ್ರಯೋನ್ಸ್

**ಸಂದರ್ಭ** : ಮಳೆಗೆ ಸಂಬಂಧಿಸಿದ ಕಥೆಯ ಮಂಡನೆಯ ನಂತರ ವರ್ಕ್ ಶೀಟು ವಿತರಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಬೆಳಗಿನಿಂದ ಮಳೆಯೋ ಮಳೆ! ಹೊರಗಿಳಿಯಲು ಸಾಧ್ಯವಾಗದೇ ರಿಂಗು ಮತ್ತು ರಿಜು ಮನೆಯ ಒಳಗೇ ಕುಳಿತಿದ್ದಾರೆ. ಹೋ.. ಏನು ಚಳಿ.. ಅವಳು ಹೊದಿಕೆಯನ್ನು ಹೊದ್ದಳು. ಠೇ..ಠೇ..ಠೇ.. ಕಿಟಿಕಿಯ ಮೂಲಕ ಬೆಳಕು ಮತ್ತು ಶಬ್ದ. ಭಯವಾಯಿತು. ಸಿಡಿಲು, ಮಿಂಚು ಆಗಾಗ ಬರುತ್ತಿತ್ತು. ಕಿಟಿಕಿಯಿಂದ ನೋಡಿದರು. ಮರಗಳು ಗಾಳಿಯಲ್ಲಿ ಓಲಾಡುತ್ತಿವೆ. ಧಾರಾಕಾರವಾದ ಮಳೆ. ಸ್ವಲ್ಪ ಹೊತ್ತು ಕಳೆಯಿತು. ಮಳೆ ಹೋಯಿತು. ಅಂಗಳದಲ್ಲಿ ನೀರು ಕೆಂಪು ಬಣ್ಣದಲ್ಲಿತ್ತು. ಅದು ತೋಡಿಗೆ ಹರಿಯುತ್ತಿದೆ. ರಿಂಗು, ನಾವು ದೋಣಿ ಮಾಡೋಣವೇ? ತೋಡಿನಲ್ಲಿ ತೇಲಿ ಬಿಡಬಹುದು. ತಯಾರಿಸಿದ ದೋಣಿಯೊಂದಿಗೆ

ಇಬ್ಬರೂ ತೋಡಿನ ಬದಿಗೆ ತಲುಪಿದರು.

ವರ್ಕ್ ಶೀಟು 4.2 ಕಾಗದದ ದೋಣಿ - ವಿತರಿಸುವುದು.

**ಚಿತ್ರ ಓದು** :ರಿಂಗು ಮತ್ತು ರಿಜುವನ್ನು ನೋಡಿದಿರಾ? ಚಿತ್ರದಲ್ಲಿ ಬೇರೆ ಏನೇನಿವೆ?

- ದೋಣಿಗಳಿಗೆ ಮಾತ್ರ ಬಣ್ಣವಿಲ್ಲ. ನಾವು ಬಣ್ಣ ಹಚ್ಚೋಣವೇ?
- ದೋಣಿಗಳಿಗೆ ಬಣ್ಣ ಹಚ್ಚುವುದು.

ಆಖ್ಯಾನ : ರಿಂಗು ಮತ್ತು ರಿಜು ದೋಣಿ ಬಿಟ್ಟರು. ಆಗ ಒಂದು ಮೀನು ದೋಣಿಗೆ ಹತ್ತಿತು. ಒಂದು ಕಪ್ಪೆ ರಿಜುವಿನ ದೋಣಿಗೂ ಹತ್ತಿತು. ಒಳ್ಳೆಯೊಂದು ಇದನ್ನು ಕಂಡಿತು. ಕಪ್ಪೆ ಒಮ್ಮೆಲೇ ಜಿಗಿಯಿತು. ಮೀನು ದೋಣಿಯನ್ನು ದೂರಕ್ಕೆ ಕೊಂಡೊಯ್ದಿತು. ಹೆದರಿದ ಮಕ್ಕಳು ಅಮ್ಮನ ಮನೆಗೆ ಓಡಿದರು.

**ಮೌಲ್ಯಮಾಪನ** : ಚಿತ್ರದಲ್ಲಿರುವವುಗಳನ್ನು ಗುರುತಿಸಲಾಗಿದೆ.

- ದೋಣಿಗಳನ್ನು ಕಂಡುಹಿಡಿದು ಬಣ್ಣ ಕೊಡಲಾಗಿದೆ.
- ದೋಣಿಗಳಿಗೆ ಸರಿಯಾದ ರೀತಿಯಲ್ಲಿ ಬಣ್ಣಹಚ್ಚಲಾಗಿದೆ.
- ಚಿತ್ರದಲ್ಲಿರುವ ದೃಶ್ಯಗಳನ್ನು ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟು 4.3 – ಮಳೆಯೋ ಮಳೆ

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ

* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** **:** 1. ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು. (ದೊಡ್ಡದು ಯಾವುದೆಂದು ಕಂಡುಹಿಡಿಯುವುದು.) (46)

2. ಗಣಿತ ಜ್ಞಾನದ ಆಧಾರದಲ್ಲಿ ನಿರೀಕ್ಷಣೆ ಮಾಡಿ, ಸ್ಥಾನವನ್ನು ಕಂಡುಕೊಳ್ಳುವುದು. (38)

3. ಕ್ರಯೋನ್ಸ್ ಬಳಸಿ ಬಣ್ಣಹಚ್ಚಲು ಸಾಧ್ಯವಾಗುವುದು. (5)

**ಆಶಯಗಳು** : ಮಳೆ ಸುರಿಯುವಾಗ ಧಾರಾಳ ನೀರು ಸಿಗುವುದು.

- ಮಳೆಗಾಲದಲ್ಲಿ ಗಿಡಗಳು ಬೆಳೆಯುವುದು.
- ಮಳೆ ಸುರಿಯುವಾಗ ನೀರು ಉಂಟಾಗುವುದು.

**ಸಾಮಗ್ರಿ** : ಕ್ರಯೋನ್ಸ್

**ಸಂದರ್ಭ** : ಹಸಿರು ಕಪ್ಪೆಯು ತಾವರೆ ಕೆರೆಯಲ್ಲಿ ವಾಸಿಸುತ್ತಿತ್ತು. ಒಂದು ದಿನ ಕಪ್ಪೆಯು ಹೂಗಳೆಡೆಯಲ್ಲಿ ಕುಪ್ಪಳಿಸುತ್ತಾ ಹೋಗುತ್ತಿತ್ತು. ಇದ್ದಕ್ಕಿದ್ದಂತೆ ಒಳ್ಳೆಯ ಮಳೆ ಸುರಿಯಿತು. ಕಪ್ಪೆಯ ಶಬ್ದಾನುಕರಣೆಯ ಮುಂದುವರಿಕೆಯಾಗಿ ವರ್ಕ್ ಶೀಟ್ ನೀಡುವುದು.

**ಪ್ರಕ್ರಿಯೆ** :

**ಆಖ್ಯಾನ** : ರಿಂಗು ಮತ್ತು ರಿಜುವಿನ ದೋಣಿಗಳು ತೋಡಿನಲ್ಲಿ ಸ್ಪರ್ಧಿಸುತ್ತಾ ಮುಂದೆ ಸಾಗಿದುವು. 'ನಾನು ಮೊದಲು ತಲುಪುವೆನು' 'ನಾನು ಮೊದಲು ತಲುಪುವೆನು' ಎಂದು ಹೇಳಿದವು. ತಾವರೆ ಹೂಗಳ ಎಡೆಯಲ್ಲಿ ಮಳೆ ತಾಗದಂತೆ ಎಲೆಯನ್ನು ಹಿಡಿದು ಕಪ್ಪೆಯಣ್ಣ ಕುಳಿತಿದ್ದನು.

“ಅದೇನು? ನೀರಿನಲ್ಲಿ ತೇಲಿ ಬರುತ್ತಿರುವುದು? ಕಾಗದದ ದೋಣಿಗಳಲ್ಲವೇ?” ದೊಡ್ಡ ತಾವರೆ ಹೂವನ್ನೂ ದಾಟಿ ದೋಣಿಗಳು ಬಂದುವು. ಅವುಗಳ ಸ್ಪರ್ಧೆ ಕಪ್ಪೆಗೆ ಹಿಡಿಸಲಿಲ್ಲ. ಕಪ್ಪೆ, ಒಂದೇ ಜಿಗಿತ. ದೋಣಿಗಳೆರಡೂ ಮುಳುಗಿದವು. ಕಪ್ಪೆ ಜೊತೆಯಲ್ಲೇ ಮುಳುಗಿ ದೋಣಿಗಳನ್ನು ತೆಗೆದು ಎಲೆಯ ಮೇಲೆ ಇಟ್ಟಿತು. “ಬಿಸಿಲು ಬರುವಾಗ ಒಣಗಬಹುದು” ಆಗ ಇಬ್ಬರಿಗೂ ಹೋಗಬಹುದು. ಕಪ್ಪೆ ಹೇಳಿತು. ದೋಣಿಗಳು ಪಾಪ ಬಿಸಿಲನ್ನು ಕಾಯುತ್ತಾ ಕುಳಿತುಕೊಂಡವು. ಬಿಸಿಲು ಬಂತು. ವಿಷಯ ಕೇಳಿತು. ನಾನು ಒಣಗಿಸಿದರೆ ಸಮಸ್ಯೆಗೆ ಪರಿಹಾರವಾಗುವುದೇ? ಹಾಗಾದರೆ ಮತ್ತೆ ಬರುತ್ತೇನೆ. ಬಿಸಿಲು

ಹೇಳಿತು. ಆಗ ಆ ದಾರಿಯಾಗಿ ಗಾಳಿಯು ಬೀಸಿ ಬಂತು. ದೋಣಿಗಳನ್ನು ಬಾಚಿ ತೆಗೆದು ದಡದಲ್ಲಿ ಇಟ್ಟಿತು. ರಿಂಗು ಮತ್ತು ರಿಜು ಓಡಿ ಬಂದು ದೋಣಿಗಳನ್ನು ತೆಗೆದುಕೊಂಡರು.

ವರ್ಕ್ ಶೀಟು 4.3 ಮಳೆಯೋ ಮಳೆ - ನೀಡುವುದು.

**ಚಿತ್ರ ಓದು** : ದೊಡ್ಡ ಹೂವು ಯಾವುದು? ಕಂಡುಹಿಡಿದು ಬಣ್ಣ ಹಚ್ಚಬಹುದೇ?

- ಚಿತ್ರದಲ್ಲಿ ಬೇರೆ ಏನೇನು ಇವೆ?
- ಪ್ರತಿಕ್ರಿಯೆ ನೀಡುವುದು.
- ಹಸುರು ಕಪ್ಪೆ ಎಲೆಯನ್ನು ತಲೆಯ ಮೇಲೆ ಹಿಡಿದಿರುವುದು ಯಾಕೆ?
- ಮಳೆ ಸುರಿಯುವುದು ಹೇಗೆ?
- ಮಳೆ ಹನಿಗಳನ್ನು ನೋಡಲಿಲ್ಲವೇ?
- ಚಿತ್ರದಲ್ಲಿ ಮಳೆಹನಿಗಳನ್ನು ಚಿತ್ರಿಸುವುದು.

**ಮೌಲ್ಯಮಾಪನ** : ಮಳೆಹನಿಗಳನ್ನು ಸರಿಯಾದ ರೀತಿಯಲ್ಲಿ ಚಿತ್ರಿಸಲಾಗಿದೆ.

- ದೊಡ್ಡ ಹೂವಿಗೆ ಬಣ್ಣ ಹಚ್ಚಲಾಗಿದೆ.

## ವರ್ಕ್ ಶೀಟು 4.4 - ಬಣ್ಣ ಹಚ್ಚೋಣ

**ವಿಕಾಸ ಮಂಡಲ** : * ಸೃಜನಾತ್ಮಕ – ಸೌಂದರ್ಯಾತ್ಮಕ ವಿಕಾಸ

* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ ಉಪಯೋಗಿಸಿ ಚಿತ್ರಗಳಿಗೆ ಸ್ವತಂತ್ರವಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು. (4)

**ಸಾಮಗ್ರಿ** : ಕ್ರಯೋನ್ಸ್

**ಸಂದರ್ಭ** : ಮಳೆಗೆ ಸಂಬಂಧಿಸಿದ ಅನುಭವಗಳನ್ನು ಹೇಳುವುದು. ತರಗತಿಯಲ್ಲಿ ಕೊಡೆಗಳ ಪ್ರದರ್ಶನವನ್ನು ಏರ್ಪಡಿಸುವುದು. ನಂತರ ಮಳೆಗಾಲ / ಬೇಸಗೆಕಾಲ ಎಂಬಿವುಗಳಿಗೆ ಸಂಬಂಧಿಸಿದ ವಿಡಿಯೋಗಳನ್ನು ಕಾಣುವುದು ಮತ್ತು ಚರ್ಚೆ.

**ಪ್ರಕ್ರಿಯೆ** : ರಿಂಗು, ಆನೆಯಷ್ಟು ದೊಡ್ಡದಾದ ಬಣ್ಣದ ಕೊಡೆಯನ್ನು ಏರಿ ಆಕಾಶದಲ್ಲಿ ಹಾರಾಡುತ್ತಿದ್ದಾಳೆ.

**ಆಖ್ಯಾನ** : ಹಾಯ್..! ಅದು ನನ್ನ ಶಾಲೆಯಲ್ಲವೇ? "ಆಗೋ, ಮನೆಯ ಹತ್ತಿರದ ತೋಡು. ಅದು ಬಯಲಿನ ಮೂಲಕ ಹರಿಯುತ್ತಾ ಸಾಗುವುದು. ತೋಡು ಎಷ್ಟೊಂದು ಉದ್ದವಾಗಿದೆ? ಬಯಲಿನಲ್ಲಿಯೂ ನೀರು... ಎಷ್ಟೊಂದು ಚಂದವಾಗಿದೆ..! ಅಯ್ಯೋ..."

ರಿಂಗು ಹಾರಾಡುತ್ತಾ ಹೋದಳು. ಅಜ್ಜನ ಗಡ್ಡದಂತೆ.. ಈಗ ಆ ಮರದ ಕೊಂಬೆಗೆ ತಾಗಿ ನನ್ನ ಕೊಡೆ ಮುರಿಯಬಹುದು. ಕೊಡೆಯು ಕೊಂಬೆಯ ಹತ್ತಿರ ಹತ್ತಿರ ತಲುಪಿತು. ಕೊಂಬೆಗೆ ಢಿಕ್ಕಿ ಹೊಡೆಯದಂತೆ ಬಲಕ್ಕೆ ಬಾಗಿದಾಗ ಕೆಳಗೆ ಬಿದ್ದಳು. ಫಕ್ಕನೆ ಅವಳಿಗೆ ಎಚ್ಚರವಾಯಿತು. ಮಂಚದಿಂದ ಕೆಳಗೆ ಬಿದ್ದಿದ್ದಳು. ಎದ್ದು ಕುಳಿತುಕೊಂಡಳು. ಅಮ್ಮ ಹತ್ತಿರದಲ್ಲೇ ಇದ್ದಾರೆ. ರಿಂಗು ನಿದ್ದೆಯಲ್ಲಿ ಕಂಡ ಕನಸಾಗಿತ್ತು. ರಿಂಗು ಕನಸಿನಲ್ಲಿ ಕಂಡ ತನ್ನ ಅದ್ಭುತ ಕೊಡೆಯ ಚಿತ್ರವನ್ನು ಬಿಡಿಸಿದಳು.

ವರ್ಕ್ ಶೀಟು 4.4 ಬಣ್ಣ ಹಚ್ಚೋಣ - ವಿತರಿಸುವುದು.

: ಅಯ್ಯೋ, ರಿಂಗುವಿನ ಕೊಡೆಗೆ ಬಣ್ಣವಿಲ್ಲ. ನಾವು ಬಣ್ಣ ಹಚ್ಚೋಣವೇ?

- ಕೊಡೆಗೆ ಬಣ್ಣ ಹಚ್ಚಿರಿ.
- ಬಣ್ಣ ಹಚ್ಚಲು ಅಗತ್ಯವಿರುವ ಸೂಚನೆಗಳನ್ನು ಅಧ್ಯಾಪಿಕೆ ನೀಡುವುದು.
- ಮಕ್ಕಳು ಬಣ್ಣ ಹಚ್ಚುವರು.
- ಚಿತ್ರಗಳನ್ನು ಪ್ರದರ್ಶಿಸುವುದು.

**ಮೌಲ್ಯಮಾಪನ** : ಆಕರ್ಷಕವಾಗಿ ಬಣ್ಣ ಹಚ್ಚಲು ಸಾಧ್ಯವಾಗಿದೆ.

# ಥೀಂ 5 – ಸಸ್ಯಗಳು ಮತ್ತು ಹಣ್ಣುಗಳು

ವಸ್ತುಗಳನ್ನು ಉಪಯೋಗಿಸುವ ಅನುಭವ, ಅನುಭವದ ಆಧಾರದಲ್ಲಿ ಸಂಭಾಷಣೆ, ಚಿತ್ರವನ್ನು ಆಧರಿಸಿಕೊಂಡಿರುವ ಅನುಭವ ಕೊನೆಗೆ ಅಂಕೆಗಳನ್ನು ಉಪಯೋಗಿಸುವ ಅನುಭವ ಎಂಬೀ ಕ್ರಮದಲ್ಲಿ ಗಣಿತದ ಆಶಯ ರೂಪೀಕರಣ ಪ್ರಕ್ರಿಯೆ ನಡೆಯುವುದು. ಗಣಿತಕ್ಕೆ ಸಂಬಂಧಿಸಿದ ವರ್ಕ್ ಶೀಟುಗಳನ್ನು ನೀಡುವಾಗ ಈ ವಿಷಯವನ್ನು ಮನಸ್ಸಿನಲ್ಲಿಡಬೇಕು. ಮೂರ್ತ ವಸ್ತುಗಳನ್ನು ಉಪಯೋಗಿಸಿದ ನಂತರವೇ ಚಿತ್ರದೆಡೆಗೆ / ವರ್ಕ್ ಶೀಟಿನೆಡೆಗೆ ಸಾಗಬೇಕು.

**ಚಟುವಟಿಕಾ ಕ್ರಮ**

1. ಹಣ್ಣುಗಳನ್ನು ನಿರೀಕ್ಷಣೆ ಮಾಡುವುದು.

↓

2. ಮನೆಯಲ್ಲಿ ಉಪಯೋಗಿಸುವ ಹಣ್ಣುಗಳು, ಅವುಗಳ ವಿಶೇಷತೆಗಳು ಎಂಬಿವುಗಳನ್ನು ಸ್ವಾನುಭವಗಳ ಆಧಾರದಲ್ಲಿ ಹೇಳುವುದು.

↓

3. ವಿಶೇಷತೆಗಳನ್ನು ನಿರೀಕ್ಷಣೆ ಮಾಡಿ ಹೇಳುವುದು. (ಬಣ್ಣ, ಪರಿಮಳ, ರುಚಿ, ಗಾತ್ರ...)

↓

4. ವರ್ಕ್ ಶೀಟ್ 5.1 ಗೆರೆ ಎಳೆದು ಜೋಡಿಸಿರಿ - ನೀಡುವುದು.

↓

5. ಹೆಗ್ಗಳಿಕೆ ಹೇಳುವುದು. (ಬೊಂಬೆ ನಾಟಕ)

↓

6. ಹಲವು ಬಗೆಯ ಹಣ್ಣುಗಳನ್ನು ತಿನ್ನುವುದು. (ಅಭಿನಯ)

↓

7. ಹಣ್ಣುಗಳಿಗೆ ಸಂಬಂಧಿಸಿದ ಪದ್ಯಗಳು / ಕಥೆಗಳು

↓

8. ಹಣ್ಣುಗಳನ್ನು ವರ್ಗೀಕರಿಸುವುದು. (ಗುಂಪಿನಲ್ಲಿ ಸೇರದವುಗಳನ್ನು ಮುಟ್ಟಿ ತೋರಿಸುವುದು. ಕಾರಣ ಹೇಳುವುದು.)

↓

9. ವರ್ಕ್ ಶೀಟು 5.2 ಬಣ್ಣ ಹಚ್ಚುವ, ಎಣಿಸಿ ಹೇಳುವ – ನೀಡುವುದು.

↓

10. ಹಣ್ಣುಗಳನ್ನು ಎಣಿಸಿ ಹೇಳುವುದು (ಪ್ರತ್ಯಕ್ಷಾನುಭವ – 3 ರ ವರೆಗೆ)

↓

11. ಹಣ್ಣುಗಳಿಗೆ ಸಂಬಂಧಿಸಿದ ಪದ್ಯಗಳು / ಕಥೆಗಳು.

↓

12. ವರ್ಕ್ ಶೀಟು 5.3 ಚಿತ್ರದಲ್ಲಿ ಏನೇನು? ಬಣ್ಣ ಹಚ್ಚಿರಿ. - ನೀಡುವುದು.

↓

13. ಹಣ್ಣುಗಳ ಚಿತ್ರ ಬಿಡಿಸುವುದು, ಬಣ್ಣ ಹಚ್ಚುವುದು.

↓

14. ಹಣ್ಣುಗಳಿಗೆ ಸಂಬಂಧಿಸಿದ ಕಥೆಗಳು.

### ವರ್ಕ್ ಶೀಟು 5.1 - ಗೆರೆ ಎಳೆದು ಜೋಡಿಸಿರಿ.

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯಗಳು** : ಪಂಚೇಂದ್ರಿಯಗಳ ಸಹಾಯದಿಂದ ವಸ್ತುಗಳು, ಜೀವಜಾಲಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದಕ್ಕೂ ಮೌಖಿಕವಾಗಿ ಮಂಡಿಸುವುದಕ್ಕೂ ಸಾಧ್ಯವಾಗುವುದು.
(ಬಣ್ಣ, ಗಾತ್ರ, ಆಕೃತಿ, ಪರಿಮಳ, ರುಚಿ, ಶಬ್ದ, ನುಣುಪು)

**ಆಶಯ** : ವಿವಿಧ ಬಗೆಯ ಹಣ್ಣುಗಳಿವೆ.

**ಸಾಮಗ್ರಿಗಳು** : ವಿವಿಧ ಬಗೆಯ ಹಣ್ಣುಗಳು, ಕ್ರಯೋನ್ಸ್, ಪದ್ಯಗಳು.

**ಸಂದರ್ಭ** : ವಿವಿಧ ಬಗೆಯ ಹಣ್ಣುಗಳನ್ನು ಪರಿಚಯಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಒಂದು ರಜೆಯ ದಿನ ಉಷ ಹೇಳಿದಳು. ಅಮ್ಮ.. ನನಗೆ ಮಾವಿನ ಹಣ್ಣಿನ ಹುಳಿಗೊಜ್ಜು ಬೇಕು...

ಮಗಳೇ.. ಮಾವಿನ ಹಣ್ಣು ಮುಗಿಯಿತು. ನಾಳೆ ಪೇಟೆಗೆ ಹೋಗುವಾಗ ತರುತ್ತೇನೆ. ಉಷಳಿಗೆ ಸಮಾಧಾನವಾಯಿತು. ಪೇಟೆಯಲ್ಲಿ ಚಂದಪ್ಪಣ್ಣನ ಹಣ್ಣಿನ ಅಂಗಡಿಯಿದೆ. ಚಂದಪ್ಪನು ಕೋಣೆಗಳಿರುವ ಪೆಟ್ಟಿಗೆಯಲ್ಲಿ ಹಣ್ಣುಗಳನ್ನು ಇಡುತ್ತಾನೆ. ರಾತ್ರಿ ಮಲಗುವಾಗ ಮಾವಿನ ಹಣ್ಣಿನ ಹುಳಿಗೊಜ್ಜಿನ ನೆನಪಾಯಿತು. ಹಾಯ್.. ನಾಳೆ ಮಾವಿನ ಹಣ್ಣಿನ ಹುಳಿಗೊಜ್ಜು.. ಎಷ್ಟೊಂದು ರುಚಿ...

ರಾತ್ರಿ ಉಷ ಒಂದು ಕನಸು ಕಂಡಳು. ಚಂದಪ್ಪಣ್ಣನ ಅಂಗಡಿಯ ಮುಂದೆ ಉಷ ಮತ್ತು ಅಮ್ಮ ನಿಂತಿದ್ದಾರೆ... ಉಷಳಿಗೆ ಒಂದು ತುಂಟಾಟಿಕೆ ತೋರಿತು. ಪದ್ಯ ಹೇಳಿದರೆ ಪೆಟ್ಟಿಗೆಯಿಂದ ಹಣ್ಣುಗಳು ಎದ್ದು ಬರಬಹುದೇ?

ಹಾಡಿ ನೋಡೋಣ... ಉಷ ಹಾಡಿದಳು. (ಜೊತೆಯಲ್ಲಿ ಹಾಡುವುದು)

ಪೇರಳೆ ಮರದ ಪೇರಳೆಯೇ
ನಯ ನಯವಾದ ಪೇರಳೆಯೇ
ಹಣ್ಣು ಹಣ್ಣಾದ ಪೇರಳೆಯೇ
ಏನಿದು ಪರಿಮಳ ಪೇರಳೆಯೇ
ಬಾ ಬಾ ನನ್ನಯ ಕೈಯೊಳಗೆ

: ಏನು ಸಂಭವಿಸಿರಬಹುದು? (ಸ್ವತಂತ್ರ ಪ್ರತಿಕ್ರಿಯೆ)

- ಪೆಟ್ಟಿಗೆಯಿಂದ ಪೇರಳೆ ಉರುಳಿ ಕೆಳಗೆ ಬಿತ್ತು.

: ಉಷ ಪುನಃ ಹಾಡಿದಳು.

ಮಾವಿನ ಮರದ ಮಾವಿನ ಹಣ್ಣೇ
ಮೂಗಿಗೆ ಬಡಿಯುವ ಪರಿಮಳವೇ
ಹಣ್ಣಾದ ನಿನ್ನನು ನಾ ಕಂಡೇ
ಬಾ ಬಾ ನನ್ನ ಕೈಯೊಳಗೇ

: ಮಾವಿನ ಹಣ್ಣು ಏನು ಮಾಡಿರಬಹುದು?

ಒಂದು ಮಾವಿನ ಹಣ್ಣು ಉರುಳಿ ಕೆಳಗೆ ಬಿತ್ತು.

: ಉಷಳಿಗೆ ಸಂತೋಷವಾಯಿತು. ಅವಳು ಪುನಃ ಹಾಡಿದಳು.

ಹಳದಿ ಬಣ್ಣದ ಪಪ್ಪಾಯಿ
ಹಣ್ಣು ಹಣ್ಣಾದ ಪಪ್ಪಾಯಿ
ಬಾ ಬಾ ನನ್ನ ಕೈಯೊಳಗೆ

: ಒಂದು ಪಪ್ಪಾಯಿ ಉರುಳಿ ಕೆಳಗೆ ಬಿತ್ತು.

- ಉಷ ಚೀನಿಕಾಯಿಯ ಕುರಿತು ಹಾಡಿದಳು.

: ಏನು ಹಾಡಿರಬಹುದು?

ದಪ್ಪ ದಪ್ಪದ ಚೀನಿಕಾಯಿ
ಗುಂಡು ಗುಂಡಾದ ಚೀನಿಕಾಯಿ
ಉರುಳಿ ಉರುಳಿ ಬಾ ಬಳಿಗೆ

: ಚೀನಿಕಾಯಿ ಉರುಳಿ ಕೆಳಗೆ ಬಿತ್ತು.

ವರ್ಕ್ ಶೀಟು 5.1 ಗೆರೆ ಎಳೆದು ಜೋಡಿಸಿರಿ - ನೀಡುವುದು.

: ಉಷಳು ಕಂಡ ಕನಸು ಇಷ್ಟವಾಯಿತೇ? ಮಾವಿನ ಹಣ್ಣು, ಪೇರಳೆ ಹಣ್ಣು, ಪಪ್ಪಾಯಿ, ಚೀನಿಕಾಯಿ ಎಲ್ಲವೂ ಕೆಳಗೆ ಬಿದ್ದಿವೆ. ಅವುಗಳನ್ನು ಪುನಃ ಪೆಟ್ಟಿಗೆಯಲ್ಲಿ ಅವುಗಳ ಕೋಣೆಯೊಳಗೆ ಇಡಬೇಡವೇ? ಮಾವಿನ ಹಣ್ಣಿನ ಕೋಣೆಯನ್ನು ಕಂಡುಹಿಡಿದು ಗೆರೆ ಎಳೆದು ಜೋಡಿಸಿರಿ. ಪಪ್ಪಾಯಿ ಕಂಡುಹಿಡಿದು ಕೋಣೆಗೆ ಸೇರಿಸಿರಿ. ಗೆರೆ ಎಳೆದು ಜೋಡಿಸುವವರಿಗೆ ಪ್ರೋತ್ಸಾಹ.

- ಬುಟ್ಟಿಯಲ್ಲಿರುವ ಬಣ್ಣದ ಚಿತ್ರಗಳನ್ನು ನೋಡಿ ಹಣ್ಣುಗಳಿಗೆ

ಸೂಕ್ತವಾದ ಬಣ್ಣವನ್ನು ನೀಡುವುದು.

- ಚಿತ್ರದಲ್ಲಿರುವ ವಿಷಯಗಳ ಕುರಿತು ಸ್ವಂತಭಾಷೆಯಲ್ಲಿ ಹೇಳುವುದು.

ಹಣ್ಣು ಮಾರುವವ ಕರೆದು ಹೇಳುವುದು ಹೇಗಾಗಿರಬಹುದು?

ಮಕ್ಕಳು ಅಭಿನಯಿಸಿ ತೋರಿಸುವುದು.

- ಚಿತ್ರಗಳನ್ನು ಪರಸ್ಪರ ಬದಲಾಯಿಸಿ ಮೌಲ್ಯಮಾಪನ ಮಾಡುವುದು.

ನಂತರ ವಿಭಿನ್ನ ಹಣ್ಣುಗಳ ಗುಂಪುಗಳನ್ನು ನಿರೀಕ್ಷಣೆ ಮಾಡುವುದು.

ಹಣ್ಣಿನ ಹಾಡುಗಳನ್ನು ಹಾಡುವುದು.

**ಮೌಲ್ಯಮಾಪನ** : ಹಣ್ಣುಗಳನ್ನು ಆಯಾ ಕೋಣೆಗಳಿಗೆ ಗೆರೆ ಎಳೆದು ಸೇರಿಸಲಾಗಿದೆ.

- ಸೂಕ್ತವಾದ ಬಣ್ಣ ಹಚ್ಚಲಾಗಿದೆ.

- ಚಿತ್ರದಲ್ಲಿರುವ ವಿಷಯಗಳನ್ನು ಸ್ವಂತ ಭಾಷೆಯಲ್ಲಿ ಹೇಳಲು ಸಾಧ್ಯವಾಗುವುದು.

- ಹಣ್ಣುಗಳನ್ನು ಗುರುತಿಸಿ ಹೆಸರು ಹೇಳಲು ಸಾಧ್ಯವಾಗುವುದು.

## ವರ್ಕ್ ಶೀಟು 5.2 - ಬಣ್ಣ ಹಚ್ಚುವ, ಎಣಿಸಿ ಹೇಳುವ.

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ

* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** : ಸಂಖ್ಯೆಗಳನ್ನು ಎಣಿಸುವುದಕ್ಕೂ ಸಂಖ್ಯೆಗಳು ಹಾಗೂ ವಸ್ತುಗಳ ಸಂಖ್ಯೆಯನ್ನು ಪರಸ್ಪರ ಹೊಂದಿಸುವುದಕ್ಕೂ ಸಾಧ್ಯವಾಗುವುದು. (5 ಕ್ಕಿಂತ ಕಡಿಮೆ) (44)

**ಆಶಯ** : ವಿವಿಧ ರೀತಿಯ ಹಣ್ಣುಗಳಿವೆ.

**ಸಾಮಗ್ರಿ** : ಕ್ರಯೋನ್ಸ್

**ಸಂದರ್ಭ** : ವಿವಿಧ ಬಗೆಯ ಹಣ್ಣುಗಳನ್ನು ಪರಿಚಯಿಸಿದ ನಂತರ ವರ್ಕ್ ಶೀಟ್ ಮಂಡನೆ.

**ಪ್ರಕ್ರಿಯೆ** :

**ಆಖ್ಯಾನ** :ಉಷ ಮಾವನನ್ನು ಕಾಯುತ್ತಾ ಕುಳಿತಿದ್ದಾಳೆ. ಮಾವ ಅಜ್ಜಿಯನ್ನು ಕಾಣಲು ಬರುತ್ತಾರಂತೆ. ಉಷ ಅಜ್ಜಿಯ ಬಳಿಗೆ ಓಡಿದಳು. “ಮಾವ ಏನನ್ನು ತರುತ್ತಾರೆ?” ಉಷ ಕೇಳಿದಳು. “ಅನನಾಸು” ಮಾವನ ಹಿತ್ತಿಲಿನಲ್ಲಿ ಅನನಾಸು ಇದೆ. ಆಹಾ.. ಅನನಾಸು.. ಅವಳು ಸಂತೋಷದಿಂದ ಕುಣಿದಾಡಿದಳು. ಉಷ ಮೊದಲೊಮ್ಮೆ ಅನನಾಸು ತಿಂದಿದ್ದಾಳೆ. “ಅಜ್ಜೀ.. ಅಜ್ಜೀ.. ನನಗೆ ಅನನಾಸಿನ ಪದ್ಯ ಕೇಳ್ಬೇಕು.” ಹಾಡುವ ಅದಕ್ಕೇನು. ಅಜ್ಜಿಯ ಹಾಡಿನೊಂದಿಗೆ ನಾವೂ ಹಾಡೋಣ.

ಹಸುರು ಗಿಡದ ಮೇಲೆ
ಕೆಂಪು ಹಣ್ಣು ಕುಳಿತಿದೆ
ಕೆಂಪು ಹಣ್ಣಿನ ಮೇಲೆ
ಹಸುರು ಗಿಡವು ಕುಳಿತಿದೆ
ಸಿಹಿ ರುಚಿಯ ನೀಡುವೆ
ಹೊಸ ಪರಿಮಳ ಬೀರುವೆ

ಅನನಾಸ್ ಹಣ್ಣು ಅನನಾಸ್ ಹಣ್ಣು
ದುಂಡು ದುಂಡಗೆ ಕೆಂಪಿನ ಹಣ್ಣು
ಮೆಟ್ಟಲು ಬಂದರೆ ಚುಚ್ಚುವ ಹಣ್ಣು
ಹಸುರು ಗಿಡದಲಿ ಕುಳಿತದ್ದು
ತಲೆಯಲಿ ಗಿಡವನು ಹೊತ್ತದ್ದು
ಸಿಹಿ ಸಿಹಿ ರುಚಿಯ ನೀಡುವ ಹಣ್ಣು
ಹೊಸ ಹೊಸ ಪರಿಮಳ ಬೀರುವ ಹಣ್ಣು

: ಉಷಳ ಮಾವ ಬಂದರು. ಅಜ್ಜಿಯನ್ನು ಕಂಡರು. ಉಷಳ ಕೈಯಲ್ಲಿ

ಒಂದು ಚಿಕ್ಕ ಚೀಲವನ್ನು ಕೊಟ್ಟರು. ಉಷ ಚೀಲದೊಳಗೆ ನೋಡಿದಳು. ಚೀಲ ತುಂಬಾ ಹಣ್ಣುಗಳು. ಚೀಲದಲ್ಲಿರುವ ಹಣ್ಣುಗಳನ್ನು ನಿಮಗೆ ಕಾಣಬೇಡವೇ?

ವರ್ಕ್ ಶೀಟು 5.2 "ಬಣ್ಣ ಹಚ್ಚುವ ಎಣಿಸಿ ಹೇಳುವ" ನೀಡುವುದು.

: ಮಕ್ಕಳು ಹಣ್ಣುಗಳನ್ನು ಗುರುತಿಸಿ ಹೇಳುವರು. (ಸರಿ ಉತ್ತರಕ್ಕೆ ಪ್ರೋತ್ಸಾಹ..) ಇನ್ನು ಬಣ್ಣ ಹಚ್ಚೋಣವೇ? ಮಕ್ಕಳು ಬಣ್ಣ ಹಚ್ಚುವರು. ಮಕ್ಕಳಿಗೆ ಇಷ್ಟವಾದ ಹಣ್ಣುಗಳ ಚಿತ್ರ ಬಿಡಿಸಿ ಬಣ್ಣ ಹಚ್ಚುವುದಕ್ಕೆ ಅವಕಾಶ ನೀಡುವುದು.

- ಚಿತ್ರದಲ್ಲಿ ಯಾವ ಯಾವ ಹಣ್ಣುಗಳಿವೆ?
- ಅನನಾಸು ಹಣ್ಣುಗಳು ಎಷ್ಟು ಇವೆ?
- ಮಾವಿನ ಹಣ್ಣುಗಳು?
- ಬಾಳೆ ಹಣ್ಣುಗಳು ಎಷ್ಟಿವೆ?
- ಒಂದೊಂದನ್ನು ಮುಟ್ಟಿ ಎಣಿಸಿ ಹೇಳುವುದು.
- ಅತೀ ಹೆಚ್ಚು ಇರುವುದು ಯಾವ ಹಣ್ಣು?
- ಅದರ ಸುತ್ತಲೂ ಉರುಟು ಹಾಕಿರಿ.
- ವರ್ಕ್ ಶೀಟು ನೋಡಿ ಎಣಿಸಿ ಹೇಳಲು ಮಕ್ಕಳಿಗೆ ಅವಕಾಶ ನೀಡುವುದು.

ಒಂದು ಒಂದು ಒಂದು
ಅನನಾಸ್ ಹಣ್ಣು ಒಂದು
ಒಂದು ಎರಡು ಎರಡು
ಮಾವಿನ ಹಣ್ಣು ಎರಡು
ಒಂದು ಎರಡು ಮೂರು
ಬಾಳೆಯ ಹಣ್ಣು ಮೂರು

**ಮೌಲ್ಯಮಾಪನ** : ಎಣಿಸಿ ಹೇಳಲು ಸಾಧ್ಯವಾಗುವುದು. (3 ರವರೆಗೆ)
- ಸೂಕ್ತವಾದ ಬಣ್ಣವನ್ನು ನೀಡಲಾಗಿದೆ.
- ಗುಂಪಿನಲ್ಲಿ ಹೆಚ್ಚು ಇರುವುದನ್ನು ಗುರುತಿಸಲಾಗಿದೆ.

## ವರ್ಕ್ ಶೀಟು 5.3 - ಚಿತ್ರದಲ್ಲಿ ಏನೇನು? ಬಣ್ಣ ಹಚ್ಚಿರಿ.

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ
* ಭಾಷಾ ವಿಕಾಸ

**ಸಾಮರ್ಥ್ಯಗಳು** : ಪಂಚೇಂದ್ರಿಯಗಳ ಸಹಾಯದಿಂದ ವಸ್ತುಗಳು, ಜೀವಜಾಲಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದಕ್ಕೂ ಮೌಖಿಕವಾಗಿ ಮಂಡಿಸುವುದಕ್ಕೂ ಸಾಧ್ಯವಾಗುವುದು. ಸೂಕ್ತವಾದ ಬಣ್ಣವನ್ನು ನೀಡುವುದಕ್ಕೆ ಸಾಧ್ಯವಾಗುವುದು. (30)
- ಚಿತ್ರಗಳನ್ನು, ಕಥೆಗಳನ್ನು ನಿರೀಕ್ಷಣೆ ಮಾಡಿ ವಿವರಗಳನ್ನು ಮಂಡಿಸುವುದು. (21)

**ಆಶಯ** : ಮನೆಯ ಪರಿಸರದಲ್ಲಿ ಹಲವು ಬಗೆಯ ಸಸ್ಯಗಳನ್ನು ನೆಟ್ಟು ಬೆಳೆಸಲಾಗುವುದು.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್, ವಿವಿಧ ಬಗೆಯ ಎಲೆಗಳು.

**ಸಂದರ್ಭ** : ಬಯಲು ಪ್ರವಾಸದಲ್ಲಿ ಸುತ್ತು ಮುತ್ತಲಿನ ಸಸ್ಯಗಳನ್ನು ನಿರೀಕ್ಷಣೆ ಮಾಡಿ ಬಂದ ಮೇಲೆ ವರ್ಕ್ ಶೀಟು ಉಪಯೋಗಿಸಬಹುದು.

**ಪ್ರಕ್ರಿಯೆ** :

**ಆಖ್ಯಾನ** : ಚಿತ್ರಳ ಮನೆಯಲ್ಲಿ ಒಂದು ದೊಡ್ಡ ಮಾವಿನ ಮರ ಮತ್ತು ಒಂದು ದೊಡ್ಡ ಹಲಸಿನ ಮರ ಇದೆ. ಚಿತ್ರ ಪ್ರತಿದಿನ ಮಾವಿನ ಮತ್ತು ಹಲಸಿನ ಮರಗಳ ಹತ್ತಿರ ಹೋಗುವಳು. ಹಲಸಿನ ಮರದೊಡನೆ ತುಂಬಾ

ಹೊತ್ತು ಮಾತನಾಡುವಳು. ಚಿತ್ರ ಹಲಸಿನ ಮರದೊಡನೆ ಮಾತನಾಡಿದ್ದು ಏನಾಗಿರಬಹುದು? (ಪ್ರತಿಕ್ರಿಯೆ)

"ಹಲಸಿನ ಕಾಯಿ ಆಗುವುದು ಯಾವಾಗ?"

"ಸಮಯ ಬರಲಿ"

"ನಾನು ಕೋಪ. ಯಾವಾಗಲೂ ಹೀಗೆಯೇ ಹೇಳುವುದು."

ಚಿತ್ರ ಮಾವಿನ ಮರದ ಹತ್ತಿರ ಹೋದಳು.

"ಮಾವಿನ ಮರವೇ ನನಗೆ ಮಾವಿನ ಹಣ್ಣನ್ನು ಕೊಡುವುದು ಯಾವಾಗ?"

"ಸಮಯ ಬರಲಿ"

"ನಾನು ಕೋಪ" ಅವಳು ಮನೆಗೆ ಮರಳಿದಳು.

: ತುಂಬಾ ದಿನಗಳ ನಂತರ ಒಂದು ದಿನ ಒಂದು ಕೋಗಿಲೆ ಹಾರಿ ಬಂದು ಕಿಟಕಿಯಲ್ಲಿ ಕುಳಿತು ಚಿತ್ರಳನ್ನು ಕರೆಯಿತು. ಮಾವಿನಲ್ಲಿ ಹೂ ಬಿಟ್ಟಿತು. ಮಾವಿನಕಾಯಿ ಹಣ್ಣಾಯಿತು. ಮೈನ ಹಕ್ಕಿ ಬಂತು. ಕಿಟಕಿಯಲ್ಲಿ ಕುಳಿತು ಚಿತ್ರಳನ್ನು ಕರೆಯಿತು. ಹಲಸಿನಲ್ಲಿ ಹೂವಾಯಿತು. ಹಲಸಿನಕಾಯಿ ಹಣ್ಣಾಯಿತು. ಬಾ.. ಹೋಗೋಣ. ಬಾ.. ಹೋಗೋಣ. ಹಕ್ಕಿಗಳೊಂದಿಗೆ ಚಿತ್ರ ಮರಗಳ ಬಳಿಗೆ ಹೋದಳು. ಅಲ್ಲಿ ತುಂಬಾ ಮಂದಿ ಸೇರಿದ್ದರು. ನಾವು ಹಣ್ಣುಗಳನ್ನು ಬೀಳಿಸಿ ಕೊಡುತ್ತೇವೆ ಎಂದು ಹಕ್ಕಿಗಳು ಹೇಳಿದುವು. ಎಲ್ಲರಿಗೂ ಸಂತೋಷವಾಯಿತು.

ವರ್ಕ್ ಶೀಟು 5.3 "ಚಿತ್ರದಲ್ಲಿ ಏನೇನು? ಬಣ್ಣ ಹಚ್ಚಿರಿ" - ನೀಡುವುದು.

: ಚಿತ್ರದಲ್ಲಿ ಏನೇನು?

- ಯಾವೆಲ್ಲ ಸಸ್ಯಗಳು ಇವೆ?
- ಅವುಗಳನ್ನು ಗುರುತಿಸಿದ್ದು ಹೇಗೆ? (ಹಣ್ಣುಗಳನ್ನು ನೋಡಿ)
- ನಿಮ್ಮ ಮನೆಯ ಪರಿಸರದಲ್ಲಿ ಯಾವೆಲ್ಲ ಸಸ್ಯಗಳು ಇವೆ?
- ಅಧ್ಯಾಪಿಕೆ ಕೆಲವು ಎಲೆಗಳನ್ನು ತೋರಿಸುವರು. ಯಾವ ಸಸ್ಯದ್ದೆಂದು ಮಕ್ಕಳು ಹೇಳಲಿ.
- ಚಿತ್ರಕ್ಕೆ ಬಣ್ಣ ಹಚ್ಚುವುದು. (ಸೃಜನಾತ್ಮಕ)
- ಮಕ್ಕಳು ಭರ್ತಿ ಮಾಡಿದ ವರ್ಕ್ ಶೀಟುಗಳ ಪ್ರದರ್ಶನ.

**ಮೌಲ್ಯಮಾಪನ** : ಚಿತ್ರದಲ್ಲಿರುವ ಸಸ್ಯಗಳನ್ನು ಗುರುತಿಸಲು ಸಾಧ್ಯವಾಯಿತು.

- ಸಸ್ಯಗಳ ಪ್ರತ್ಯೇಕತೆಗಳನ್ನು ಹೇಳಲು ಸಾಧ್ಯವಾಯಿತು.
- ಸೂಕ್ತವಾದ ಬಣ್ಣ ನೀಡಲಾಗಿದೆ.
- ಎಲೆಗಳನ್ನು ಗುರುತಿಸಿ ಸಸ್ಯಗಳ ಹೆಸರನ್ನು ಹೇಳಲು ಸಾಧ್ಯವಾಗುವುದು.

# ಥೀಂ 6 – ಆಹಾರ

**ಹೋಲಿಸುವುದು, ವರ್ಗೀಕರಿಸುವುದು ಎಂಬಿವುಗಳು ಪ್ರಕ್ರಿಯಾ ಸಾಮರ್ಥ್ಯಗಳಾಗಿವೆ. ಪ್ರಧಾನ ಸವಿಶೇಷತೆಗಳ ಆಧಾರದಲ್ಲಿ ಇವು ನಡೆಯುವುದು. ಸಮಾನವಾದ ವಿಷಯಗಳು, ವ್ಯತ್ಯಸ್ತವಾದವುಗಳು ಎಂಬ ಚರ್ಚೆಯ ಬಳಿಕ ವರ್ಕ್ ಶೀಟುಗಳನ್ನು ಸ್ವತಃ ಪೂರ್ತಿಗೊಳಿಸಲಿ.**

**ಚಟುವಟಿಕಾ ಕ್ರಮ**

1. ಇಷ್ಟವಿರುವ ಆಹಾರ – ವಿವರಗಳು

↓

2. ವಿವಿಧ ಬಗೆಯ ಆಹಾರ ಪದಾರ್ಥಗಳು - ಅನುಭವ ವಿವರಣೆ (ಬಿಸ್ಕೆಟು, ಪಾಯಸ, ಅನ್ನ, ಪದಾರ್ಥಗಳು,...)

↓

3. ವರ್ಕ್ ಶೀಟು 6.1 "ಅಪ್ಪು ಏನೆಲ್ಲಾ ತಿನ್ನುವನು?" - ನೀಡುವುದು.

↓

4. ಜೀವಿಗಳ ಆಹಾರ

↓

5. ಸಸ್ಯಗಳು, ಹಣ್ಣುಗಳು, ಹಾಡುಗಳು, ಕಥೆಗಳು.

↓

6. ವರ್ಕ್ ಶೀಟು 6.2 "ಗೆರೆ ಎಳೆದು ಜೋಡಿಸುವ" ನೀಡುವುದು.

↓

7. ಹಣ್ಣುಗಳು, ಎಲೆಗಳು ವರ್ಗೀಕರಣ (ಬಣ್ಣ, ಆಕೃತಿ, ಗಾತ್ರ, ರುಚಿ,...)

↓

8. ರೋಲ್ ಪ್ಲೇ

↓

9. ಆಹಾರ ಸಂಬಂಧಿಸಿದ ಆಟಗಳು (ಪರಿಮಳ, ಆಕೃತಿ, ಬಣ್ಣ, ರುಚಿ)

↓

10. ವರ್ಕ್ ಶೀಟು 6.3 "ಆಹಾರ ಯಾರಿಗೆ?" ನೀಡುವುದು.

↓

11. ಸಸ್ಯ ಪರಿಪಾಲನೆ

↓

12. ಮಾದರಿ ನೋಡಿ ನಮೂನೆ ನಿರ್ಮಾಣ.

↓

13. ಪ್ರಕೃತಿ ಆಸ್ವಾದನೆ.

↓

14. ಅಡುಗೆ ಉಪಕರಣಗಳು (ಕಿಚನ್ ಸೆಟ್)

↓

15. ಆಹಾರ ಅಭ್ಯಾಸಗಳು

↓

16. ವರ್ಕ್ ಶೀಟು 6.4 "ಉತ್ತಮ ಆಹಾರ ಅಭ್ಯಾಸಗಳನ್ನು ಕಂಡುಹಿಡಿಯಿರಿ" ನೀಡುವುದು.

↓

17. ಆಹಾರಕ್ಕೆ ಸಂಬಂಧಿಸಿದ ವಿವಿಧ ಪದ್ಯಗಳು.

## ವರ್ಕ್ ಶೀಟು 6.1 - ಅಪ್ಪು ಏನೆಲ್ಲ ತಿನ್ನುವನು?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಪಂಚೇಂದ್ರಿಯಗಳ ಸಹಾಯದಿಂದ ವಸ್ತುಗಳು / ಜೀವಜಾಲಗಳು ಎಂಬಿವುಗಳನ್ನು ನಿರೀಕ್ಷಣೆ ಮಾಡಿ ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದಕ್ಕೂ ಮೌಖಿಕವಾಗಿ ಮಂಡಿಸುವುದಕ್ಕೂ ಸಾಧ್ಯವಾಗುವುದು. (30)

**ಆಶಯ** : ಹಲವು ವಿಧದ ಆಹಾರಗಳಿವೆ.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್.

**ಸಂದರ್ಭ** : ಆಟಿಕೆ ಪುಸ್ತಕದ ಪುಟ ಸಂಖ್ಯೆ 203 ರಲ್ಲಿರುವ ಆಹಾರಕ್ಕೆ ಸಂಬಂಧಿಸಿದ ಹಾಡುಗಳಲ್ಲಿ ಎರಡು ಅಥವಾ ಮೂರು ಹಾಡುಗಳನ್ನು ಹಾಡಿದ ನಂತರ ಆಹಾರ ಪದಾರ್ಥಗಳ ವೈವಿಧ್ಯತೆಯನ್ನು ಪರಿಚಯಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಅಪ್ಪು, ಎಲ್ಲರ ಪ್ರೀತಿಯ ಹುಡುಗ. ದೋಸೆ ಅವನ ಇಷ್ಟದ ಆಹಾರ. ಇಡ್ಲಿಯೂ ಇಷ್ಟವೇ. ಹಣ್ಣುಗಳೂ ಇಷ್ಟ. ದೋಸೆ ಮಾಡುವುದನ್ನು ಅಪ್ಪು ನೋಡಿದ್ದಾನೆ. ಅದನ್ನು ಕಾಣುವುದು ಅವನಿಗೆ ತುಂಬಾ ಇಷ್ಟ. ದೋಸೆ ಹೊಯ್ಯುವುದನ್ನು ಕಾಣುವಾಗ ಅಪ್ಪು ದೋಸೆ ಹಾಡು ಹಾಡುವನು.

ಒಲೆಯಲಿ ಕಾವಲಿ ಇಟ್ಟಳು ಅಮ್ಮ
ದೋಸೆಯ ಹೊಯ್ದಳು ಚುಯಿಂ ಚುಯಿಂ ಚುಯಿಂ
.........................................................

: ಇನ್ನೂ ಅಪ್ಪುವಿನ ಆಹಾರ ಏನೆಲ್ಲ ಎಂದು ನೋಡೋಣ.

ವರ್ಕ್ ಶೀಟು 6.1 "ಅಪ್ಪು ಏನೆಲ್ಲ ತಿನ್ನುವನು?" ನೀಡುವುದು.

: ಅಪ್ಪುವಿನ ಆಹಾರದ ಹತ್ತಿರ ಕಾಣುವ ವೃತ್ತಕ್ಕೆ ಬಣ್ಣ ಹಚ್ಚುವ. ಮಕ್ಕಳು ಬಣ್ಣ ಹಚ್ಚುವರು.

**ಮೌಲ್ಯಮಾಪನ** : ಆಹಾರ ಪದಾರ್ಥಗಳನ್ನು ಗುರುತಿಸಿ ಹತ್ತಿರದಲ್ಲಿರುವ ವೃತ್ತಕ್ಕೆ ಬಣ್ಣ ಹಚ್ಚಲು ಸಾಧ್ಯವಾಗಿದೆ.

## ವರ್ಕ್ ಶೀಟು 6.2 - ಗೆರೆ ಎಳೆದು ಜೋಡಿಸುವ

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಕಂಡುಕೊಳ್ಳುವ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದಕ್ಕೂ ಅನುಭವಗಳ ಬೆಂಬಲದಿಂದ ನಿಗಮನಗಳನ್ನು ಮಂಡಿಸುವುದಕ್ಕೂ ಸಾಧ್ಯವಾಗುವುದು. (31)

**ಆಶಯ** : ಮನುಷ್ಯ ಮಾತ್ರವಲ್ಲ, ಹಸಿದಾಗ ಇತರ ಜೀವಿಗಳೂ ಆಹಾರ ಸೇವಿಸುತ್ತವೆ.

**ಸಾಮಗ್ರಿಗಳು** : ವರ್ಕ್ ಶೀಟು

**ಸಂದರ್ಭ** : ಮನೆಯಲ್ಲಿ ಸಾಕುವ ಪ್ರಾಣಿಗಳಿಗೆ ನೀಡುವ ಆಹಾರ, ನಾವು ಸೇವಿಸುವ ಆಹಾರ ಎಂಬಿವುಗಳಿಗೆ ಸಂಬಂಧಿಸಿದ ಅನುಭವವನ್ನು ಹೇಳುವುದು.

**ಪ್ರಕ್ರಿಯೆ** : ಮನೆಯಲ್ಲಿರುವ ಆಡುಮರಿ ಮತ್ತು ಕೋಳಿಮರಿಗಳು ಅಮ್ಮುವಿನ ಗೆಳೆಯರು. ಅವನೇ ಅವುಗಳಿಗೆ ಆಹಾರ ನೀಡುವುದು.

**ಆಟ** : ಮನೆಯಲ್ಲಿ ಸಾಕುವ ಪ್ರಾಣಿಗಳು ಯಾವುವು? ಅವುಗಳು ತಿನ್ನುವ ಆಹಾರ ಯಾವುದು? ಆಹಾರದ ಹೆಸರು ಹೇಳಿ ಆಟ. ಆಹಾರದ ಹೆಸರು ಹೇಳುವಾಗ ಅದನ್ನು ತಿನ್ನುವ ಜೀವಿಯ ಹೆಸರು ಹೇಳಬೇಕು.

- ಒಂದು ದಿನ ಅವನು ಆಡುಮರಿಗೆ ಒಂದು ಮಾವಿನ ಹಣ್ಣನ್ನು ಕೊಟ್ಟನು. "ಮತ್ತೆ ತಿನ್ನುವ" ಆಡುಮರಿ ಹೇಳಿತು. ಅಮ್ಮು ಮಾವಿನ ಹಣ್ಣನ್ನು ಅಲ್ಲಿ ಇಟ್ಟನು. ಮೂವರೂ ಆಟಕ್ಕೆ ಹೋದರು. ಹಿಂತಿರುಗಿ ಬಂದಾಗ ಹಣ್ಣು ಕಾಣುವುದಿಲ್ಲ. ಎಲ್ಲಿ ಹೋಯ್ತು? ಎಲ್ಲರೂ ಹುಡುಕಿದರು. "ಚಿಲ್, ಚಿಲ್" ಮರದ ಕೊಂಬೆಯಲ್ಲಿ ಒಬ್ಬನಿದ್ದಾನೆ. ಆಹಾ.. ಮಾವಿನ ಹಣ್ಣು ತಿಂದವ ನೀನೇನಾ? ಕೋಳಿ ಮರಿ ಕೋಪದಿಂದ ಕೇಳಿತು. ಅಳಿಲು ಮರಿಯೇ ಇನ್ನೇನು ಮಾಡುವುದು? ನಾನು ಆಡಿನಮರಿಗೆ ಪ್ರೀತಿಯಿಂದ ಕೊಟ್ಟದ್ದಲ್ಲವೇ? ಬೇಸರ ಮಾಡಬೇಡ. ನಾನು ಪ್ರೀತಿಯಿಂದ ಅದನ್ನು ತಿಂದೆನು. ನಾನೀಗ ಒಂದು ತಂತ್ರವನ್ನು ತೋರಿಸುತ್ತೇನೆ. ಎಂದು ಹೇಳಿ ಅಳಿಲು ಮರದ ಗೆಲ್ಲನ್ನು

ಅಲುಗಾಡಿಸಿತು. ತಟಪಟನೆ ಮಾವಿನ ಹಣ್ಣುಗಳು ಬಿದ್ದುವು. ಒಳ್ಳೆಯ ಸಿಹಿ ಸಿಹಿ ಮಾವಿನ ಹಣ್ಣುಗಳು. ಎಲ್ಲರಿಗೂ ಸಂತೋಷವಾಯಿತು. ನನಗೆ ಎಲೆಗಳು ಇಷ್ಟ ಎಂದು ಆಡು ಹೇಳಿತು. ನನಗೆ ಅಕ್ಕಿ ತುಂಬಾ ಇಷ್ಟ ಎಂದು ಕೋಳಿಮರಿ ಹೇಳಿತು. ಇಷ್ಟವಿರುವ ಆಹಾರವನ್ನು ಅವರಿಗೆ ಕೊಡಬಹುದೇ?

ವರ್ಕ್ ಶೀಟು 6.2 ಗೆರೆ ಎಳೆದು ಜೋಡಿಸುವ – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಯಾರೆಲ್ಲ ಇದ್ದಾರೆ? ಯಾವೆಲ್ಲ ಆಹಾರ ಪದಾರ್ಥಗಳು ಇವೆ?

- ಪ್ರತಿಯೊಬ್ಬರೂ ಅವರಿಗೆ ಇಷ್ಟವಿರುವ ಆಹಾರಕ್ಕೆ ಗೆರೆ ಎಳೆದು ಜೋಡಿಸಲಿ.

**ಮೌಲ್ಯಮಾಪನ** : ಜೀವಿಗಳು ಮತ್ತು ಅವುಗಳ ಆಹಾರವನ್ನು ಗುರುತಿಸಿ ಗೆರೆ ಎಳೆದು ಜೋಡಿಸಲು ಸಾಧ್ಯವಾಗಿದೆ.

## ವರ್ಕ್ ಶೀಟು 6.3 - ಆಹಾರ ಯಾರಿಗೆ?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಗಣಿತ ಸಮಸ್ಯೆಗಳನ್ನು ಪರಿಹರಿಸಲು ಸಾಧ್ಯವಾಗುವುದು. (46)

**ಆಶಯ** : ಹಲವು ವಿಧದ ಆಹಾರಗಳಿವೆ.

**ಸಂದರ್ಭ** : ವಿವಿಧ ಆಹಾರವಸ್ತುಗಳ ಕುರಿತು ಚರ್ಚೆ ಮಾಡಿದ ನಂತರ

**ಪ್ರಕ್ರಿಯೆ** :

**ಆಖ್ಯಾನ** : ಮೊಲವು ಬಾಳೆಯನ್ನು ನೆಟ್ಟಿತು. ಬಾಳೆಯ ಬುಡದಲ್ಲಿ ಕೇರೆಟ್ಟನ್ನೂ ನೆಟ್ಟಿತು. ಗಿಳಿ ಮಾವಿನ ಗಿಡವನ್ನು ಬೆಳೆಸಿತು. ಸೋಮಾರಿ ಅಳಿಲು ಏನೂ ಮಾಡಲಿಲ್ಲ. ಬಾಳೆ ಬೆಳೆಯಿತು. ಗೊನೆ ಹಾಕಿತು. ಗೊನೆ ಹಣ್ಣಾಯಿತು. ಮಾವು ಬೆಳೆಯಿತು. ಕಾಯಿಯಾಯಿತು. ಕಾಯಿಗಳು ಹಣ್ಣಾಯಿತು. ಕೇರೆಟ್ ಬೆಳೆಯಿತು.

ಬಾ.. ಮೊಲವೇ, ಮಾವಿನ ಹಣ್ಣು ಕೊಡುತ್ತೇನೆ ಎಂದು ಗಿಳಿ ಹೇಳಿತು. ಬಾ.. ಗಿಳಿಯೇ, ಬಾಳೆಹಣ್ಣನ್ನೂ ಕೇರೆಟನ್ನೂ ಕೊಡುತ್ತೇನೆ ಎಂದು ಮೊಲ ಹೇಳಿತು. ನನಗೂ ಕೊಡುವಿರಾ? ಅಳಿಲು ಕೇಳಿತು... ಇಲ್ಲ.. ಕೊಡಲಾರೆ.. ಗಿಳಿಯೂ ಮೊಲವೂ ಹೇಳಿದವು.

ಹಾಡುಗಾರ್ತಿ ಗಿಳಿಯೇ, ನೀನು ಹಾಡುವಾಗ ನಾನು ತಾಳ ಹಾಕುತ್ತೇನೆ. ನರ್ತಕರಾದ ಮೊಲಗಳೇ, ನೀವು ನೃತ್ಯ ಮಾಡುವಾಗ ನಾನು ತಾಳ ಹಾಕುತ್ತೇನೆ. ಗಿಳಿ ಮತ್ತು ಮೊಲ ಒಪ್ಪಿಕೊಂಡುವು. ಗಿಳಿಯ ಹಾಡಿಗೆ ಮೊಲಗಳು ನೃತ್ಯ ಮಾಡಿದುವು. ಅಳಿಲು ತಾಳ ಹಾಕಿತು. ಆಟ ಮುಗಿದಾಗ ಗಿಳಿಯೂ ಮೊಲವೂ ಹೇಳಿದುವು. ಮೊಲವೇ, ಮೊಲವೇ, ನಿನಗೆ ಬೇಕಾದ ಆಹಾರ ತೆಗೆದುಕೋ. ಅಳಿಲು ಎರಡು ಮೂರು ತರದ ಆಹಾರವನ್ನು ತೆಗೆದುಕೊಂಡಿತು. ಗಿಳಿಯೂ ಎರಡು ವಿಧದ ಆಹಾರವನ್ನು ತೆಗೆಯಿತು. ಅವರು ತೆಗೆದ ಆಹಾರವನ್ನು ಗೆರೆ ಎಳೆದು ಜೋಡಿಸಿರಿ.

- ಪ್ರತಿಯೊಂದು ಜೀವಿಗೂ ಒಂದೊಂದು ಸಿಗಬೇಕಿದ್ದರೆ ಯಾವ ಹಣ್ಣು / ತರಕಾರಿಯನ್ನು ನೀಡುವಿರಿ?
- ಅವುಗಳನ್ನು ಜೋಡಿಸಿ ಗೆರೆ ಎಳೆಯಿರಿ.
- ಮೊಲದ ಆಹಾರ ಏನಾಗಿರಬಹುದು? ಗೆರೆ ಎಳೆದು ಜೋಡಿಸಿರಿ.

**ಮೌಲ್ಯಮಾಪನ** : ಚಿತ್ರದಲ್ಲಿರುವ ಜೀವಿಗಳನ್ನೂ ಆಹಾರ ವಸ್ತುಗಳನ್ನೂ ಗುರುತಿಸಿ ಹೆಸರು ಹೇಳಲು ಸಾಧ್ಯವಾಗುವುದು.

- ಜೀವಿಗಳನ್ನು ಮತ್ತು ಆಹಾರವಸ್ತುಗಳನ್ನು ಪರಸ್ಪರ ಗೆರೆ ಎಳೆದು ಜೋಡಿಸಲು ಸಾಧ್ಯವಾಗುವುದು.

## ವರ್ಕ್ ಶೀಟು 6.4 - ಉತ್ತಮ ಆಹಾರ ಆಭ್ಯಾಸಗಳನ್ನು ಕಂಡುಹಿಡಿಯಿರಿ.

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯ** : ಆಹಾರ ಆಭ್ಯಾಸ, ಶುಚಿತ್ವಶೀಲ ಎಂಬಿವುಗಳ ಕುರಿತು ತಿಳಿಯುವುದು. (36)

**ಆಶಯ** : ಶುಚಿಯಾದ ಆಹಾರವನ್ನೇ ಸೇವಿಸಬೇಕು.

**ಸಾಮಗ್ರಿಗಳು** : ವರ್ಕ್ ಶೀಟು, ಕ್ರಯೋನ್ಸ್

**ಸಂದರ್ಭ** : ಆಹಾರ / ಆರೋಗ್ಯ ಆಭ್ಯಾಸಗಳ ಕುರಿತು ಚರ್ಚಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಇಂದು ರಜಾದಿನ. ಅಪ್ಪು ಅಕ್ಕನನ್ನು ಕರೆದನು. ನಾವು ಆಟಕ್ಕೆ ಹೋಗೋಣ. ಅಕ್ಕ ಮತ್ತು ಅಪ್ಪು ಗೆಳೆಯರನ್ನು ಕರೆದರು.
ಅಕ್ಕ, ಅಪ್ಪು ಮತ್ತು ಗೆಳೆಯರು ಆಡುವುದಕ್ಕಾಗಿ ಮೈದಾನಕ್ಕೆ ಹೋದರು. ಅವರು ಆಡುವುದಕ್ಕೆ ತೊಡಗಿದರು. ನಾನು ಒಂದು ಆಟ ಹೇಳುತ್ತೇನೆ. ಆ ಆಟವನ್ನು ಆಡೋಣವೇ? ಅಕ್ಕ ಹೇಳಿದಳು. ಎಲ್ಲರೂ ಒಪ್ಪಿಕೊಂಡರು. ಅವರು ಆಡಿದ ಆಟ ಯಾವುದಾಗಿರಬಹುದು? (ಸ್ವತಂತ್ರ ಪ್ರತಿಕ್ರಿಯೆ)
ಅಪ್ಪು ಮತ್ತು ಗೆಳೆಯರು ವೃತ್ತಾಕಾರದಲ್ಲಿ ನಿಂತರು.
ನಾವು ಕೂಡ ಆ ಆಟ ಆಡೋಣವೇ?
ಮಕ್ಕಳು ವೃತ್ತಾಕಾರದಲ್ಲಿ ನಿಲ್ಲುವರು. ಅಧ್ಯಾಪಿಕೆ ಅಕ್ಕನಾಗಿ ನಿಲ್ಲುವರು.

**ಅಧ್ಯಾಪಿಕೆ** : ನನ್ನೊಂದಿಗೆ ನೀವೂ ಅಭಿನಯಿಸಿ ತೋರಿಸಿ ಹಾಡಬೇಕು.
"ಕಾಲನು ಮುಟ್ಟಿ ಕೈ ಬಡೀ.."

**ಮಕ್ಕಳು** :"ಕಾಲನು ಮುಟ್ಟಿ ಕೈ ಬಡೀ.."
ಮಕ್ಕಳು ಹಾಡುತ್ತಾ ಕಾಲನ್ನು ಮುಟ್ಟಿ ಕೈಯನ್ನು ಬಡಿಯುವರು.

**ಅಧ್ಯಾಪಿಕೆ** : ಮೊಣಕಾಲ್ಮುಟ್ಟಿ ಕೈ ಬಡೀ..
ಅಧ್ಯಾಪಿಕೆ ಮೊಣಕಾಲು ಮುಟ್ಟಿ ಕೈ ಬಡಿಯುವರು.

**ಮಕ್ಕಳು** : ಮೊಣಕಾಲ್ಮುಟ್ಟಿ ಕೈ ಬಡೀ.. ಮಕ್ಕಳು ಹಾಡುತ್ತಾ ಮೊಣಕಾಲನ್ನು ಮುಟ್ಟಿ ಕೈ ಬಡಿಯುತ್ತಾರೆ. ನಂತರ, ಹೊಟ್ಟೆ, ಎದೆ, ಮೂಗು, ಕಿವಿ, ತುಟಿ, ಕಣ್ಣು, ತಲೆ ಎಂಬಿವುಗಳನ್ನು ಸೇರಿಸಿ ಹಾಡುವುದು.
ಒಟ್ಟಿಗೆ ಜಿಗಿದು ಕೈ ಬಡೀ..
ಮಕ್ಕಳು ಎಲ್ಲರೂ ಒಟ್ಟಿಗೆ ಜಿಗಿಯುತ್ತಾ ಕೈ ಬಡಿಯುವರು.

: ಅಪ್ಪು ಮತ್ತು ಗೆಳೆಯರು ಆಡಿದ ಆಟ ಇಷ್ಟವಾಯಿತೇ? ಮುಂದಿನ ಆಟ ಆರಂಭಿಸುವಾಗ ಮಾವ ಬಂದರು. ಅಕ್ಕನ ಕೈಯಲ್ಲಿ ಬಿಸ್ಕೇಟ್ ಪ್ಯಾಕೇಟ್ ಕೊಟ್ಟರು. ಅಕ್ಕ ಕವರ್ ಹರಿದಳು. ಅಪ್ಪು ಓಡಿ ಬಂದು ಕಸಿದುಕೊಳ್ಳಲು ನೋಡಿದನು. ಇತರರೂ ಅಪ್ಪುವಿನೊಂದಿಗೆ ಸೇರಿದರು. ಬಿಸ್ಕೇಟುಗಳೆಲ್ಲ ಪುಡಿಪುಡಿಯಾಗಿ ನೆಲದಲ್ಲಿ ಬಿತ್ತು.
ಮಕ್ಕಳು ಅದನ್ನು ತೆಗೆದು ತಿನ್ನಲು ನೋಡಿದರು. ನೆಲದಲ್ಲಿ ಬಿದ್ದದ್ದನ್ನು ತಿನ್ನಬೇಡಿ. ರೋಗ ಬರಬಹುದು. ಅಕ್ಕ ಹೇಳಿದಳು. ಅಪ್ಪು ಕೇಳಲಿಲ್ಲ. ಅವನು ನೆಲದಲ್ಲಿ ಬಿದ್ದ ಬಿಸ್ಕೇಟು ತುಂಡುಗಳನ್ನು ಹೆಕ್ಕಿ ತಿಂದನು. ಆಟ ಮುಗಿದು ಎಲ್ಲರೂ ಮನೆಗೆ ಮರಳಿದರು.
ಮರುದಿನ ಬೆಳಗ್ಗೆ ಏಳುವಾಗ ಅಪ್ಪುವಿಗೆ ಜೋರು ಹೊಟ್ಟೆನೋವು. ಅಪ್ಪು ಕಕ್ಕೂಸಿಗೆ ಹೋದನು. ಒಂದು ಸಲ, ಎರಡು ಸಲ, ಮೂರು ಸಲ ಹೋದನು. ಪುನಃ ಪುನಃ ಹೋದನು. ಹೊಟ್ಟೆನೋವು..
ಹೊಟ್ಟೆನೋವು.. ಅವನು ಅಳತೊಡಗಿದನು. ಅಮ್ಮ ಅಪ್ಪುವನ್ನು ಕರೆದುಕೊಂಡು ಆಸ್ಪತ್ರೆಗೆ ಹೋದರು. ಡಾಕ್ಟರು ವಿಷಯವನ್ನು ಕೇಳಿದರು. ಅಪ್ಪು ಸತ್ಯ ಹೇಳಿದನು. ಡಾಕ್ಟರು ಅಪ್ಪುವಿನ ಕೈಯಲ್ಲಿ ಒಂದು ಕಾಗದ ಕೊಟ್ಟರು. ಇದರಲ್ಲಿ ಮಾಡಬಹುದಾದ ಮತ್ತು

ಮಾಡಬಾರದ ಕಾರ್ಯಗಳ ಕುರಿತು ಹೇಳಲಾಗಿದೆ.

ವರ್ಕ್ ಶೀಟು 6.4 ಉತ್ತಮ ಆಹಾರ ಅಭ್ಯಾಸಗಳನ್ನು ಕಂಡುಹಿಡಿಯಿರಿ - ನೀಡುವುದು.

**ಚಿತ್ರ ಓದು** : ಚಿತ್ರವನ್ನು ನಿರೀಕ್ಷಣೆ ಮಾಡಿ ಪ್ರತಿಯೊಬ್ಬರು ಮಾಡುವ ಕಾರ್ಯಗಳನ್ನು ವಿವರಿಸಲು ಅವಕಾಶ ಒದಗಿಸುವುದು.

- ಉತ್ತಮ ಆರೋಗ್ಯ ಆಭ್ಯಾಸಗಳು ಯಾವುವು?
- ಚಿತ್ರಗಳಲ್ಲಿ ಸರಿಯಾದ ಅಭ್ಯಾಸಗಳು ಯಾವುವು? ಮುಟ್ಟಿ ತೋರಿಸಿರಿ.
- ಉತ್ತಮ ಆಹಾರ ಅಭ್ಯಾಸಗಳಿರುವ ಚಿತ್ರಗಳ ಮುಂದೆ ಸರಿ ಗುರುತು ಹಾಕಲಿ.
- ಉತ್ತಮ ಆಹಾರ ಅಭ್ಯಾಸಗಳ ಕುರಿತು ಹೆಚ್ಚು ಚರ್ಚಿಸುವುದು.
- ಆಹಾರವನ್ನು ಚೆನ್ನಾಗಿ ಜಗಿದು ನುಂಗುವುದು.
- ಬೇಕರಿ ವಸ್ತುಗಳ ಅಮಿತ ಉಪಯೋಗ
- ಪ್ಯಾಕೇಟುಗಳಲ್ಲಿ ಸಿಗುವ ಆಹಾರ ಪದಾರ್ಥಗಳ ಉಪಯೋಗ.
- ಬಣ್ಣವಿರುವ ಶೀತಲ ಪಾನೀಯಗಳನ್ನು ಉಪಯೋಗಿಸದಿರುವುದು.

**ಮೌಲ್ಯಮಾಪನ** : ಸರಿಯಾದ ಆಹಾರ ಅಭ್ಯಾಸಗಳನ್ನು ಮತ್ತು ತಪ್ಪಾದ ಆಹಾರ ಅಭ್ಯಾಸಗಳನ್ನು ಗುರುತಿಸಲಾಗಿದೆ.

- ಸರಿಯಾದ ಅಭ್ಯಾಸಗಳಿರುವ ಚಿತ್ರಗಳ ಮುಂದೆ ಸರಿ ಗುರುತು ಹಾಕಲಾಗಿದೆ.

# ಥೀಂ 7 – ಉತ್ಸವಾಚರಣೆಗಳು, ಸ್ವಾತಂತ್ರ್ಯ ದಿನ

**ಸ್ವಾತಂತ್ರ್ಯ ಎನ್ನುವುದು ಮಕ್ಕಳಿಗೆ ಸಂಬಂಧಿಸಿ ಅಮೂರ್ತವಾದ ಒಂದು ಆಶಯವಾಗಿದೆ. ಭಾರತ, ಭಾರತದ ಸ್ವಾತಂತ್ರ್ಯ ಎನ್ನುವುದೆಲ್ಲ ಅವರಿಗೆ ಗ್ರಾಹ್ಯವಾಗಲಾರದು. ಆದುದರಿಂದ ಕಥೆಗಳು, ನಿರ್ಮಾಣ ಚಟುವಟಿಕೆ, ಪದ್ಯ ಮೊದಲಾದ ಆಸ್ವಾದ್ಯಕರವಾದ ಅನುಭವಗಳನ್ನು ಈ ಹಂತದಲ್ಲಿ ನೀಡಿದರೆ ಸಾಕು. ವರ್ಕ್ ಶೀಟು ನೀಡುವಾಗ ಈ ವಿಷಯವನ್ನು ಪರಿಗಣಿಸಬೇಕು.**

**ಬಾವುಟ ನಿರ್ಮಾಣದ ವೇಳೆಯಲ್ಲಿ ಸ್ವಂತವಾಗಿ ಮಾಡುವ ರೀತಿಯ ಚಟುವಟಿಕೆಗಳ ಗರಿಷ್ಠ ಸಾಧ್ಯತೆಗಳನ್ನು ಉಪಯೋಗಿಸಬೇಕು. ಅಂಟು ಲೇಪಿಸುವುದರಲ್ಲಿಯೂ ಅಂಟಿಸುವುದರಲ್ಲಿಯೂ ಸ್ವಾತಂತ್ರ್ಯ ನೀಡಬೇಕು. ಸಾಮರ್ಥ್ಯ ವಿಕಾಸಕ್ಕಿರುವ ಅವಕಾಶವಾಗಿ ಕಾಣಬೇಕು. ಮಾಡಿಕೊಡುವುದರ ಬದಲು ಮಾಡಲು ಸಹಾಯ ಮಾಡಿ ಪೂರ್ತೀಕರಿಸುವುದು ಎಂಬ ಸಮೀಪನವನ್ನು ಸ್ವೀಕರಿಸಬೇಕು.**

**ಚಟುವಟಿಕಾ ಕ್ರಮ**

1. ಉತ್ಸವಾಚರಣೆಗಳಿಗೆ ಸಂಬಂಧಿಸಿದ ಪದ್ಯ, ಕಥೆಗಳನ್ನು ಆಲಿಸುವುದು.

↓

2. ಮದುವೆ, ಹುಟ್ಟುಹಬ್ಬ ಮೊದಲಾದ ಸಮಾರಂಭಗಳಿಗೆ ಮನೆ ಮತ್ತು ಪರಿಸರಗಳನ್ನು ಅಲಂಕರಿಸುವುದು. ವಿಡಿಯೋ ಕಾಣುವುದು.

↓

3. ತರಗತಿ ಕೋಣೆಯನ್ನು ಅಲಂಕರಿಸುವುದು.

↓

4. ವರ್ಕ್ ಶೀಟು 7.1 ಬ್ಯಾಡ್ಜ್ ತಯಾರಿಸುವ – ನೀಡುವುದು.

↓

5. ವರ್ಕ್ ಶೀಟು 7.2 ಬಾವುಟ ತಯಾರಿಸುವ – ನೀಡುವುದು.

↓

6. ಸ್ವಾತಂತ್ರ್ಯ ದಿನಾಚರಣೆಯಲ್ಲಿ ಭಾಗವಹಿಸುವುದು.

## ವರ್ಕ್ ಶೀಟು 7.1 - ಬ್ಯಾಡ್ಜ್ ತಯಾರಿಸುವ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಚಿತ್ರಕ್ಕೆ ಬಣ್ಣ ಹಚ್ಚಲು ಸಾಧ್ಯವಾಗುವುದು. (4)

**ಆಶಯ** : ದಿನಾಚರಣೆಗಳಿಗೆ ಸಂಬಂಧಿಸಿ ಮನೆ, ಶಾಲೆ, ಪರಿಸರವನ್ನು ಅಲಂಕರಿಸಲಾಗುವುದು.

**ಸಾಮಗ್ರಿಗಳು** : ಕ್ರಯೋನ್ಸ್, ಸೇಫ್ಟಿ ಪಿನ್

**ಸಂದರ್ಭ** : ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ಮಾಡಬೇಕಾದ ಚಟುವಟಿಕೆ

**ಪ್ರಕ್ರಿಯೆ** :

**ಆಖ್ಯಾನ** : ವರ್ಕ್ ಶೀಟು 7.1 ಬ್ಯಾಡ್ಜ್ ತಯಾರಿಸುವ – ನೀಡುವುದು.

- ಅಧ್ಯಾಪಿಕೆಯ ಸೂಚನೆಯ ಪ್ರಕಾರ ಮಕ್ಕಳು ಬ್ಯಾಡ್ಜಿಗೆ ಬಣ್ಣ ಹಚ್ಚುವುದು.
- ರಿಬ್ಬನಿಗೆ ರಾಷ್ಟ್ರಧ್ವಜದ ಬಣ್ಣ ನೀಡುವುದು.
- ಅಧ್ಯಾಪಿಕೆ ಬ್ಯಾಡ್ಜಿನಲ್ಲಿ ಮಕ್ಕಳ ಹೆಸರು ಬರೆದು ಕೊಡಬೇಕು.
- ಅಧ್ಯಾಪಿಕೆ ಬ್ಯಾಡ್ಜ್ ಕತ್ತರಿಸಿ ಕೊಡಬೇಕು.

**ಮೌಲ್ಯಮಾಪನ** : ಸೂಚನೆಗಳಿಗನುಸರಿಸಿ ಸೂಕ್ತವಾದ ಬಣ್ಣಗಳನ್ನು ನೀಡುವರು.

## ವರ್ಕ್ ಶೀಟು 7.2 - ಬಾವುಟ ತಯಾರಿಸುವ

**ವಿಕಾಸ ಮಂಡಲ** : ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಕ್ರಯೋನ್ಸ್ ಉಪಯೋಗಿಸಿ ಚಿತ್ರಕ್ಕೆ ಬಣ್ಣ ಹಚ್ಚಲು ಸಾಧ್ಯವಾಗುವುದು. (4)

**ಆಶಯ** : ದಿನಾಚರಣೆಗಳಿಗೆ ಸಂಬಂಧಿಸಿ ಮನೆ, ಶಾಲೆ, ಪರಿಸರ ಎಂಬಿವುಗಳನ್ನು ಅಲಂಕರಿಸಲಾಗುವುದು.

**ಸಾಮಗ್ರಿಗಳು** : ಹಿಡಿಕಡ್ಡಿ, ಗೋಂದು, ಕ್ರಯೋನ್ಸ್.

**ಸಂದರ್ಭ** : ಸ್ವಾತಂತ್ರ್ಯ ದಿನದ ಹಿಂದಿನ ದಿನ ಬಾವುಟ ನಿರ್ಮಾಣ.

**ಪ್ರಕ್ರಿಯೆ** : ವರ್ಕ್ ಶೀಟು 7.2 ಬಾವುಟ ನಿರ್ಮಾಣ ನೀಡುವುದು.

- ಮೇಲಿರುವ ಬಾವುಟದ ಚಿತ್ರವನ್ನು ನಿರೀಕ್ಷಣೆ ಮಾಡುವುದು.
- ಯಾವೆಲ್ಲ ಬಣ್ಣಗಳು? ಮಕ್ಕಳು ಹೇಳುವರು.
- ಕೆಳಗಿರುವ ಬಾವುಟಕ್ಕೆ ಬಣ್ಣ ಹಚ್ಚುವುದು.
- ಅಧ್ಯಾಪಿಕೆ ಬಾವುಟ ಕತ್ತರಿಸಿ ತೆಗೆದು ಕೋಲಿಗೆ ಅಂಟಿಸುವುದು. (ತಾಯಂದಿರ ಸಹಾಯ ಪಡೆಯಬಹುದು)

**ಮೌಲ್ಯಮಾಪನ** : ಸೂಚನೆಗಳಿಗನುಸರಿಸಿ ಸರಿಯಾದ ರೀತಿಯಲ್ಲಿ ಬಣ್ಣ ಹಚ್ಚುವುದು.

# ಥೀಂ 8 – ಆರೋಗ್ಯ, ರೋಗಗಳು, ಆಸ್ಪತ್ರೆ

ವರ್ಕ್ ಶೀಟು ವಿವಿಧ ಚಟುವಟಿಕೆಗಳನ್ನು ನಡೆಸಲು ತಡೆಯಾಗಬಾರದು. ಮೈಮಿಂಗ್, ಪಾತ್ರಾಭಿನಯ, ಬೊಂಬೆ ನಾಟಕ, ಸ್ಯಾಂಡ್ ಟ್ರೇ ಉಪಯೋಗಿಸಿ ಕಥೆಯ ಮಂಡನೆ ಎಂಬಿವುಗಳನ್ನು ವರ್ಕ್ ಶೀಟುಗಳೊಂದಿಗೆ ಮನೋಹರವಾಗಿ ಹೊಂದಿಸುವುದು ಹೇಗೆಂಬ ಚಿಂತನೆ ನಡೆಯಬೇಕು.

**ಚಟುವಟಿಕಾ ಕ್ರಮ**

1. ಆರೋಗ್ಯ, ಶುಚಿತ್ವ, ಪದ್ಯಗಳು
2. ಶಾರೀರಿಕ ಶುಚಿತ್ವಕ್ಕೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗುವುದು.
3. ವರ್ಕ್ ಶೀಟು 8.1 ಚಿತ್ರ ನೋಡಿ ಹೇಳುವ – ನೀಡುವುದು.
4. ಡಾಕ್ಟರ್ ಸೆಟ್ ಉಪಯೋಗಿಸಿ ಪಾತ್ರಾಭಿನಯ.
5. ವರ್ಕ್ ಶೀಟು 8.2 ನಿಮಗೆ ಯಾರನ್ನು ಇಷ್ಟ – ನೀಡುವುದು.
6. ಕೈಯಲ್ಲಿ ಕೊಳೆ ಇದೆಯೇ? - ಸರಳ ಪ್ರಯೋಗ
7. ವರ್ಕ್ ಶೀಟು 8.3 ಸರಿ ಯಾರು? - ನೀಡುವುದು.

## ವರ್ಕ್ ಶೀಟು 8.1 - ಚಿತ್ರ ನೋಡಿ ಹೇಳುವ

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ

* ಭಾಷಾ ವಿಕಾಸ

**ಸಾಮರ್ಥ್ಯಗಳು** : ಆರೋಗ್ಯ ಅಭ್ಯಾಸಗಳು, ಶುಚಿತ್ವ ಅಭ್ಯಾಸಗಳ ಕುರಿತು ತಿಳಿಯುವುದು. (36)

- ರೋಲ್ ಪ್ಲೇ, ಬೊಂಬೆ ನಾಟಕ ಮೊದಲಾದ ಸಂದರ್ಭಗಳಲ್ಲಿ ತನ್ಮಯತೆಯಿಂದ ಅಭಿನಯಿಸಲು ಸಾಧ್ಯವಾಗುವುದು. (25)

**ಆಶಯಗಳು** : ಆಸ್ಪತ್ರೆಯು ರೋಗ ಬಂದರೆ ಚಿಕಿತ್ಸೆ ಮಾಡುವ ಸ್ಥಳವಾಗಿದೆ.

- ಆಸ್ಪತ್ರೆಯಲ್ಲಿ ಡಾಕ್ಟರ್, ನರ್ಸ್ ಮೊದಲಾದವರು ಇದ್ದಾರೆ.

**ಸಾಮಗ್ರಿಗಳು** : ಕ್ರಯೋನ್ಸ್, ಡಾಕ್ಟರ್ ಸೆಟ್.

**ಸಂದರ್ಭ** : ರೋಗಗಳು ಬಂದ ಅನುಭವಗಳನ್ನು ವಿವರಿಸುವುದು.

**ಪ್ರಕ್ರಿಯೆ** : ವರ್ಕ್ ಶೀಟು 8.1 ಚಿತ್ರ ನೋಡಿ ಹೇಳುವ – ನೀಡುವುದು.

**ಚಿತ್ರ ಓದು** : ಚಿತ್ರದಲ್ಲಿ ಯಾರೆಲ್ಲ ಇದ್ದಾರೆ?

- ರೋಗಗಳು ಬಂದರೆ ನಾವು ಎಲ್ಲಿಗೆ ಹೋಗುತ್ತೇವೆ?
- ಮಕ್ಕಳು ಆಸ್ಪತ್ರೆಗೆ ಹೋದ ಅನುಭವಗಳನ್ನು ಹೇಳುವುದು.
- ಆಸ್ಪತ್ರೆಯಲ್ಲಿ ಏನೇನು ಮಾಡುತ್ತಾರೆ?
- ಆಸ್ಪತ್ರೆ ಆಟ ಆಡುವುದು.
- ಡಾಕ್ಟರ್ ಸೆಟ್ ಉಪಯೋಗಿಸಿ ಡಾಕ್ಟರ್, ನರ್ಸ್, ರೋಗಿಗಳು ಎಂಬಂತೆ ಪಾತ್ರಾಭಿನಯ ಮಾಡುವುದು.
- ಚಿತ್ರದಲ್ಲಿರುವ ಪ್ರತಿಯೊಬ್ಬರನ್ನೂ ಗುರುತಿಸುವುದು.
- ಡಾಕ್ಟರ್ ಮತ್ತು ನರ್ಸಿಗೆ ಮಾತ್ರ ಬಣ್ಣ ಹಚ್ಚುವುದು.

**ಮೌಲ್ಯಮಾಪನ** : ಡಾಕ್ಟರ್ ಮತ್ತು ನರ್ಸ್ ಎಂಬಿವರನ್ನು ಗುರುತಿಸಿ ಬಣ್ಣ ಹಚ್ಚಲಾಗಿದೆ.

- ಇತರರಿಗೆ ವೇದ್ಯವಾಗುವಂತೆ ಡಾಕ್ಟರ್, ನರ್ಸ್, ರೋಗಿ ಎಂಬಿವರನ್ನು ಮಂಡಿಸಲಾಗಿದೆ.
- ಏನೆಲ್ಲಾ ವ್ಯತ್ಯಾಸಗಳಿವೆ ಎಂಬುದನ್ನು ಹೇಳಲು ಸಾಧ್ಯವಾಗುವುದು.
- ಬಣ್ಣ ಹಚ್ಚಿದುದರ ನಿಖರತೆ.

## ವರ್ಕ್ ಶೀಟು 8.2 - ನಿಮಗೆ ಯಾರನ್ನು ಇಷ್ಟ?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯಗಳು** : ಆರೋಗ್ಯ ಆಭ್ಯಾಸಗಳು, ಶುಚಿತ್ವ ಅಭ್ಯಾಸಗಳು ಎಂಬಿವುಗಳ ಕುರಿತು ತಿಳಿಯಬಹುದು. (36)

- ಅನುಭವದ ಆಧಾರದಲ್ಲಿ ಕಂಡುಕೊಂಡವುಗಳನ್ನು ಮಂಡಿಸಲು ಸಾಧ್ಯವಾಗುವುದು. (31)

**ಆಶಯಗಳು** : ಆರೋಗ್ಯಕ್ಕೆ ಶುಚಿತ್ವದ ಅಭ್ಯಾಸಗಳು ಪ್ರಧಾನವಾಗಿವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಸರಿ ಹಾಗೂ ತಪ್ಪಾದ ಆರೋಗ್ಯ ಆಭ್ಯಾಸಗಳ ಕುರಿತು ಚರ್ಚಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಶೀಬಾಳು ತನ್ನ ಉಗುರುಗಳನ್ನು ಬೆಳೆಸಲು ತೀರ್ಮಾನಿಸಿದಳು. ಉಗುರುಗಳು ಉದ್ದುದ್ದವಾದುವು. ಅವುಗಳಿಗೆ ನೈಲ್ ಪೋಲಿಶ್ (ಟ್ಯೂಟೆಕ್ಸ್) ಹಚ್ಚಿದಳು. ಮಗಳೇ, ಅಮ್ಮ ಉಗುರುಗಳನ್ನು ಕತ್ತರಿಸಿ ಕೊಡಲೇ? ಅವಳು ಒಪ್ಪಲಿಲ್ಲ. ಉಗುರುಗಳು ಮತ್ತೂ ಬೆಳೆದವು. ಉಗುರುಗಳೆಡೆಯಲ್ಲಿ ಕಪ್ಪು ಬಣ್ಣ ಕಾಣತೊಡಗಿತು. ಅವಳ ಬೆರಳಿಗೆ ನೊಣಗಳು ಮುತ್ತಿದವು. ಅವಳಿಗೆ ಯಾವುದನ್ನೂ ಸರಿಯಾಗಿ ತೆಗೆಯುವುದಕ್ಕೂ ಆಗುವುದಿಲ್ಲ. ಒಂದು ದಿನ ಅವಳು ನೀರಿನಲ್ಲಿ ಕೈ ಮುಳುಗಿಸಿದಳು. ಆಗ ನೀರಿನ ಬಣ್ಣವೇ ಬದಲಾಯಿತು. ಅಮ್ಮಾ.. ಅಮ್ಮಾ.. ನಾನು ಕೈ ಮುಳುಗಿಸಿದಾಗ ನೀರಿನ ಬಣ್ಣವು ಕಪ್ಪಾಯಿತು. ಆದೂ... ನಿನ್ನ ಉಗುರುಗಳ ಎಡೆಯಲ್ಲಿರುವ ಮಣ್ಣು. ನಾನು ಅವತ್ತೇ ಹೇಳಿಲ್ವೇ? ಅವಳಿಗೆ ನಾಚಿಕೆಯಾಯಿತು. ಉಗುರು ಕತ್ತರಿಸಿದಳು. ಈಗ ನೊಣಗಳು ಮುತ್ತುವುದಿಲ್ಲ. ಈಗ ಎಷ್ಟು ಚಂದವಾಗಿದೆ ಎಂದು ಅಮ್ಮನಲ್ಲಿ ಹೇಳಿದಳು. ಅಮ್ಮ ನಕ್ಕಳು.

- ಇದರಂತೆ ಹಲ್ಲುಜ್ಜಲು ಉದಾಸೀನ ತೋರುವ ಮಗುವಿನ ಕಥೆಯನ್ನು ಅಧ್ಯಾಪಿಕೆ ಹೇಳುವರು.

ವರ್ಕ್ ಶೀಟು 8.2 ನಿಮಗೆ ಯಾರನ್ನು ಇಷ್ಟ? - ನೀಡುವುದು.

**ಮೌಲ್ಯಮಾಪನ** : ಉತ್ತಮ ಅಭ್ಯಾಸಗಳನ್ನು ಗುರುತಿಸಲು ಸಾಧ್ಯವಾಗಿದೆ.

- ಸೂಕ್ತವಾದ ಬಣ್ಣವನ್ನು ನೀಡಲಾಗಿದೆ.

## ವರ್ಕ್ ಶೀಟು 8.3 - ಯಾರು ಸರಿ?

**ವಿಕಾಸ ಮಂಡಲ** : ವೈಜ್ಞಾನಿಕ ವಿಕಾಸ

**ಸಾಮರ್ಥ್ಯಗಳು** : ಆರೋಗ್ಯ ಅಭ್ಯಾಸಗಳು, ಶುಚಿತ್ವ ಅಭ್ಯಾಸಗಳು ಎಂಬಿವುಗಳನ್ನು ತಿಳಿಯುವುದು. (36)

- ಕಂಡುಕೊಳ್ಳುವ ಚಟುವಟಿಕೆಗಳಲ್ಲಿ ಏರ್ಪಡುವುದಕ್ಕೂ ಅನುಭವದ ಆಧಾರದಲ್ಲಿ ನಿಗಮನಗಳನ್ನು ಮಂಡಿಸುವುದಕ್ಕೂ ಸಾಧ್ಯವಾಗುವುದು. (31)

**ಆಶಯ** : ಆರೋಗ್ಯಕ್ಕೆ ಶುಚಿತ್ವ ಅಭ್ಯಾಸಗಳು ಪ್ರಧಾನವಾಗಿವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಆರೋಗ್ಯ ಅಭ್ಯಾಸಗಳ ಕುರಿತು ಚರ್ಚೆ.

**ಪ್ರಕ್ರಿಯೆ** :

**ಆಟ** : ಚೇ.. ಚೇ.. ಚೇ.. ಆಟ

: ಅಧ್ಯಾಪಿಕೆಯು ಒಂದೊಂದೇ ವಿಷಯಗಳನ್ನು ಹೇಳುವರು. ಸರಿಯಲ್ಲದ್ದನ್ನು ಹೇಳುವಾಗ ಚೇ.. ಚೇ.. ಚೇ.. ಎಂದು ಹೇಳುವುದು. (ವಿಷಯಗಳನ್ನು ಬೇಗ ಬೇಗ ಹೇಳಬೇಕು. ಚೇ..ಚೇ..ಚೇ ತಪ್ಪಾಗಿ ಹೇಳಬಾರದು.)

- ಬೆಳಗ್ಗೆ ಸ್ನಾನ ಮಾಡಿದೆನು.

- ಹಲ್ಲುಜ್ಜದೆ ದೋಸೆ ತಿಂದೆನು. (ಚೇ.. ಚೇ.. ಚೇ..)

- ದೋಸೆ ತಿಂದು ಹಲ್ಲುಜ್ಜಿದೆನು. (ಚೇ.. ಚೇ.. ಚೇ..)

- ಕೈಗಳನ್ನು ಸಾಬೂನು ಹಾಕಿ ತೊಳೆದೆನು.

- ನೆಲದಲ್ಲಿ ಬಿದ್ದ ಆಹಾರವನ್ನು ಬಾಚಿ ತೆಗೆದು ತಿಂದೆನು. (ಚೇ.. ಚೇ.. ಚೇ..)

- ಪಾತ್ರೆ ತೊಳೆದೆನು.

- ತೊಳೆಯದ ಪಾತ್ರೆಯಲ್ಲಿ ಅನ್ನ ಬಡಿಸಿದೆನು. (ಚೇ.. ಚೇ.. ಚೇ..)

- ಉಗುರು ತೆಗೆದೆನು.

- ಸ್ನಾನ ಮಾಡದೆ ಶಾಲೆಗೆ ಹೋದೆನು. (ಚೇ.. ಚೇ.. ಚೇ..)

**ಚರ್ಚೆ** : ನಂತರ ಮೈಮಿಂಗ್, ಬೆಳಗ್ಗೆ ಏಳುವುದರಿಂದ ತೊಡಗಿ ಶಾಲೆಗೆ ಹೋಗುವ ವರೆಗಿನ ಪ್ರಧಾನ ಘಟನೆಗಳು.

ವರ್ಕ್ ಶೀಟು 8.3 ಯಾರು ಸರಿ? - ನೀಡುವುದು.

: ಚಿತ್ರದಲ್ಲಿ ಕಾಣುವ ಕಾರ್ಯಗಳ ಕುರಿತು ಮಾತನಾಡುವುದು.

**ಚಿತ್ರ ಓದು** : ಮೇಲಿನ ಚಿತ್ರ ಮತ್ತು ಕೆಳಗಿನ ಚಿತ್ರಕ್ಕೆ ಏನಾದರೂ ವ್ಯತ್ಯಾಸವಿದೆಯೇ?

- ವ್ಯತ್ಯಾಸವೇನು?

- ಸರಿಯಾದ ಆರೋಗ್ಯ ಅಭ್ಯಾಸಗಳನ್ನು ಪಾಲಿಸುವುದು ಯಾವ ಚಿತ್ರದಲ್ಲಿರುವ ಮಗು?

- ಆ ಚಿತ್ರವನ್ನು ಕಂಡುಹಿಡಿದು ಬಲಬದಿಯ ಕೋಣೆಗೆ ಇಷ್ಟವಿರುವ ಬಣ್ಣ ಹಚ್ಚಿರಿ.

**ಮೌಲ್ಯಮಾಪನ** : ಸರಿಯಾದ ಆಹಾರ ಅಭ್ಯಾಸಗಳನ್ನು ಪಾಲಿಸುವ ಚಿತ್ರವನ್ನು ಕಂಡುಹಿಡಿದು ಗುರುತು ಹಾಕಲಾಗಿದೆ.

# ಥೀಂ 9 – ಹೂಗಳು, ಹೂದೋಟ, ಚಿಟ್ಟೆಗಳು

**ಪದ್ಯ, ಅಭಿನಯ ಗೀತೆ ಎಂಬೀ ಸಂಕೇತಗಳನ್ನು ಸೇರಿಸಿ ಇಲ್ಲಿ ವರ್ಕ್ ಶೀಟುಗಳನ್ನು ಮಂಡಿಸಲಾಗಿದೆ. ತಲ್ಲೀನವಾಗಿ ಹಾಡಿದ ನಂತರ ಆ ಅನುಭವದ ಮುಂದುವರಿಕೆಯಾಗಿ ವರ್ಕ್ ಶೀಟುಗಳನ್ನು ಪೂರ್ತಿಗೊಳಿಸಬೇಕು. ವರ್ಕ್ ಶೀಟುಗಳನ್ನು ಮೌಲ್ಯಮಾಪನ ಮಾಡಿ, ಸಾಮರ್ಥ್ಯ ವಿಕಾಸವನ್ನು ದಾಖಲಿಸಲು ಸಾಧ್ಯವಾಗಬೇಕು. ಹಲವು ವಿಕಾಸ ಮಂಡಲಗಳಲ್ಲಿ ಈ ಮೊದಲು ಪರಿಗಣಿಸಿದ ಎಲ್ಲಾ ವರ್ಕ್ ಶೀಟು ಸಾಧ್ಯತೆಗಳನ್ನೂ ಇತರ ಚಟುವಟಿಕೆಗಳನ್ನೂ ಪರಿಗಣಿಸಿಕೊಂಡು ಪೋರ್ಟ್ ಫೋಲಿಯೋ ಇರಬೇಕು. ಪೋರ್ಟ್ ಫೋಲಿಯೋದ ವರ್ಕ್ ಶೀಟುಗಳ ಮೇಲೆ ಅಧ್ಯಾಪಿಕೆಯು ಪ್ರಚೋದನಾತ್ಮಕವಾದ ಮೌಲ್ಯಮಾಪನ ಟಿಪ್ಪಣಿಗಳನ್ನು ಬರೆಯಬಹುದು.**

**ಚಟುವಟಿಕಾ ಕ್ರಮ**

1. ಹೂಗಳ ಕುರಿತಾದ ಅಭಿನಯ ಗೀತೆ.

↓

2. ಆಖ್ಯಾನ + ವರ್ಕ್ ಶೀಟು 9.1 ಬಣ್ಣ ಹಚ್ಚುವ, ಚಂದಗೊಳಿಸುವ – ನೀಡುವುದು.

↓

3. ಬಯಲು ಪ್ರವಾಸ (ಹೂಗಳನ್ನೂ ಚಿಟ್ಟೆಗಳನ್ನೂ ನಿರೀಕ್ಷಣೆ ಮಾಡುವುದು.)

↓

4. ಚಿಟ್ಟೆಗಳ ಕಟೌಟುಗಳ ಪ್ರದರ್ಶನ.

↓

5. ಚಿಟ್ಟೆಗಳ ಕುರಿತು ಹಾಡುವುದು.

↓

6. ವರ್ಕ್ ಶೀಟು 9.2 ಚಿಟ್ಟೆಯನ್ನು ಚಿತ್ರಿಸುವ – ನೀಡುವುದು.

↓

7. ಆಖ್ಯಾನ (ಚಿಟ್ಟೆಗಳು ಹೂಗಳ ಮೇಲೆ ಕುಳಿತುಕೊಳ್ಳುತ್ತವೆ. ಪರಿಮಳ ಇರುವವುಗಳು ಮತ್ತು ಪರಿಮಳ ಇಲ್ಲದವುಗಳು)

8. ಪದ್ಯ, ವರ್ಕ್ ಶೀಟು 9.3 ಚಿತ್ರ ಪೂರ್ತಿಗೊಳಿಸುವ – ಬಣ್ಣ ಹಚ್ಚುವುದು.

↓

9. ಹೂಗಳು, ಚಿಟ್ಟೆಗಳು ಮೊದಲಾದುವುಗಳಿಗೆ ಸಂಬಂಧಿಸಿದ ಪದ್ಯಗಳ ಆಡಿಯೋ, ವಿಡಿಯೋಗಳನ್ನು ಪ್ರದರ್ಶಿಸುವುದು.

↓

10. ಅಭಿನಯಿಸಿ ಹಾಡುವುದು.

## ವರ್ಕ್ ಶೀಟು 9.1 - ಬಣ್ಣ ಹಚ್ಚುವ, ಚಂದ ಮಾಡುವ.

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ
* ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯಗಳು** : 1. ಚಿತ್ರಗಳು, ವಸ್ತುಗಳು, ಪ್ರಕೃತಿ ಎಂಬಿವುಗಳನ್ನು ಕಂಡು ಆಶಯಗಳನ್ನು ಹೇಳಲು ಸಾಧ್ಯವಾಗುವುದು. (14)
2. ಪಂಚೇಂದ್ರಿಯಗಳ ಸಹಾಯದಿಂದ ವಸ್ತುಗಳನ್ನು ನಿರೀಕ್ಷಣೆ ಮಾಡಿ, ಪ್ರತ್ಯೇಕತೆಗಳನ್ನು ಕಂಡುಕೊಳ್ಳುವುದಕ್ಕೂ ಮೌಖಿಕವಾಗಿ ಮಂಡಿಸುವುದಕ್ಕೂ ಸಾಧ್ಯವಾಗುವುದು. (30)
3. ಭಾವವನ್ನು ಅರ್ಥೈಸಿಕೊಂಡು ಪದ್ಯಗಳನ್ನು ಮಂಡಿಸಲು ಸಾಧ್ಯವಾಗುವುದು. (17)
(ಶಬ್ದ ವ್ಯತಿಯಾನ, ಆಂಗಿಕ ಚಲನೆ, ತಾಳ, ರಾಗ, ಚಲನೆ)

**ಆಶಯಗಳು** : ಹಲವು ಬಣ್ಣದ ಹೂಗಳಿವೆ.
- ಹೂವುಗಳಿಗೆ ಚಿಟ್ಟೆಗಳು ಬರುತ್ತವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಹೂದೋಟದ ಸಂದರ್ಶನದ ಬಳಿಕ

**ಪ್ರಕ್ರಿಯೆ** : ಸೇಂಡ್ ಟ್ರೇಯಲ್ಲಿ ಹೂದೋಟದ ನಿರ್ಮಾಣ ಮಾಡಿದ್ದು / ಹೂದೋಟದ ಚಿತ್ರವನ್ನು ತೋರಿಸುವುದು.

**ಚರ್ಚೆ** : ಹೂವುಗಳು, ಬಣ್ಣಗಳು, ಹೂದೋಟ ಇವುಗಳ ಕುರಿತು ಚರ್ಚೆ.

**ಪದ್ಯ** : ಹೂಗಳ ಕುರಿತಾದ ಪದ್ಯವನ್ನು ಅಧ್ಯಾಪಿಕೆ ಮತ್ತು ಮಕ್ಕಳು ಒಟ್ಟಾಗಿ ಹಾಡುವುದು.

ಹೂಗಳು ನಾವು ಹೂಗಳು
ಕೆಂಪು ರೋಜಾ ಹೂಗಳು
ಹೂಗಳು ನಾವು ಹೂಗಳು
ಬೆಳ್ಳಗೆ ಮಲ್ಲಿಗೆ ಹೂಗಳು
ಹೂಗಳು ನಾವು ಹೂಗಳು
ಹಳದಿಯ ಗೊಂಡೆ ಹೂಗಳು
ಹೂಗಳು ನಾವು ಹೂಗಳು
ಬಗೆ ಬಗೆ ಬಣ್ಣದ ಹೂಗಳು
ಪರಿಮಳ ಸೂಸುವ ಹೂಗಳು

ವರ್ಕ್ ಶೀಟು 9.1 ಬಣ್ಣ ಹಚ್ಚುವ ಚಂದ ಮಾಡುವ – ನೀಡುವುದು.

: ಚಿತ್ರದಲ್ಲಿರುವ ಒಬ್ಬನ ಕುರಿತು ಹಾಡುವೆನು. ಯಾರೆಂದು ಹೇಳಬಹುದೇ?

- ಹೂ ಮಾರುವವ – ಎಂಬ ಪದ್ಯವನ್ನು ಹಾಡುವುದು.

(ಆಟಿಕೆ ಪುಸ್ತಕದ ಪುಟ ಸಂಖ್ಯೆ 207)

**ಚಿತ್ರ ಓದು** : ಚಿಟ್ಟೆಗೆ ಬಣ್ಣ ಹಚ್ಚುವುದು.

- ಹೂದೋಟದಲ್ಲಿ ಬೇರೆ ಯಾರಿದ್ದಾರೆ?
- ದುಂಬಿಗೆ ಬಣ್ಣ ಹಚ್ಚುವುದು.
- ಬೇರೆ ಯಾರೆಲ್ಲ ಇರಬಹುದು?
- ಬಣ್ಣ ಹಚ್ಚುವುದು.
- ಮಕ್ಕಳು ಕಂಡ ಹೂದೋಟದ ಕುರಿತು ಹೇಳುವುದು.

**ಮೌಲ್ಯಮಾಪನ** : ತಾಳಾತ್ಮಕವಾಗಿ ಹಾಡಲು ಸಾಧ್ಯವಾಗಿದೆ.

- ಉಚಿತವಾದ ಬಣ್ಣವನ್ನು ನೀಡಲಾಗಿದೆ.
- ಹೂದೋಟದಲ್ಲಿರುವ ಜೀವಿಗಳನ್ನು ಗುರುತಿಸಲು ಸಾಧ್ಯವಾಗಿದೆ.

## ವರ್ಕ್ ಶೀಟು 9.2 - ಚಿಟ್ಟೆಯ ಚಿತ್ರ ಬಿಡಿಸುವ

**ವಿಕಾಸ ಮಂಡಲ** : * ಭಾಷಾ ವಿಕಾಸ

* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** : 1. ವಸ್ತುಗಳ ಚಿತ್ರಗಳನ್ನು ನಿರೀಕ್ಷಣೆ ಮಾಡಿ ಅಡಗಿರುವ ವಿವರಗಳನ್ನು ಮಂಡಿಸಲು ಸಾಧ್ಯವಾಗುವುದು. (21)

2. ಲೇಖನ ಪೂರ್ವ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು. (13)

**ಆಶಯ** : ಹೂಗಳಿಗೆ ಚಿಟ್ಟೆಗಳು ಬರುತ್ತವೆ.

**ಸಾಮಗ್ರಿಗಳು** : ಪದ್ಯಗಳು, ಚಿಟ್ಟೆಯ ಕಟೌಟುಗಳು.

**ಸಂದರ್ಭ** : ಹೂದೋಟ, ಚಿಟ್ಟೆಗಳು ಇವುಗಳನ್ನು ಕಾಣಲು ಹೋಗುವುದು. (ಬಯಲು ಪ್ರವಾಸ)

- ರೆಕ್ಕೆಗಳ ಸಂಖ್ಯೆ, ಬಣ್ಣ ಇವುಗಳನ್ನು ಹೇಳುವುದು.

**ಪ್ರಕ್ರಿಯೆ** : ಅಧ್ಯಾಪಿಕೆ ಹಲವು ವಿಧದ ಚಿಟ್ಟೆಯ ಕಟೌಟುಗಳನ್ನು ಪ್ರದರ್ಶಿಸುವುದು.

**ಪದ್ಯ** :

ಹೂಗಳ ಮೇಲೆ ಚಿಟ್ಟೆಗಳು
ಜೇನನು ಹೀರುವ ಚಿಟ್ಟೆಗಳು
ಬಣ್ಣ ಬಣ್ಣದ ಚಿಟ್ಟೆಗಳು
ಜೇನನು ಹೀರುವ ಚಿಟ್ಟೆಗಳು

ಗುಂಪಾಗಿ ಹಾಡುವುದು.

ವರ್ಕ್ ಶೀಟು 9.2 ಚಿಟ್ಟೆಯ ಚಿತ್ರ ಬಿಡಿಸುವ – ನೀಡುವುದು.

- ಚಿಟ್ಟೆಯ ಚಿತ್ರ ಪೂರ್ತಿಗೊಳಿಸುವುದು. ಬಣ್ಣ ಹಚ್ಚುವುದು.
- ಚಿಟ್ಟೆಯ ಕುರಿತು ಹೇಳುವುದು.
- ದೊಡ್ಡ ಚಿಟ್ಟೆ- ಹಲವು ಬಣ್ಣಗಳು
- ಹಾರಾಡುವುದು.
- ಕಾಣಲು ತುಂಬಾ ಚಂದ.
- ಮಕ್ಕಳಲ್ಲಿ ಹೇಳಿಸುವುದು.
- ಚಿಟ್ಟೆಗಳ ಚಿತ್ರಗಳ ಪ್ರದರ್ಶನ

**ಮೌಲ್ಯಮಾಪನ** : ವಿಶೇಷತೆಗಳನ್ನು ಹೇಳುವುದು.

- ಚುಕ್ಕೆಗಳ ಮೂಲಕ ಗೆರೆ ಪೂರ್ತಿಗೊಳಿಸುವುದಕ್ಕೂ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು.

## ವರ್ಕ್ ಶೀಟು 9.3 - ಚಿತ್ರ ಪೂರ್ತಿಗೊಳಿಸುವ, ಬಣ್ಣ ಹಚ್ಚುವ.

**ವಿಕಾಸ ಮಂಡಲ** : * ವೈಜ್ಞಾನಿಕ ವಿಕಾಸ
* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯಗಳು** : 1. ಚಿತ್ರಗಳಿಗೆ ಬಣ್ಣ ಹಚ್ಚಲು ಸಾಧ್ಯವಾಗುವುದು. (5)
2. ಗಣಿತ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಾಗುವುದು. (46)
3. ಓದುವಿಕೆಯ ಪೂರ್ವ ಚಟುವಟಿಕೆಗಳಲ್ಲಿ ತೊಡಗಲು ಸಾಧ್ಯವಾಗುವುದು. (14)

**ಆಶಯ** : ಹೂಗಳಿಗೆ ಚಿಟ್ಟೆಗಳು ಬರುತ್ತವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಹೂಗಳ ಹೆಸರು ಹೇಳುವ ಆಟ

- ವೃತ್ತದಲ್ಲಿ ನಿಲ್ಲುವುದು.
- ಒಬ್ಬೊಬ್ಬರಾಗಿ ಹೂವಿನ ಹೆಸರು ಹೇಳಬೇಕು.

**ಪ್ರಕ್ರಿಯೆ** :

**ಆಖ್ಯಾನ** : ಒಂದು ಊರಿನಲ್ಲಿ ಒಬ್ಬ ಹೂವಿನ ತೋಟಗಾರನಿದ್ದನು. ಆತ ತುಂಬಾ ಹೂಗಿಡಗಳನ್ನು ನೆಟ್ಟು ಬೆಳೆಸಿದನು. ಗಿಡಗಳಲ್ಲಿ ಹೂವಾಗುವುದನ್ನು ಕಾಯುತ್ತಾ ಕುಳಿತ. ಹೂಗಳನ್ನೆಲ್ಲಾ ಸಂತೆಯಲ್ಲಿ ಮಾರಬೇಕು. ಇದು ಆತನ ಆಸೆಯಾಗಿತ್ತು. ಆತನ ಮನಸ್ಸಿನಲ್ಲಿರುವ ಈ ವಿಚಾರ ಹೂಗಿಡಗಳಿಗೆ ಗೊತ್ತಾಯಿತು. ಒಂದು ದಿನ ತೋಟದವ ಹೋದಾಗ ಒಳ್ಳೆಯ ಪರಿಮಳ. ಚಿಟ್ಟೆಗಳು ಹಾರಾಡುತ್ತಿವೆ. ಆದರೆ ಎಲ್ಲಿಯೂ ಹೂಗಳನ್ನು ಕಾಣುವುದಿಲ್ಲ. ಹೂವಿನ ಜೇನು ಕುಡಿಯಲು ದುಂಬಿಗಳೂ ಹಕ್ಕಿಗಳೂ ಬರುತ್ತಿವೆ. ಆದರೆ ತೋಟಗಾರನಿಗೆ ಮಾತ್ರ ಹೂಗಳು ಕಾಣಿಸುವುದಿಲ್ಲ. ಇದು ಹೂಗಳು ಹೂಡಿದ ತಂತ್ರವಾಗಿತ್ತು. ತೋಟಗಾರನಿಗೆ ಮಾತ್ರ ಕಾಣಲು ಸಾಧ್ಯವಾಗದಂತೆ ಹೂಗಳು ಅರಳಿದ್ದವು. ನಾನು ಹೂಗಳನ್ನು ಸಂತೆಗೆ ಕೊಂಡೊಯ್ಯಲಾರೆ, ಕೊಯ್ಯಲಾರೆ ಎಂದು ಹೇಳಿದನು. ಇದು ಸತ್ಯವೇ? ಎಂದು ದುಂಬಿಗಳು ಕೇಳಿದವು. ಸತ್ಯ. ಸತ್ಯವೇ? ಹಕ್ಕಿಗಳು ಕೇಳಿದವು. ಸತ್ಯವೇ? ಇದು ಕೇಳಿದ್ದು ಯಾರಾಗಿರಬಹುದು? ಗಿಡಗಳು. ಸತ್ಯ.. ತೋಟಗಾರ ಹೇಳಿದನು. ಹಾಗಾದರೆ ಕಣ್ಣುಮುಚ್ಚು. ತೋಟಗಾರ ಕಣ್ಣು ಮುಚ್ಚಿದನು. ತೆರೆ.. ತೋಟಗಾರ ಕಣ್ಣು ತೆರೆದನು. ಆಹಾ... ಸುಂದರವಾದ ಹೂಗಳು.. ಒಂದೊಂದೇ ಗಿಡಗಳಲ್ಲಿ ಹೂಗಳು ಕಾಣಿಸಿಕೊಂಡವು. ನಿಮಗೂ ಅಡಗಿರುವ ಹೂಗಳನ್ನು ಕಾಣಬೇಡವೇ? ವರ್ಕ್ ಶೀಟು ನೀಡುವುದು. ಬಣ್ಣ ಹಚ್ಚಿ ಹೂಗಳನ್ನು ನೋಡಿರಿ.

ವರ್ಕ್ ಶೀಟು 9.4 ಚಿತ್ರ ಪೂರ್ತಿಗೊಳಿಸುವ, ಬಣ್ಣ ಹಚ್ಚುವ – ನೀಡುವುದು.

- ಚುಕ್ಕಿಗಳ ಮೂಲಕ ಗೆರೆ ಎಳೆದು ಹೂಗಳ ಚಿತ್ರವನ್ನು

ಪೂರ್ತಿಗೊಳಿಸುವುದು.

- ಹೂದೋಟಕ್ಕೂ ಚಿಟ್ಟೆಗಳಿಗೂ ಬಣ್ಣ ನೀಡುವುದು.

- ಹೂಗಳು ಹೆಚ್ಚೋ? ಚಿಟ್ಟೆಗಳು ಹೆಚ್ಚೋ?

- ಹೆಚ್ಚು ಇರುವುದಕ್ಕೆ ಸರಿ ಗುರುತು ಹಾಕುವುದು.

**ಮೌಲ್ಯಮಾಪನ** : ಕೋಣೆಗಳೊಳಗೆ ಮಾತ್ರ ಬಣ್ಣ ಹಚ್ಚಲಾಗಿದೆ.

- ಹೆಚ್ಚು ಇರುವವುಗಳನ್ನು ಕಂಡುಕೊಳ್ಳಲಾಗಿದೆ.

# ಥೀಂ 10 - ಓಣಂ, ರಂಜಾನ್

**ಹೂವಿನ ರಂಗವಲ್ಲಿ ಹಾಕುವುದಕ್ಕೂ ಆಭಿನಯ ಮಾಡುವುದಕ್ಕೂ ಮಕ್ಕಳಿಗೆ ತುಂಬಾ ಇಷ್ಟ. ಮುಖವಾಡ ಧರಿಸಿ ಅಭಿನಯಿಸುವುದೆಂದರೆ ಹೇಳುವುದೇ ಬೇಡ. ಮಹಾಬಲಿಯ ಮುಖವಾಡ ಧರಿಸಿ ಡುಂ.. ಡುಂ.. ತಾಳದೊಂದಿಗೆ ಹಾಡಿ ಕುಣಿದ ನಂತರ ಆಖ್ಯಾನದ ಭಾಗವಾಗಿ ವರ್ಕ್ ಶೀಟ್ ನೀಡಬೇಕು.**

**ಚಟುವಟಿಕಾ ಕ್ರಮ**

1. ಸ್ವತಂತ್ರ ಆಟಗಳಲ್ಲಿ ತೊಡಗುವುದು. (ಉಯ್ಯಾಲೆಯಾಟ, ಚೆಂಡಾಟ)

↓

2. ಓಣಂ ಹಬ್ಬಕ್ಕೆ ಸಂಬಂಧಿಸಿದ ಹಾಡುಗಳನ್ನು ಹಾಡುವುದು.

↓

3. ಆಖ್ಯಾನ + ವರ್ಕ್ ಶೀಟು 10.1 ಹೂ ರಂಗವಲ್ಲಿಗೆ ಬಣ್ಣ ಹಚ್ಚುವ – ನೀಡುವುದು.

↓

4. ಆಖ್ಯಾನ + ವರ್ಕ್ ಶೀಟು 10.2 ವ್ಯತ್ಯಾಸ ಕಂಡುಹಿಡಿದು ಹೇಳುವ – ನೀಡುವುದು.

↓

5. ಕಥಾ ಗೀತೆಗಳು / ಸಂಭಾಷಣಾ ಹಾಡುಗಳು ಆಲಿಸುವುದು. (ಆಡಿಯೋ / ವಿಡಿಯೋ)

↓

6. ವರ್ಕ್ ಶೀಟು 10.3 ಮದರಂಗಿ ಹಾಕುವ – ನೀಡುವುದು.

## ವರ್ಕ್ ಶೀಟು 10.1 - ಹೂ ರಂಗವಲ್ಲಿಗೆ ಬಣ್ಣ ಹಚ್ಚುವ

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ

* ಸೃಜನಾತ್ಮಕ ಸೌಂದರ್ಯಾತ್ಮಕ ವಿಕಾಸ

**ಸಾಮರ್ಥ್ಯಗಳು** : ಸ್ವತಂತ್ರವಾಗಿ ಚಿತ್ರ ರಚಿಸಿ ಬಣ್ಣ ಹಚ್ಚಲು ಸಾಧ್ಯವಾಗುವುದು. (5)

- ಪ್ರಕೃತಿಯನ್ನು ಆಸ್ವಾದಿಸುವುದಕ್ಕೂ ಚಿತ್ರದ ಮೂಲಕ ಪ್ರಕಟಪಡಿಸುವುದಕ್ಕೂ ಬಣ್ಣ ಹಚ್ಚುವುದಕ್ಕೂ ಸಾಧ್ಯವಾಗುವುದು. (19)

**ಆಶಯಗಳು** : ಓಣಂ, ರಂಜಾನ್ ಮೊದಲಾಗಿ ಹಲವಾರು ದಿನಾಚರಣೆಗಳಿವೆ.

- ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳೂ ಇವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಓಣಂ ಹಬ್ಬಕ್ಕೆ ಸಂಬಂಧಿಸಿದ ಅನುಭವಗಳನ್ನು ಹೇಳುವುದು.

**ಪ್ರಕ್ರಿಯೆ** :

**ಆಖ್ಯಾನ** : ಹೂಗಳ ಸಮ್ಮೇಳನ. ಹಲವು ಮನೆಗಳಲ್ಲಿ ಹೂಗಳ ವಾಸ. ಗಾಳಿ ಬೀಸುವಾಗ ಹಲವು ವಿಧದ ಪರಿಮಳಗಳು ಬರುವುದು. ಹೂಗಳು ಪರಸ್ಪರ ತಿಳಿಯುತ್ತಿದ್ದುದು ಇದರಿಂದಾಗಿ ಮಾತ್ರ. ಕೆಲವೊಮ್ಮೆ ಮಕ್ಕಳು ಮಾಲೆ ಮಾಡಿ ಮುಡಿಯುವುದರಿಂದಲೂ ಕೆಲವು ಹೂಗಳನ್ನು ಒಟ್ಟಾಗಿ ಸೇರಿಸಿ ಕಟ್ಟುವುದರಿಂದಲೂ ಹೂಗಳನ್ನು ಒಟ್ಟು ಸೇರಿಸಲಾಗುತ್ತದೆ. ಪರಸ್ಪರ ಕಾಣಲು ಹೂಗಳಿಗೆ ಬಹಳ ಆಸೆ. ಅವು ಗಾಳಿಯೊಡನೆ ವಿಷಯ ಹೇಳಿದುವು. ಗಾಳಿಯು ಒಂದು ಬುಟ್ಟಿಯಲ್ಲಿ ಎಲ್ಲ ಹೂಗಳನ್ನು ತೆಗೆದು ಒಂದೆಡೆಯಲ್ಲಿ ಇರಿಸಿತು. ಅಯ್ಯೋ, ನಮಗೆ ಪರಸ್ಪರ ಕಾಣಲು ಸಾಧ್ಯವಾಗುವುದಿಲ್ಲವಲ್ಲಾ.. ನನಗೆ ಉಸಿರು ಕಟ್ಟುತ್ತಿದೆ. ಹೂಗಳು ಹೀಗೆಲ್ಲಾ ಹೇಳಿದುವು. ಗಾಳಿ ಬೀಸುತ್ತಾ ತಿರುಗಿತು. ಹೂಗಳನ್ನು ವೃತ್ತಾಕೃತಿಯಲ್ಲಿ ಮಾಡಿತು. ಒಂದೊಂದು ತಟ್ಟಿನಲ್ಲಿ ಅವುಗಳನ್ನು ಇರಿಸಿತು. ಈಗ ಅವುಗಳಿಗೆ ಪರಸ್ಪರ ಎಲ್ಲರನ್ನೂ ಕಾಣಬಹುದು. ಹೂಗಳಿಗೆ ಸಂತೋಷವಾಯಿತು. ಈ ಸಂದರ್ಭದಲ್ಲಿ ಆ ದಾರಿಯಾಗಿ ಬಂದ ಮಕ್ಕಳು ಈ ಸುಂದರವಾದ ದೃಶ್ಯವನ್ನು ಕಂಡರು. ಅವರು ಊರವರನ್ನು ಕರೆದು ತೋರಿಸಿದರು. ಹೂಗಳ ಆಭಿಲಾಷೆಯನ್ನು ಪೂರೈಸುವುದಕ್ಕಾಗಿ ಮಕ್ಕಳು ಮತ್ತು ಮನೆಯವರು ಎಲ್ಲ ಮನೆಗಳಲ್ಲೂ ಹೂ ರಂಗವಲ್ಲಿ ಹಾಕಿದರು.

: ಪೂವಲಿ ಅಂದಗೊಳಿಸಿರಿ - ವರ್ಕ್ ಶೀಟು ನೀಡುವುದು.

ವರ್ಕ್ ಶೀಟು 10.1 ಪೂವಲಿಗೆ ಬಣ್ಣ ಹಚ್ಚುವ – ನೀಡುವುದು.

: ಚಿತ್ರದಲ್ಲಿ ಕಾಣುವುದನ್ನು ಹೇಳುವುದು.

- ಪೂವಲಿಗೆ ಬಣ್ಣ ಹಚ್ಚುವುದು.

- ಪೂವಲಿಯನ್ನು ಪ್ರದರ್ಶಿಸುವುದು.

**ಮೌಲ್ಯಮಾಪನ** : ಸೂಕ್ಷ್ಮವಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು.

- ಚಿತ್ರದ ಆಕರ್ಷಣೆ

## ವರ್ಕ್ ಶೀಟು 10.2 - ವ್ಯತ್ಯಾಸ ಕಂಡುಹಿಡಿದು ಹೇಳುವ

**ವಿಕಾಸ ಮಂಡಲ** : * ದೈಹಿಕ ಚಲನಾತ್ಮಕ ವಿಕಾಸ

* ವೈಜ್ಞಾನಿಕ ವಿಕಾಸ

**ಸಾಮರ್ಥ್ಯಗಳು** : 1. ವಸ್ತುಗಳು / ಚಿತ್ರಗಳನ್ನು ನಿರೀಕ್ಷಣೆ ಮಾಡಿ ವ್ಯತ್ಯಾಸಗಳನ್ನು ಕಂಡುಹಿಡಿದು ಹೇಳಲು ಸಾಧ್ಯವಾಗುವುದು.(33)

2. ಸ್ವಂತವಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು. (5)

**ಆಶಯ** : ಓಣಂ, ರಂಜಾನ್ ಮೊದಲಾಗಿ ಹಲವಾರು ದಿನಾಚರಣೆ (ಹಬ್ಬ) ಗಳಿವೆ. ಪ್ರತಿಯೊಂದಕ್ಕೂ ಅದರದ್ದೇ ಆದ ವಿಶೇಷತೆಗಳು ಇವೆ.

**ಸಾಮಗ್ರಿಗಳು** : ಕ್ರಯೋನ್ಸ್

**ಸಂದರ್ಭ** : ಓಣಂ ಹಬ್ಬಕ್ಕೆ ಸಂಬಂಧಿಸಿದ ಪದ್ಯಗಳನ್ನು ಮಕ್ಕಳು ಮತ್ತು ಅಧ್ಯಾಪಿಕೆ ಹಾಡಿ ಅಬಿನಯಿಸುವುದು.

**ಪ್ರಕ್ರಿಯೆ** :

**ಆಖ್ಯಾನ** : ಮಳೆ ಕಡಿಮೆಯಾಯಿತು. ಹೂಗಳು ಅರಳಿದವು. ಬೆಳದಿಂಗಳು ಹರಡಿತು. ಓಣಂ ಹಬ್ಬ ಬಂತು. ಮಕ್ಕಳು ಉತ್ಸಾಹ ಭರಿತರಾದರು. ಉಯ್ಯಾಲೆ ಕಟ್ಟಿದರು. ತಿಂಡಿಗಳನ್ನು ತಿಂದರು. ಚೆಂಡಾಟವಾಡಿದರು. ಪದ್ಯ ಹಾಡಿದರು. ಹಿರಿಯರು ಮಹಾಬಲಿಯ ವೇಷ ಹಾಕಿದರು. ಚೆಂಡೆ ಬಡಿಯುತ್ತಾ ರಸ್ತೆಯಲ್ಲಿ ನಡೆದರು. ಡುಂ.. ಡುಂ.. ಡುಂ.. ಡುಂ.. ಈ ಸಮಯದಲ್ಲಿ ನಿಜವಾದ ಮಾವೇಲಿ ಪೂಜೆಗಳನ್ನು ಕಾಣಲು ಬರುತ್ತಿದ್ದರು.

ಆಹಾ.. ಅಲ್ಲಿ ನೋಡಿ.. ಮತ್ತೊಂದು ಮಹಾಬಲಿ..

ಮಹಾಬಲಿಯು, ಎದುರಿನಿಂದಾಗಿ ಬಂದ ಮಹಾಬಲಿಯ ಮುಂದೆ ನಿಂತನು. ಇಬ್ಬರೂ ಪರಸ್ಪರ ನೋಡಿದರು. ಚೆಂಡೆ ಬಡಿಯುವವರು ಮತ್ತೂ ಜೋರಾಗಿ ಬಡಿದರು.

ಡುಂ.. ಡುಂ.. ಡುಂ.. ಡುಂ..

ಡುಂಡಡ.. ಡುಂ.. ಡುಂ..

ಡುಂಡಕ್ಕಂ.. ಡುಂ.. ಡುಂ..

ಡುಂಡಕ್ಕಂ.. ಡುಂ.. ಡುಂ..

ಡುಂಡಕ್ಕಂ.. ಡುಂಡಕ್ಕಂ..

ಡುಂಡಡ.. ಡುಂ.. ಡುಂ (ಅಭಿನಯ)

: ಮಹಾಬಲಿಯ ಎದುರಿನಿಂದಾಗಿ ಬಂದ ಮಹಾಬಲಿ ಕೇಳಿದನು. ನೀವು ಯಾರು? ಎಲ್ಲಿಂದ ಬರುತ್ತಿದ್ದೀರಿ?

ನಾನು ಮಹಾಬಲಿ.. ಪಾತಾಳದಿಂದ ಬರುತ್ತಿದ್ದೇನೆ.. ನೀನು ಯಾರು? ಮಹಾಬಲಿ... ಎದುರಿನಲ್ಲಿರುವ ಮಹಾಬಲಿಯೊಡನೆ ಕೇಳಿದನು.

ನಾನು... ರಾಮಕೃಷ್ಣ.. ಮನೆಯಿಂದ ಬರುತ್ತಿದ್ದೇನೆ. ಮಹಾಬಲಿಯು ಕಟಕಟನೆ ನಕ್ಕನು. ರಾಮಕೃಷ್ಣನೂ ನಕ್ಕನು. ಮಕ್ಕಳೂ ಬಿದ್ದು ಬಿದ್ದು ನಕ್ಕರು. ಇಬ್ಬರೂ ಒಂದೇ ರೀತಿ ಕಾಣಿಸುತ್ತಾರೆ. ಅವರು ಪರಸ್ಪರ ಹೇಳಿದರು. ಆದರೂ ಕೆಲವೊಂದು ವ್ಯತ್ಯಾಸಗಳಿವೆ ಕಂಡುಹಿಡಿಯಬಹುದೇ?

ವರ್ಕ್ ಶೀಟು 10.2 ವ್ಯತ್ಯಾಸ ಕಂಡುಹಿಡಿದು ಹೇಳುವ – ನೀಡುವುದು.

: ವರ್ಕ್ ಶೀಟು ವಿತರಿಸುವುದು.

**ಚಿತ್ರ ಓದು** : ಚಿತ್ರದಲ್ಲಿ ಕಾಣುವುದನ್ನು ಹೇಳುವುದು.

- ಮಹಾಬಲಿಯು ನಿಂತಿರುವುದು ಎಲ್ಲಿ?
- ಮಹಾಬಲಿಯ ಕೈಯಲ್ಲಿ ಏನಿದೆ?
- ಒಂದನೇ ಚಿತ್ರ ಮತ್ತು ಎರಡನೇ ಚಿತ್ರ ಒಂದೇ ರೀತಿ ಇದೆಯೇ?
- ಯಾವೆಲ್ಲ ವ್ಯತ್ಯಾಸಗಳು ಇವೆ?
- ಚಿತ್ರಕ್ಕೆ ಬಣ್ಣ ಹಚ್ಚಿ ಪ್ರದರ್ಶಿಸುವುದು.

**ಮೌಲ್ಯಮಾಪನ** : ಚಿತ್ರದಲ್ಲಿ ಕಾಣುವುದನ್ನು ಹೇಳಲು ಸಾಧ್ಯವಾಗುವುದು.

- ವ್ಯತ್ಯಾಸಗಳನ್ನು ಹೇಳಲು ಸಾಧ್ಯವಾಗುವುದು.
- ಬಣ್ಣ ಹಚ್ಚಿದುದರಲ್ಲಿರುವ ನಿಖರತೆ.

## ವರ್ಕ್ ಶೀಟು 10.3 - ಮದರಂಗಿ ಹಾಕುವ

**ವಿಕಾಸ ಮಂಡಲ :** * ವೈಜ್ಞಾನಿಕ ವಿಕಾಸ

* ದೈಹಿಕ ಚಲನಾತ್ಮಕ ವಿಕಾಸ

**ಸಾಮರ್ಥ್ಯ** : ಚಿತ್ರಗಳಿಗೆ ಸ್ವಂತವಾಗಿ ಬಣ್ಣ ಹಚ್ಚಲು ಸಾಧ್ಯವಾಗುವುದು.(5)

**ಆಶಯ** : ಓಣಂ, ರಂಜಾನ್ ಮೊದಲಾಗಿ ಹಲವು ವಿಧದ ಹಬ್ಬಗಳಿವೆ.

- ಪ್ರತಿಯೊಂದಕ್ಕೂ ಅದರದ್ದೇ ಆದ ಪ್ರತ್ಯೇಕತೆಗಳಿವೆ.

**ಸಾಮಗ್ರಿಗಳು** : ಮದರಂಗಿ, ಕ್ರಯೋನ್ಸ್

**ಸಂದರ್ಭ** : ಹಬ್ಬಗಳಿಗೆ ಸಂಬಂಧಿಸಿದ ಅನುಭವಗಳನ್ನು ಹೇಳುವುದು.

**ಪ್ರಕ್ರಿಯೆ** :

**ಆಖ್ಯಾನ** :

ಮದರಂಗಿ ತೋಟದ ಮರಿಗಿಳಿಯೇ,
ಕಪ್ಪು ಬಳೆ ಹಾಕಿದ ಕೈಗಳನ್ನು
ಮದರಂಗಿ ಹಾಕಿದ ಕೈಗಳನ್ನು
ನೋಡಿದೆಯಾ ನೋಡಿದೆಯಾ ಮರಿಗಿಳಿಯೇ
ಕೆಂಪು ಬಣ್ಣದ ಮದರಂಗಿ
ಕಂಗೊಳಿಸುವ ಮದರಂಗಿ
ಮುತ್ತಿನ ಬಳೆಯ ಕೈಗಳಲ್ಲಿ
ನೋಡಿದೆಯಾ ನೋಡಿದೆಯಾ ಮರಿಗಿಳಿಯೇ
ಮದರಂಗಿ ತೋಟದ ಮರಿಗಿಳಿಯೇ

: ಪದ್ಯ ಹಾಡುವುದು. ಮದರಂಗಿ ಹಚ್ಚಿದ ಅನುಭವ ಇದ್ದವರಲ್ಲಿ ಹೇಳಿಸುವುದು.

ವರ್ಕ್ ಶೀಟು 10.3 ಮದರಂಗಿ ಹಚ್ಚುವ – ನೀಡುವುದು.

: ಚಿತ್ರವನ್ನು ನೋಡಿ ಎಲ್ಲರೂ ಅವರದ್ದೇ ಆದ ರೀತಿಯಲ್ಲಿ ಚಿತ್ರ ಮಾಡುವರು. ನಂತರ ಪದ್ಯವನ್ನು ಪುನಃ ಹಾಡುವುದು. ಕೈಗಳಲ್ಲಿ ಮದರಂಗಿ ಹಚ್ಚಲೂ ಬೇಕು. ಮದರಂಗಿ ಹಚ್ಚಿದ ಕೈಗಳ ಚಿತ್ರಗಳನ್ನು ನೋಡಿ ಸಂಭಾಷಣೆ ನಡೆಸುವುದು. ಕೈಗಳ ಕಟೌಟ್ / ಮಕ್ಕಳ ಕೈಗಳನ್ನು ಕಾಗದದಲ್ಲಿ ಇರಿಸಿ ಔಟ್ ಲೈನ್ ಹಾಕಿ ನೀಡುವುದು. ಅದರೊಳಗೆ ಅವರಿಗೆ ಇಷ್ಟವಿರುವಂತೆ ಮದರಂಗಿ ಚಿತ್ರಗಳನ್ನು ಬಿಡಿಸುವುದು.

**ಮೌಲ್ಯಮಾಪನ** : ಚಿತ್ರದಲ್ಲಿ ಹೆಚ್ಚಿರುವ ವಸ್ತುಗಳನ್ನು ಕಂಡುಹಿಡಿದು ವೃತ್ತ ಹಾಕಲಾಗಿದೆ.

- ಸೂಕ್ತವಾದ ಬಣ್ಣ ಹಚ್ಚಲಾಗಿದೆ.
- ಬಣ್ಣ ಹಚ್ಚಿದುದರ ಚಂದ.

::::::::::::::::::::::::::::::::::::::::::::::::